ಕರ್ನಾಟಕ ಸರ್ಕಾರ

## ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

**1958ರ ಕರ್ನಾಟಕ ಅಧಿನಿಯಮ ಸಂಖ್ಯೆ 30**

# ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958
# ಮತ್ತು
# ಕರ್ನಾಟಕ ಮನೋರಂಜನಾ ತೆರಿಗೆ ನಿಯಮಗಳು, 1959

**(ಕರ್ನಾಟಕ ಮನೋರಂಜನಾ (ತಿದ್ದುಪಡಿ) ಅಧಿನಿಯಮ, 1983 (1985ರ 3) ಮತ್ತು 1985 (1985ರ 22) ರ ವರೆಗೆ ತಿದ್ದುಪಡಿ ಒಳಗೊಂಡಂತೆ)**

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.
1987

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

1958ರ ಕರ್ನಾಟಕ ಅಧಿನಿಯಮ ಸಂಖ್ಯೆ 30

# ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958
# ಮತ್ತು
# ಕರ್ನಾಟಕ ಮನೋರಂಜನಾ ತೆರಿಗೆ ನಿಯಮಗಳು, 1959

**(ಕರ್ನಾಟಕ ಮನೋರಂಜನಾ (ತಿದ್ದುಪಡಿ) ಅಧಿನಿಯಮ, 1983 (1985ರ 3) ಮತ್ತು 1985 (1985ರ 22) ರ ವರೆಗೆ ತಿದ್ದುಪಡಿ ಒಳಗೊಂಡಂತೆ)**

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.
1987

## ವಿಷಯಾನುಕ್ರಮಣಿಕೆ

ಪುಟಸಂಖ್ಯೆ


1. ಚಿಕ್ಕ ಹೆಸರು ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಮನೋರಂಜನೆಗಳಿಗೆ ಪ್ರವೇಶಕ್ಕಾಗಿನ ಸಂದಾಯದ ಮೇಲೆ ತೆರಿಗೆ
3ಕ. ಅಧಿಭಾರವನ್ನು ವಿಧಿಸುವುದು
3ಗ. ಕೆಲವು ಚಲನಚಿತ್ರಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ
4. ಚಲನ ಚಿತ್ರ ಪ್ರದರ್ಶನಗಳ ಮೇಲೆ ಹೆಚ್ಚಿನ ತೆರಿಗೆ
4ಕ. ಕೆಲವು ಸ್ಥಳಗಳಲ್ಲಿ ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆ
5. ಮನೋರಂಜನೆಗಳಿಗೆ ಪ್ರವೇಶ
6. ತೆರಿಗೆ ಸಂದಾಯದ ರೀತಿ
6ಕ. ವಿವರ ಪಟ್ಟಿಕೆಗಳು
6ಖ. ನಿರ್ಧಾರಣೆಯಿಂದ ತಪ್ಪಿಸಿಕೊಂಡ ಪ್ರವೇಶಕ್ಕಾಗಿನ ಸಂದಾಯ ಇತ್ಯಾದಿ
7. ವಿನಾಯಿತಿಗಳು
8. ಕೆಲವು ಪ್ರಕರಣಗಳಲ್ಲಿ ಮರುಪಾವತಿಗಳು
8ಕ. ತೆರಿಗೆ ಇತ್ಯಾದಿಗಳನ್ನು ಪೂರ್ಣಾಂಕಕ್ಕೆ ತರುವುದು
9. ತೆರಿಗೆಯ ಸಂದಾಯ ಮತ್ತು ವಸೂಲಿ
10. ಪರಿಶೀಲನೆ
11. ಸಂದಾಯ ಮಾಡದೆ ಕೆಲವು ಅಧಿಕಾರಿಗಳ ಪ್ರವೇಶ
12. ದಂಡಗಳು
12ಕ. ಕೆಲವು ಪ್ರಕರಣಗಳ ಸಂಕ್ಷಿಪ್ತ ವಿಲೆ
13. ಅಪರಾಧಗಳ ರಾಜಿ
14. ನಿರ್ದಿಷ್ಟ ವ್ಯವಹರಣೆಯ ಪ್ರತಿ ನಿಷೇಧ
15. ನಿರ್ದಿಷ್ಟ ದಾವೆಗಳು ಮತ್ತು ಪ್ರಾಸಿಕ್ಯೂಷನ್‌ಗಳಿಗೆ ಕಾಲ ಪರಿಮಿತಿ
16. ರಾಜ್ಯ ಸರ್ಕಾರದ ನಿರ್ದಿಷ್ಟ ಅಧಿಕಾರಿಗಳ ಪ್ರತ್ಯಾಯೋಜನೆ
17. ಸ್ಥಳೀಯ ಪ್ರಾಧಿಕಾರಗಳಿಗೆ ನಷ್ಟಪರಿಹಾರದ ಸಂದಾಯ
18. ನಿಯಮ ರಚನಾಧಿಕಾರ
19. ನಿರಸನ ಮತ್ತು ಉಳಿಸುವಿಕೆಗಳು
20. ತೊಂದರೆಗಳನ್ನು ನಿವಾರಿಸುವ ಅಧಿಕಾರ

**ಕರ್ನಾಟಕ ರಾಜ್ಯ ಸರ್ಕಾರ**

**ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು.**

**ನಂ. ಲಾ 86 ಎಲ್ ಎಮ್ ಪಿ 87 ದಿನಾಂಕ 27ನೇ ನವೆಂಬರ್ 1987.**

**ಅಧಿಸೂಚನೆ**

ಕರ್ನಾಟಕ ರಾಜ್ಯಭಾಷಾ ಅಧಿನಿಯಮ, 1963, (ಕರ್ನಾಟಕ ಅಧಿನಿಯಮ 1963ರ 26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ನಾನು ಶ್ರೀ ಎ.ಎನ್. ಬ್ಯಾನರ್ಜಿ "ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 ಮತ್ತು ಕರ್ನಾಟಕ ಮನೋರಂಜನಾ ತೆರಿಗೆ ನಿಯಮಗಳು, 1959ರ" ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಎ.ಎನ್. ಬ್ಯಾನರ್ಜಿ,**
ಕರ್ನಾಟಕದ ರಾಜ್ಯಪಾಲರು,

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
**ವಿ. ರಾಮಚಂದ್ರರಾಜು,**
ಕರ್ನಾಟಕದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

**1958ರ ಕರ್ನಾಟಕ ಅಧಿನಿಯಮ ಸಂಖ್ಯೆ 30**

(1959ರ ಜನವರಿ ಮೊದಲನೇ ದಿವಸದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು)

**ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958**

(1966ರ 14, 1969ರ 31, 1971ರ 15, 1973ರ 4, 1974ರ 15 1976ರ 36, 1977ರ 16, 1979ರ 3, 1979ರ 21, 1979ರ 25, 1980ರ 14, 1980ರ 26, 1981ರ 5, 1982ರ 13, 1983ರ 2, 1983ರ 9 ಮತ್ತು 1984ರ 9ರ ಅಧಿನಿಯಮಗಳ ಮೂಲಕ ತಿದ್ದುಪಡಿಯಾಗಿದೆ.)

(1958ರ ಡಿಸೆಂಬರ್ 19ನೇ ದಿನದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

**ಕರ್ನಾಟಕ ರಾಜ್ಯದಲ್ಲಿನ ಮನೋರಂಜನೆಗಳ ಮೇಲೆ ತೆರಿಗೆಯನ್ನು ವಿಧಿಸುವುದಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಕ್ರೋಢೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ**

ಕರ್ನಾಟಕ ರಾಜ್ಯದಲ್ಲಿ ಮನೋರಂಜನಾ ತೆರಿಗೆಯನ್ನು ವಿಧಿಸುವುದಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಕ್ರೋಢೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಒಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:–

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) 19ನೇ ಪ್ರಕರಣವು ಇಡೀ ಕರ್ನಾಟಕ ರಾಜ್ಯದಲ್ಲಿ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಉಳಿದ ಪ್ರಕರಣಗಳು 19ನೇ ಪ್ರಕರಣದ ಮೂಲಕ ನಿರಸನಗೊಂಡು ಯಾವುದೇ ಅಧಿನಿಯಮಗಳು ಯಾವ ರಾಜ್ಯದಲ್ಲಿ ಜಾರಿಯಲ್ಲಿ ಇದ್ದವೋ ಆ ರಾಜ್ಯದ ಪ್ರದೇಶಗಳಲ್ಲಿ ತತ್‌ಕ್ಷಣ ಜಾರಿಗೆ ಬರತಕ್ಕದ್ದು ಈ ಅಧಿನಿಯಮದ ಎಲ್ಲಾ ಉಪಬಂಧಗಳು (19ನೇ ಪ್ರಕರಣವನ್ನು ಹೊರತುಪಡಿಸಿ) ರಾಜ್ಯದ ಇತರ ಪ್ರದೇಶ ಅಥವಾ ಪ್ರದೇಶಗಳಲ್ಲಿ, ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕ ಅಥವಾ ದಿನಾಂಕಗಳಿಂದ ಜಾರಿಗೆ ಬರತಕ್ಕುದ್ದು.

**2. ಪರಿಭಾಷೆಗಳು:–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) **"ಪ್ರದೇಶ"** ಎಂಬುದು ಪ್ರೇಕ್ಷಕನಾಗಿ ಅಥವಾ ಶ್ರೋತೃವೃಂದದಲ್ಲಿ ಒಬ್ಬನಾಗಿ ಪ್ರವೇಶಿಸುವುದನ್ನು ಮತ್ತು ಮನೋರಂಜನೆಯಲ್ಲಿ ಭಾಗವಹಿಸುವ ಮೂಲಕ ವಿನೋದದ ಉದ್ದೇಶಕ್ಕಾಗಿ ಪ್ರವೇಶಿಸುವುದನ್ನು ಒಳಗೊಳ್ಳುತ್ತದೆ;

(ಖ) **"ಮನೋರಂಜನೆಗೆ ಪ್ರವೇಶ"** ಎಂಬುದು ಮನೋರಂಜನೆ ನಡೆಯುವಂಥ ಆ ಯಾವುದೇ ಸ್ಥಳಕ್ಕೆ ಪ್ರವೇಶಿಸುವುದನ್ನು ಒಳಗೊಳ್ಳುತ್ತದೆ;

(ಗ) **"ಕೃಷಿ"** ಎಂಬುದು ತೋಟಗಾರಿಕೆ ಮತ್ತು ಪ್ರತಿಯೊಂದು ಬಗೆಯ ಪ್ರಾಣಿಗಳ ತಳಿ ವರ್ಧನೆಯನ್ನು ಒಳಗೊಳ್ಳುತ್ತದೆ;

(ಗಕ) "ಚಲನಚಿತ್ರ ಮಂದಿರ" ಎಂದರೆ ಯಾವ ಚಲನಚಿತ್ರ ಪದರ್ಶನಗಳಿಗೆ ವ್ಯಕ್ತಿಗಳು ಹಣ ಸಂದಾಯ ಮಾಡಿ ಪ್ರವೇಶಿಸುತ್ತಾರೊ ಅಂಥ ಚಲನಚಿತ್ರ ಪ್ರದರ್ಶನಗಳು ಯಾವ ಮನೋರಂಜನಾ ಸ್ಥಳದಲ್ಲಿ ನಡೆಯುತ್ತವೋ ಆ ಯಾವುದೇ ಮನೋರಂಜನಾ ಸ್ಥಳ;

(ಘ) "ಗೌರವಾರ್ಥ ಟಿಕೆಟ್" ಎಂದರೆ ಯಾವುದೇ ಹಣ ಸಂದಾಯ ಮಾಡದೆ ಅಥವಾ ಅಂಥ ಪ್ರವೇಶಕ್ಕಾಗಿ ಇಳಿಸಿದ ದರದಲ್ಲಿ ಹಣ ಸಂದಾಯ ಮಾಡಿ ಮನೋರಂಜನೆಗೆ ಪ್ರವೇಶ ಪಡೆಯುವುದಕ್ಕಾಗಿನ ಟಿಕೆಟ್ ಅಥವಾ ಪಾಸ್;

(ಙ) "ಮನೋರಂಜನೆ" ಎಂದರೆ ಯಾವ ಕುದುರೆ ಜೂಜು ಅಥವಾ ಚಲನಚಿತ್ರ ಪ್ರದರ್ಶನಕ್ಕೆ ವ್ಯಕ್ತಿಗಳು ಹಣ ಸಂದಾಯ ಮಾಡಿ ಪ್ರವೇಶ ಪಡೆಯುತ್ತಾರೋ ಆ ಯಾವುದೇ ಕುದುರೆ ಜೂಜು ಅಥವಾ ಚಲನಚಿತ್ರ ಪ್ರದರ್ಶನ;

(ಙ–1)...

(ಚ) "ಸಂಸ್ಥೆ"ಎಂಬುದು ಕಂಪನಿ, ಸಂಘ, ಕ್ಲಬ್ ಅಥವಾ ಯಾವುದೇ ಹೆಸರಿನಿಂದ ಕರೆಯಲಾದ ವ್ಯಕ್ತಿಗಳ ಇತರೆ ಸಂಘವನ್ನು ಒಳಗೊಳ್ಳುತ್ತದೆ;

(ಥ) "ಸ್ಥಳೀಯ ಪ್ರಾಧಿಕಾರ" ಎಂದರೆ ಸಂದರ್ಭಾನುಸಾರ ಪೌರ ನಿಗಮ, ನಗರ ಮುನ್ಸಿಪಲ್ ಕೌನ್ಸಿಲ್, ಪಟ್ಟಣ ಮುನಿಸಿಪಲ್ ಕೌನ್ಸಿಲ್, ದಂಡು ಪ್ರದೇಶ ಮಂಡಲಿ, ಪಟ್ಟಣ ಮಂಡಲಿ, ನೈರ್ಮಲ್ಯ ಮಂಡಲಿ, ಅಧಿಸೂಚಿತ ಪ್ರವೇಶ ಸಮಿತಿ, ಪಟ್ಟಣ ಪಂಚಾಯಿತಿ ಅಥವಾ ಗ್ರಾಮಪಂಚಾಯಿತಿ;

(ಥ) "ಸ್ಥಳೀಯ ಪ್ರಾಧಿಕಾರ" ಎಂದರೆ ಸಂದರ್ಭಾನುಸಾರ ಪೌರ ನಿಗಮ, ನಗರ ಮುನ್ಸಿಪಲ್ ಕೌನ್ಸಿಲ್, ಪಟ್ಟಣ ಮುನಿಸಿಪಲ್ ಕೌನ್ಸಿಲ್, ದಂಡು ಪ್ರದೇಶ ಮಂಡಲಿ, ಪಟ್ಟಣ ಮಂಡಲಿ, ನೈರ್ಮಲ್ಯ ಮಂಡಲಿ, ಅಧಿಸೂಚಿತ ಪ್ರವೇಶ ಸಮಿತಿ, ಪಟ್ಟಣ ಪಂಚಾಯಿತಿ ಅಥವಾ ಗ್ರಾಮಪಂಚಾಯಿತಿ;

(ಜ) "ಅಧಿಸೂಚನೆ" ಎಂದರೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಝ) "ಪ್ರವೇಶಕ್ಕಾಗಿ ಹಣ ಸಂದಾಯ" ಎಂಬುದು—

(i) ಮನೋರಂಜನಾ ಸ್ಥಳದ ಒಂದು ಭಾಗಕ್ಕೆ ಪ್ರವೇಶವನ್ನು ಪಡೆದುಕೊಂಡು, ತರುವಾಯ ಅದರ ಯಾವ ಇನ್ನೊಂದು ಭಾಗದ ಪ್ರವೇಶಕ್ಕಾಗಿ ತೆರಿಗೆ ಅಥವಾ ಹೆಚ್ಚಿನ ತೆರಿಗೆಯನ್ನು ಒಳಗೊಳ್ಳುವ ಸಂದಾಯದ ಅಗತ್ಯವಿರುವಂಥ ಆ ಯಾವುದೇ ಇನ್ನೊಂದು ಭಾಗಕ್ಕೆ ಪ್ರವೇಶ ಪಡೆದ ವ್ಯಕ್ತಿಯು ಮಾಡಿದ ಯಾವುದೇ ಸಂದಾಯ;

(ii) ಮನೋರಂಜನಾ ಸ್ಥಳದಲ್ಲಿ ಆಸನಗಳಿಗಾಗಿ ಅಥವಾ ಇತರೆ ಸ್ಥಳಾವಕಾಶಕ್ಕಾಗಿ ಯಾವುದೇ ಸಂದಾಯ; ಇವುಗಳನ್ನು ಒಳಗೊಳ್ಳುತ್ತದೆ.

(ಝಕ) "ಜನಸಂಖ್ಯೆ" ಎಂದರೆ ಯಾವ ಕೊನೆಯ ಹಿಂದಿನ ಜನಗಣತಿಯ ಸುಸಂಗತ ಅಂಕಿಗಳನ್ನು ಪ್ರಕಟಿಸಲಾಗಿದೆಯೋ ಆ ಕೊನೆಯ ಹಿಂದಿನ ಜನಗಣತಿಯಲ್ಲಿ ಖಚಿತಪಡಿಸಿಕೊಂಡ ಜನಸಂಖ್ಯೆ.

(ಞ) "ನಿಯಮಿಸಿದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಿದುದು;

(ಟ) ಯಾವುದೇ ಮನೋರಂಜನೆಗೆ ಸಂಬಂಧಪಟ್ಟಂತೆ **"ಮಾಲೀಕ"** ಎಂಬುದು ಅದರ ಆಡಳಿತಕ್ಕೆ ಜವಾಬ್ದಾರನಾಗಿರುವ ಯಾವನೇ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

**3. ಮನೋರಂಜನೆಗಳಿಗೆ ಪ್ರವೇಶಕ್ಕಾಗಿನ ಸಂದಾಯದ ಮೇಲೆ ತೆರಿಗೆ:–**

(1) ಮನೋರಂಜನೆಗೆ ಪ್ರವೇಶ ಪಡೆಯುವುದಕ್ಕಾಗಿನ ಪ್ರತಿಯೊಂದು ಸಂದಾಯದ ಮೇಲೆ ಮನೋರಂಜನಾ ತೆರಿಗೆಯನ್ನು ಈ ಕೆಳಕಂಡ ದರಗಳಲ್ಲಿ ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು ಎಂದರೆ,–

**ಕೋಷ್ಟಕ**

| ಕ್ರಮ ಸಂಖ್ಯೆ | ಪ್ರವೇಶಕ್ಕಾಗಿ ಸಂದಾಯ (ತೆರಿಗೆ ಮೊಬಲಗನ್ನು ಹೊರತುಪಡಿಸಿ) | ತೆರಿಗೆ ದರ |
|---|---|---|
| 1 | 2 | 3 |
| (ಕ) | ಒಂದು ರೂಪಾಯಿ ಇಪ್ಪತ್ತೈದು ಪೈಸೆಗಳನ್ನು ಮೀರದಿದ್ದರೆ | ಅಂಥ ಸಂದಾಯದ ಶೇಕಡ ಮೂವತ್ತು |
| (ಖ) | ಒಂದು ರೂಪಾಯಿ ಇಪ್ಪತ್ತೈದು ಪೈಸೆಗಿಂತ ಮೀರಿದ ಆದರೆ ಎರಡು ರೂಪಾಯಿ ಐವತ್ತು ಪೈಸೆಗಳನ್ನು ಮೀರಿದ್ದರೆ | ಅಂಥ ಸಂದಾಯದ ಶೇಕಡ ನಲವತ್ತು |
| (ಗ) | ಎರಡು ರೂಪಾಯಿ ಐವತ್ತು ಪೈಸೆಗಳನ್ನು ಮೀರಿದರೆ | ಅಂಥ ಸಂದಾಯದ ಶೇಕಡ ಐವತ್ತು |

[ಪರಂತು,ಕ ... ... ...

[1ಕ ... ... ...

[ಪರಂತು,ಕ ... ... ...

[ಪರಂತು,ಕ ... ... ...

(2) (1) ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಮನೋರಂಜನೆಯ ಮಾಲೀಕನು ಕೊಟ್ಟ ಪ್ರತಿಯೊಂದು ಗೌರವಾರ್ಥ ಟಿಕೆಟ್ಟಿನ ಮೇಲೆ (ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನು ಹೊರತುಪಡಿಸಿ) ಅಂಥ ಮನೋರಂಜನೆಗೆ ಸಂಬಂಧಿಸಿದಂತೆ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸೂಕ್ತ ದರದಲ್ಲಿ ಮನೋರಂಜನೆ ತೆರಿಗೆಯನ್ನು, ಅಂಥ ಟಿಕೆಟ್ ಹೊಂದಿರುವವನು ಯಾವ ಆಸನ ಅಥವಾ ಸ್ಥಳಾವಕಾಶದ ವರ್ಗವನ್ನು ಹಿಡಿಯಲು ಅಥವಾ ಉಪಯೋಗಿಸಲು ಹಕ್ಕುಳ್ಳವನಾಗಿರುತ್ತಾನೋ ಆ ಆಸನ ಅಥವಾ ಸ್ಥಳಾವಕಾಶದ ವರ್ಗಕ್ಕೆ ಅನುಸಾರವಾಗಿ ಮನೋರಂಜನೆಗೆ ಪ್ರವೇಶಕ್ಕಾಗಿ ಪೂರ್ಣಹಣವನ್ನು ಸಂದಾಯ ಮಾಡಿದ್ದರೆ ಹೇಗೋ ಹಾಗೇ, ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅಂಥ ಟಿಕೆಟನ್ನು ಹೊಂದಿರುವವನು ಸಂದಾಯದ ಮೇಲೆ ಪ್ರವೇಶ ಪಡೆದಿರುವುದಾಗಿ ಭಾವಿಸತಕ್ಕದ್ದು:

ಪರಂತು, ಅಂಥ ಟಿಕೆಟನ್ನು ಹೊಂದಿದ ವ್ಯಕ್ತಿಯು ಯಾವ ಆಸನ ಅಥವಾ ಸ್ಥಳಾವಕಾಶವನ್ನು ಹಿಡಿಯಲು ಅಥವಾ ಉಪಯೋಗಿಸಲು ಹಕ್ಕುಳ್ಳವನಾಗಿರುತ್ತಾನೋ ಆ ಆಸನ ಅಥವಾ ಸ್ಥಳಾವಕಾಶವು ಮನೋರಂಜನೆ ನಡೆಯುವ ಸಭಾಂಗಣ ಅಥವಾ ಸ್ಥಳದ ಒಳಗಡೆ ಇರುವ ಆಸನ ಅಥವಾ ಸ್ಥಳಾವಕಾಶದ ದರ್ಜೆಗಳಿಗಿಂತ ಬೇರೆಯಾಗಿದ್ದಲ್ಲಿ ಮತ್ತು ಸದರಿ ಆಸನ ಅಥವಾ ಸ್ಥಳಾವಕಾಶಕ್ಕಾಗಿನ ಪ್ರವೇಶಕ್ಕೆ ಯಾವುದೇ

ಸಂದಾಯವನ್ನು ನಿಗದಿ ಮಾಡದಿರುವಲ್ಲಿ, ಅಂಥ ಟಿಕೆಟನ್ನು ಹೊಂದಿದವನು ಅತಿಹೆಚ್ಚಿನ ಆಸನವನ್ನು ಅಥವಾ ಸ್ಥಳಾವಕಾಶವನ್ನು ಹಿಡಿಯಲು ಅಥವಾ ಉಪಯೋಗಿಸಲು ಹಕ್ಕುದಾರನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ, ಅಂಥ ಅತಿ ಹೆಚ್ಚಿನ ದರ್ಜೆಯ ಆಸನ ಅಥವಾ ಸ್ಥಳಾವಕಾಶಕ್ಕಾಗಿ ಚಾರ್ಜುಗಳನ್ನು ಸಂದಾಯ ಮಾಡಿದ ಮೇಲೆ ಪ್ರವೇಶವನ್ನು ಪಡೆದಿರುವುದಾಗಿ ಭಾವಿಸತಕ್ಕದ್ದು.

[3] ... ... ...

**3ಕ. ಅಧಿಭಾರವನ್ನುವಿಧಿಸುವುದು:–** 3ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಗಳ ಜೊತೆಗೆ, ಅಂಥ ಮನೋರಂಜನಾ ತೆರಿಗೆಯ ದರದ ಮೇಲೆ ಶೇಕಡಾ ನೂರರಷ್ಟು ಅಧಿಭಾರವನ್ನು ವಿಧಿಸತಕ್ಕದ್ದು ಮತ್ತು ಹಾಗೆ ವಿಧಿಸಲಾದ ಅಧಿಭಾರದ ಪೂರ್ಣ ಉತ್ಪತ್ತಿಗಳನ್ನು ರಾಜ್ಯದ ಸಂಚಿತ ನಿಧಿಗೆ ಜಮೆ ಮಾಡತಕ್ಕದ್ದು.

3ಖ. ... ... ...

**3ಗ. ಕೆಲವು ಚಲನಚಿತ್ರಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ:–**

3ನೇ ಪ್ರಕರಣ ಮತ್ತು 3ಕ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆ ದರಗಳನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ದರಗಳ ಅರ್ಧದಷ್ಟಾಗಿರತಕ್ಕದ್ದು:

ಪರಂತು, ಅಂಥ ಚಿತ್ರವು, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನೀಡಿದ ಪ್ರಶಸ್ತಿಯನ್ನು ಪಡೆದಿರುವಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಒಂದು ವರ್ಷದ ಅವಧಿವರೆಗೆ ಯಾವುದೇ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ "ಮನೋರಂಜನಾ ತೆರಿಗೆ' ಯು 3ಕ ಪ್ರಕರಣದ ಮೇರೆಗೆ ವಿಧಸಬಹುದಾದ ಅಧಿಭಾರವನ್ನು ಒಳಗೊಳ್ಳುತ್ತದೆ.

**4. ಚಲನಚಿತ್ರ ಪ್ರದರ್ಶನಗಳ ಮೇಲೆ ಹೆಚ್ಚಿನ ತೆರಿಗೆ:–** ಚಲನಚಿತ್ರ ಪ್ರದರ್ಶನಗಳ ಸಂದರ್ಭದಲ್ಲಿ, 3 ಮತ್ತು 3ಕ ಪ್ರಕರಣಗಳ ಮೇರೆಗೆ ವಿಧಿಸಬಹುದಾದ ತೆರಿಗೆ ಮತ್ತು ಅಧಿಭಾರ ಅಥವಾ 4ಕ ಪ್ರಕರಣದ ಮೇರೆಗೆ ವಿಧಿಸಬಹುದಾದ ತೆರಿಗೆಗಳ ಜೊತೆಗೆ ಈ ಕೆಳಕಂಡ ದರಗಳಲ್ಲಿ ಲೆಕ್ಕಹಾಕಲಾದ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯಮಾಡತಕ್ಕದ್ದು.

**ಕೋಷ್ಟಕ**

| ಕ್ರಮ ಸಂಖ್ಯೆ | ಅತಿ ಹೆಚ್ಚಿನ ವರ್ಗದ ಆಸನ ಸ್ಥಳಾವಕಾಶಕ್ಕೆ ಪ್ರತಿ ಪ್ರದರ್ಶನಕ್ಕೆ ವ್ಯಕ್ತಿಯು ಪ್ರವೇಶಿಸುವುದಕ್ಕಾಗಿ ಸಂದಾಯದ ದರ (ಮನೋರಂಜನಾ ತೆರಿಗೆ ಮತ್ತು ಅಧಿಭಾರವೂ ಸೇರಿದಂತೆ) | ಪ್ರತಿ ಪ್ರದರ್ಶನಕ್ಕೆ ತೆರಿಗೆಯ ದರ |
|---|---|---|
| 1 | 2 | 3 |
| (ಕ) | ಎರಡು ರೂಪಾಯಿ ಐವತ್ತು ಪೈಸೆಗಳನ್ನು ಮೀರದಿದ್ದರೆ. | ಇಪ್ಪತ್ತು ರೂ. ಗಳು |
| (ಖ) | ಎರಡು ರೂಪಾಯಿ ಐವತ್ತು ಪೈಸೆಗಳನ್ನು ಮೀರಿದ್ದು. ಆದರೆ ಐದು ರೂಪಾಯಿಗಳನ್ನು ಮೀರದಿದ್ದರೆ. | ಮೂವತ್ತು ರೂ. ಗಳು |
| (ಗ) | ಐದು ರೂಪಾಯಿಗಳನ್ನು ಮೀರಿದರೆ | ಐವತ್ತು ರೂ. ಗಳು |

**4ಕ. ಕೆಲವು ಸ್ಥಳಗಳಲ್ಲಿ ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆ:–** (1) ಈ ಅಧಿನಿಯಮದ 3 ಮತ್ತು 3ಕ ಪ್ರಕರಣಗಳ ಮೇರೆಗೆ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆ ಮತ್ತು ಅಧಿಭಾರಕ್ಕೆ ಬದಲಾಗಿ ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಇಪ್ಪತ್ತೈದು ಸಾವಿರ ಜನಸಂಖ್ಯೆಯನ್ನು ಮೀರಿದ ಸ್ಥಳೀಯ ಪ್ರಾಧಿಕಾರದ ಪರಿಮಿತಿಗಳೊಳಗೆ ಇರುವ (ಡ್ರೈವ್–ಇನ್ ಚಿತ್ರಮಂದಿರಗಳನ್ನು ಹೊರತುಪಡಿಸಿ) ಚಲನಚಿತ್ರ ಮಂದಿರಗಳಲ್ಲಿ ನಡೆಯುವ ಚಲನಚಿತ್ರ ಪ್ರದರ್ಶನಗಳ ಸಂದರ್ಭದಲ್ಲಿ ಪ್ರತಿಯೊಂದು ಪ್ರದರ್ಶನಕ್ಕೆ ಮನೋರಂಜನಾ ತೆರಿಗೆಯನ್ನು ಕೆಳಕಂಡ ದರಗಳಲ್ಲಿ ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು. ಎಂದರೆ:–

**ಕೋಷ್ಟಕ**

| ಕ್ರಮ ಸಂಖ್ಯೆ | ಸ್ಥಳೀಯ ಪ್ರಾಧಿಕಾರಗಳು, ಅವುಗಳ ಜನಸಂಖ್ಯೆಯು | ತೆರಿಗೆಯ ದರ |
|---|---|---|
| (ಕ) | ಹದಿನೈದು ಸಾವಿರ ಮೀರದಿದ್ದರೆ | ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡ ಹದಿನೈದು. |
| (ಖ) | ಹದಿನೈದು ಸಾವಿರ ಮೀರಿದ್ದು, ಆದರೆ ಇಪ್ಪತ್ತೈದು ಸಾವಿರ ಮೀರದಿದ್ದರೆ. | ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡ ಇಪ್ಪತ್ತೈದು. |

ಪರಂತು, ಮೇಲಿನ ಕೋಷ್ಟಕದ ಕ್ರಮಸಂಖ್ಯೆ (ಖ) ಅಡಿಯಲ್ಲಿ ಬರುವ ಸ್ಥಳೀಯ ಪ್ರಾಧಿಕಾರದ ಮಿತಿಗಳೊಳಗೆ ಇರುವ ಚಲನಚಿತ್ರ ಮಂದಿರಕ್ಕೆ ಸಂಬಂಧಿಸಿದಂತೆ, ಅದರ ಮಾಲೀಕನು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಚಲಾಯಿಸಬೇಕಾದ ಮತ್ತು ನಿಮಮಿಸಿದ ಪ್ರಾಧಿಕಾರಿಗೆ ಕೊಡಬೇಕಾದ ತನ್ನ ಆಯ್ಕೆಯಲ್ಲಿ:–

(i) ಈ ಅಧಿನಿಯಮದ 3 ಮತ್ತು 3ಕ ಪ್ರಕರಣದ ಮೇರೆಗೆ ಮನೋರಂಜನಾ ತೆರಿಗೆ ಮತ್ತು ಅಧಿಭಾರವನ್ನು; ಅಥವಾ

(ii) 1964ರ ಕರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ [ಕರ್ನಾಟಕ ಅಧಿನಿಯಮ 1964ರ 23) ಉಪಬಂಧಗಳ ಮೇರೆಗೆ ಪ್ರತಿ ದಿವಸಕ್ಕೆ ನಡೆಸಬೇಕೆಂದು ಅನುಮತಿಸಿದ ಪ್ರದರ್ಶನಗಳ ಗರಿಷ್ಟ ಸಂಖ್ಯೆಯ ಮೇಲಿನ ಒಟ್ಟು ಸಂಗ್ರಹಣ ಸಾಮರ್ಥ್ಯದ ಶೇಕಡ ಇಪ್ಪತ್ತರಷ್ಟು ಮನೋರಂಜನಾ ತೆರಿಗೆಯನ್ನು;

– ಸಂದಾಯ ಮಾಡಬಹುದು.

ಆಯ್ಕೆಯನ್ನು ವರ್ಷದಲ್ಲಿ ಒಂದು ಬಾರಿ ಚಲಾಯಿಸತಕ್ಕದ್ದು ಮತ್ತು ಆ ವರ್ಷಕ್ಕೆ ಅದು ಅಂತಿಮವಾಗಿರತಕ್ಕದ್ದು;

ಮತ್ತೂ ಪರಂತು, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳೆಂದು ಕೊಟ್ಟ ಪ್ರಶಸ್ತಿಯನ್ನು ಪಡೆದಿರುವಂಥ ಚಲನಚಿತ್ರ ಪ್ರದರ್ಶನ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಒಂದು ವರ್ಷದ ಅವಧಿಗಾಗಿ ಈ ಉಪಪ್ರಕರಣದ ಮೇರೆಗೆ ಯಾವುದೇ ತೆರಿಗೆಯನ್ನು ಸಂದಾಯ ಮಾಡತಕ್ಕದ್ದಲ್ಲ:

ಅದೂ ಅಲ್ಲದೆ, ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ತೆರಿಗೆಯು, ಈ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯ ಅರ್ಧದಷ್ಟು ಆಗಿರತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ, ಚಲನಚಿತ್ರ ಮಂದಿರಕ್ಕೆ ಸಂಬಂಧ ಪಟ್ಟಂತೆ "ಒಟ್ಟು ಸಂಗ್ರಹಣಾ ಸಾಮರ್ಥ್ಯ" ಎಂದರೆ ಅಂಥ ಚಿತ್ರಮಂದಿರದಲ್ಲಿ ಶ್ರೋತೃವೃಂದದವರಿಗೆ, ಲಭ್ಯವಿರುವ ಅಥವಾ ಒದಗಿಸಲಾದ ಎಲ್ಲಾ ಆಸನಗಳು ಮತ್ತು ಸ್ಥಳಾವಕಾಶಕ್ಕೆ ಭರ್ತಿಯಾಗಿರದಿದ್ದರೆ, ಪ್ರದರ್ಶನದ ಪ್ರವೇಶಕ್ಕಾಗಿ ಮಾಡಿದ ಎಲ್ಲಾ ಸಂದಾಯಗಳ ಒಟ್ಟು ಮೊತ್ತಕ್ಕೆ ಸಮನಾದ ಮೊತ್ತ ಮತ್ತು ಪ್ರವೇಶಕ್ಕಾಗಿನ ಎಲ್ಲಾ ಸಂದಾಯಗಳ ಒಟ್ಟು ಮೊತ್ತವನ್ನು,—

(i) 1982ರ ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮದ 5ನೇ ಪ್ರಕರಣ ಪ್ರಾರಂಭದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಅಂಥ ಚಲನಚಿತ್ರ ಪ್ರದರ್ಶನಗಳನ್ನು ಪ್ರದರ್ಶಿಸುತ್ತಿರುವ ಚಲನಚಿತ್ರಮಂದಿರಗಳ ಸಂದರ್ಭದಲ್ಲಿ, ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಜಾರಿಯಲ್ಲಿದ್ದಂಥ ಆಸನಗಳು ಅಥವಾ ಸ್ಥಳಾವಕಾಶದ ಪ್ರವೇಶಕ್ಕಾಗಿನ ಎಲ್ಲಾ ಸಂದಾಯಗಳ ದರಗಳಲ್ಲಿ; ಮತ್ತು,

(ii) ಹಿಂದೆ ಹೇಳಿದ ದಿನಾಂಕದ ತರುವಾಯ ಚಲನಚಿತ್ರ ಪ್ರದರ್ಶನಗಳನ್ನು ಪ್ರದರ್ಶಿಸಲು ಪ್ರಾರಂಭಿಸಿದ ಚಲನಚಿತ್ರ ಮಂದಿರಗಳ ಸಂದರ್ಭದಲ್ಲಿ ಮಾಲೀಕನು ಒದಗಿಸಿದಂಥ ಆಸನಗಳು ಅಥವಾ ಸ್ಥಳಾವಕಾಶದ ಪ್ರವೇಶಕ್ಕಾಗಿನ ಸಂದಾಯದ ದರಗಳಲ್ಲಿ ಲೆಕ್ಕಹಾಕತಕ್ಕದ್ದು.

(2) ಚಲನಚಿತ್ರ ಮಂದಿರದ ಒಟ್ಟು ಸಂಗ್ರಹಣಾ ಸಾಮರ್ಥ್ಯದ ನಿರ್ಧರಣೆಯ ತರುವಾಯ, ಆಸನಗಳ ಸಂಖ್ಯೆಯಲ್ಲಾಗಲೀ ಅಥವಾ ಸ್ಥಳಾವಕಾಶದಲ್ಲಾಗಲೀ ಅಥವಾ ಅಂಥ ಚಲನಚಿತ್ರ ಮಂದಿರದ ಪ್ರವೇಶಕ್ಕಾಗಿನ ಸಂದಾಯದ ದರಗಳಲ್ಲಾಗಲಿ, ನಿಯಮಿಸಿದ ಪ್ರಾಧಿಕಾರಿಗೆ ಅದರ ಬಗ್ಗೆ ಹದಿನೈದು ದಿವಸಗಳ ನೋಟೀಸನ್ನು ಮಾಲೀಕನು ಕೊಟ್ಟ ಹೊರತು, ಯಾವುದೇ ಬದಲಾವಣೆ ಅಥವಾ ಮಾರ್ಪಾಟನ್ನು ಮಾಡತಕ್ಕದ್ದಲ್ಲ. ಮತ್ತು ಒಟ್ಟು ಸಂಗ್ರಹಣಾ ಸಾಮರ್ಥ್ಯವನ್ನು ಪುನಃ ನಿರ್ಧರಿಸುವವರೆಗೆ, ಮಾಲೀಕನು ಈ ಹಿಂದೆ ನಿಗದಿಪಡಿಸಿದ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

(3) ... ... ...

(4) (1)ನೇ ಉಪಪ್ರಕರಣವು ಅನ್ವಯಿಸುವಂಥ ಚಲನಚಿತ್ರ ಮಂದಿರದ ಯಾವನೇ ಮಾಲೀಕನು, ಅಂಥ ಚಲನಚಿತ್ರ ಮಂದಿರದ ಒಟ್ಟು ಸಂಗ್ರಹಣಾ ಸಾಮರ್ಥ್ಯವನ್ನು, ಲೆಕ್ಕ ಹಾಕುವುದನ್ನು ಗಣನೆಗೆ ತೆಗೆದುಕೊಂಡು ಪ್ರವೇಶಕ್ಕಾಗಿನ ಸಂದಾಯಕ್ಕಿಂತ ಹೆಚ್ಚಿನದನ್ನು ತೆರಿಗೆ ರೂಪದಲ್ಲಿ ಅಥವಾ ಅನ್ಯಥಾ ಸಂಗ್ರಹಿಸತಕ್ಕದ್ದಲ್ಲ ಅಥವಾ ಸಂಗ್ರಹಿಸುವಂತೆ ಮಾಡತಕ್ಕದ್ದಲ್ಲ.

(5) (ಕ) ಈ ಪ್ರಕರಣದಲ್ಲಿ ಏನೇ ಇದ್ದಾಗ್ಯೂ, (1)ನೇ ಉಪಪ್ರಕರಣದ ಮೇರೆಗೆ ಚಲನಚಿತ್ರಕ್ಕೆ ತೆರಿಗೆ ಸಂದಾಯದಿಂದ ವಿನಾಯಿತಿಗೆ ಅಥವಾ ಅದರಲ್ಲಿನ ಇಳಿತಾಯಕ್ಕೆ ಅನುಮತಿಸಲಾಗಿರುವಲ್ಲಿ, ಪ್ರವೇಶಕ್ಕಾಗಿನ ಸಂದಾಯದ ದರಗಳನ್ನು, ಅಂಥ ಸಂದಾಯಕ್ಕೆ ಸಂಬಂಧಿಸಿದಂತೆ ವಿನಾಯಿತಿಗೊಳಿಸಿರುವ ಅಥವಾ ಇಳಿಸಿರುವ ತೆರಿಗೆಯಷ್ಟರ ಮಟ್ಟಿಗೆ, ಪ್ರತಿಯೊಂದು ಪ್ರವೇಶಕ್ಕೆ ಸಂಬಂಧಿಸಿದಂತೆ ಇಳಿಸತಕ್ಕದ್ದು. ಮಾಲೀಕನು ಪ್ರವೇಶಕ್ಕಾಗಿ ಸಂದಾಯದ ದರಗಳನ್ನು ಇಳಿಸದಿರುವಲ್ಲಿ, ಅವನು ಈ ಅಧಿನಿಯಮದ ಮೇರೆಗಿನ ಯಾವುದೇ ಇತರೆ ದಂಡನೆಯ ಜೊತೆಗೆ (1)ನೇ ಉಪಪ್ರಕರಣದ ಮೇರೆಗೆ ತೆರಿಗೆ ಸಂದಾಯದಿಂದ ಯಾವುದೇ ವಿನಾಯಿತಿ ಅಥವಾ ಇಳಿತಾಯವನ್ನು ಮಾಡಿರದಿದ್ದರೆ ಹೇಗೋ ಹಾಗೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(ಖ) (ಕ) ಖಂಡದ ಮೇರೆಗೆ ಪ್ರವೇಶಕ್ಕಾಗಿನ ಸಂದಾಯದ ದರಗಳಲ್ಲಿ ಇಳಿತಾಯ ಮಾಡಿದ್ದಾಗ್ಯೂ, (1)ನೇ ಉಪಪ್ರಕರಣದ ಮೇರೆಗೆ ತೆರಿಗೆಯ ಸಂದಾಯದ ಉದ್ದೇಶಕ್ಕಾಗಿ ಒಟ್ಟು ಸಂಗ್ರಹಣ ಸಾಮರ್ಥ್ಯವು ಬದಲಾಗದೆ ಉಳಿಯತಕ್ಕದ್ದು.

**5. ಮನೋರಂಜನೆಗಳಿಗೆ ಪ್ರವೇಶ:–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ್ದಂತೆ ಹೊರತು, ಮನೋರಂಜನೆಯ ಸಂಬಂಧದಲ್ಲಿ ಯಾವುದೇ ಕರ್ತವ್ಯವನ್ನು ಅಥವಾ ಈ ಅಧಿನಿಯಮ ಅಥವಾ ಇತರೆ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಅವನಿಗೆ ವಿಧಿಸಿದ ಯವುದೇ ಕರ್ತವ್ಯವನ್ನು ನೆರವೇರಿಸುವ ವ್ಯಕ್ತಿಯನ್ನು ಹೊರತುಪಡಿಸಿ ಯಾವನೇ ಬೇರೆ ವ್ಯಕ್ತಿಗೆ, ಮಾಲೀಕನು ರಾಜ್ಯ ಸರ್ಕಾರದ ಪೂರ್ವಾನುಮೋದನೆಯನ್ನು, ಪಡೆದಿದ್ದ, ಮನೋರಂಜನೆಯ ಪ್ರವೇಶಕ್ಕಾಗಿನ ಸಂದಾಯಗಳ ವಿವರಣಾ ಪಟ್ಟಿಕೆಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿದ್ದ, ಮನೋರಂಜನಾ ತೆರಿಗೆಯ ಸಂದಾಯಕ್ಕಾಗಿನ ಅಂಥ ಭದ್ರತೆಯನ್ನು ಕೊಟ್ಟಿದ್ದ ಮತ್ತು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಹೊರತು ಮನೋರಂಜನೆಗೆ ಪ್ರವೇಶವಿರತಕ್ಕದ್ದಲ್ಲ:

ಪರಂತು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ವ್ಯಕ್ತಿಗಳಿಗೆ ಮನೋರಂಜನೆ ಅಥವಾ ಮನೋರಂಜನೆ ಸರಣಿಗಳಿಗೆ ಸಂದಾಯದ ಮೇಲೆ, ಅಡ್ಡಗಟ್ಟೆಯ ಅಥವಾ ಪ್ರವೇಶ ಪಡೆದ ವ್ಯಕ್ತಿಗಳ ಸಂಖ್ಯೆಯನ್ನು ಸ್ವಯಂಚಾಲನೆಯಿಂದ ನೋಂದಾಯಿಸುವಂಥ ಯಾಂತ್ರಿಕ ಸಾಧನದ ಮೂಲಕ ಪ್ರವೇಶ ಕೊಡಬಹುದು.

**6. ತೆರಿಗೆ ಸಂದಾಯದ ರೀತಿ:– (1)** 4ಕ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿದ್ದಂತೆ ಹೊರತು, ಮನೋರಂಜನಾ ತೆರಿಗೆಯನ್ನು, ಸಂದಾಯದ ಮೇಲೆ ಅಥವಾ ಗೌರವಾರ್ಥ ಟಿಕೆಟ್ ಮೂಲಕ ಪ್ರವೇಶ ಪಡೆದ ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ವಿಧಿಸತಕ್ಕದ್ದು ಮತ್ತು ಪ್ರವೇಶಗಳ ಸಂಖ್ಯೆಯ ಮೇಲೆ ಲೆಕ್ಕ ಹಾಕತಕ್ಕದ್ದು ಮತ್ತು ಸಂದಾಯ ಮಾಡತಕ್ಕದ್ದು.

**ವಿವರಣೆ:–** ಮನೋರಂಜನೆ ಯಾವುದೇ ಕಾಲದಲ್ಲಿ ಸಭಾಂಗಣದೊಳಗೆ ಅಥವಾ ಮನೋರಂಜನೆಯ ಸ್ಥಳದಲ್ಲಿ ಕಾನೂನು ಸಮ್ಮತ ಟಿಕೆಟ್ ಅಥವಾ ಗೌರವಾರ್ಥ ಟಿಕೆಟ್ ಪಡೆಯದೇ ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಕಂಡುಬಂದರೆ, ಸಂದಾಯದ ಮೇಲೆ ಮಾಲೀಕನು ಅವರಿಗೆ ಪ್ರವೇಶವನ್ನು ನೀಡಿರುವುದಾಗಿ ಭಾವಿಸತಕ್ಕದ್ದು.

(2) ಮನೋರಂಜನಾ ತೆರಿಗೆಯು ಮಾಲೀಕನಿಂದ ಸಲ್ಲತಕ್ಕುದಾಗಿರತಕ್ಕದ್ದು ಮತ್ತು ವಸೂಲಿಯಾಗಿರತಕ್ಕದ್ದು.

(3) ನಿರ್ದಿಷ್ಟ ಕಾಲದ ಅವಧಿಯಲ್ಲಿ ಮನೋರಂಜನೆಯ ಸರಣಿಗಳಿಗೆ ಅಥವಾ ಯಾವುದೇ ಮನೋರಂಜನೆಯ ಪ್ರವೇಶದ ಸೀಸನ್ ಟಿಕೆಟ್ ಅಥವಾ ಪ್ರವೇಶದ ಯಾವುದೇ ಸಂಸ್ಥೆಗೆ ಮನೋರಂಜನೆಯ ಪ್ರವೇಶಕ್ಕಾಗಿನ ಸಂದಾಯವನ್ನು ಪೂರ್ತಿಯಾಗಿ ಅಥವಾ ಭಾಗಶಃ ಒಂದೇ ಗಂಟಿನ ರೂಪದಲ್ಲಿ ಚಂದಾ ಅಥವಾ ವಂತಿಗೆಯಾಗಿ ಸಂದಾಯ ಮಾಡಿರುವಲ್ಲಿ, ಮನೋರಂಜನಾ ತೆರಿಗೆಯನ್ನು, ಒಂದೇ ಗಂಟಿನ ಮೊಬಲಗಿನ ಮೇಲೆ ಸಂದಾಯ ಮಾಡತಕ್ಕದ್ದು. ಆದರೆ ಒಂದೇ ಗಂಟಿನ ಸಂದಾಯವು ಅಥವಾ ಟಿಕೆಟಿಗಾಗಿನ ಯವುದೇ ಸಂದಾಯವು, ಮನೋರಂಜನೆಯ ಪ್ರವೇಶಕ್ಕಾಗಿ ಅಲ್ಲದೆ, ಇತರ ವಿಶೇಷಾಧಿಕಾರಗಳು, ಹಕ್ಕುಗಳು ಅಥವಾ ಉದ್ದೇಶಗಳಿಗಾಗಿನ ಸಂದಾಯವನ್ನು ಪ್ರತಿನಿಧಿಸುತ್ತದೆ ಅಥವಾ ಯಾವ ಅವಧಿಯಲ್ಲಿ ತೆರಿಗೆಯು ಪ್ರವರ್ತನೆಯಲ್ಲಿಲ್ಲವೋ ಆ ಯಾವುದೇ ಅವಧಿಯಲ್ಲಿ ಮನೋರಂಜನೆಗೆ ಪ್ರವೇಶವನ್ನು ಒಳಗೊಳ್ಳುತ್ತದೆಯೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವಲ್ಲಿ, ತೆರಿಗೆಯನ್ನು ಯಾವ ಮನೋರಂಜನೆಗೆ ಸಂಬಂಧಿಸಿದಂತೆ

ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಬೇಕಾಗಿದೆಯೋ, ಆ ಮನೋರಂಜನೆಗಳಿಗೆ ಪ್ರವೇಶದ ಹಕ್ಕನ್ನು ಪ್ರತಿನಿಧಿಸುವುದೆಂದು ರಾಜ್ಯ ಸಕಾರಕ್ಕೆ ಕಂಡುಬರುವಂಥ ಮೊಬಲಗಿನ ಮೇಲೆ ವಿಧಿಸತಕ್ಕದ್ದು:

ಕ [ಪರಂತುಕ]

**6ಕ. ವಿವರ ಪಟ್ಟಿಕೆಗಳು:–** (1) ಮನೋರಂಜನೆಯ ಪ್ರತಿಯೊಬ್ಬ ಮಾಲೀಕನು ಗೌರವಾರ್ಥ ಟಿಕೆಟ್‌ಗಳಿಗೆ ಮತ್ತು ಪ್ರವೇಶಕ್ಕಾಗಿನ ಸಂದಾಯಗಳಿಗೆ ಸಂಬಂಧಪಟ್ಟಂಥ ಅಂಥ ವಿವರಪಟ್ಟಿಕೆಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಅಂಥ ಪ್ರಾಧಿಕಾರಿಗೆ ಒಪ್ಪಿಸತಕ್ಕದ್ದು.

(1ಕ) ಯಾವನೇ ಮಾಲೀಕನು, (1)ನೇ ಉಪಪ್ರಕರಣದಿಂದ ಅಗತ್ಯಪಡಿಸಿದ ವಿವರಪಟ್ಟಿಕೆಗಳನ್ನು ಒಪ್ಪಿಸುವುದಕ್ಕೆ ಮುಂಚೆ, ಅವನು ಅಂಥ ವಿವರಪಟ್ಟಿಕೆಗಳ ಆಧಾರದ ಮೇಲೆ ತಾನು ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗು, ಅಧಿಭಾರ ಮತ್ತು ಹೆಚ್ಚಿನ ತೆರಿಗೆ ಅಥವಾ ಇತರ ತೆರಿಗೆಗಳು ಯಾವುದಾದರೂ ಇದ್ದರೆ ಅವುಗಳನ್ನು ನಿಯಮಿಸಿದ ರೀತಿಯಲ್ಲಿ ಸರ್ಕಾರೀ ಖಜಾನೆಗೆ ಸಂದಾಯ ಮಾಡತಕ್ಕದ್ದು ಮತ್ತು ವಿವರಪಟ್ಟಿಕೆಯ ಜೊತೆಗೆ ಅಂಥ ಸಂದಾಯವನ್ನು ಸಾಕ್ಷೀಕರಿಸುವ ಖಜಾನೆಯಿಂದ ಪಡೆದ ರಸೀದಿಯನ್ನು ಒದಗಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಒಪ್ಪಿಸಿದ ಯಾವುದೇ ವಿವರಪಟ್ಟಿಕೆಯು ಸರಿಯಾಗಿದೆ ಮತ್ತು ಪೂರ್ಣವಾಗಿದೆ ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅದರ ಮೇಲೆ ಬಾಕಿ ಇರುವ ತೆರಿಗೆಯನ್ನು ಪೂರ್ಣವಾಗಿ ಸಂದಾಯ ಮಾಡಲಾಗಿದೆ ಎಂದು ನಿಯಮಿಸಿದ ಪ್ರಾಧಿಕಾರಿಗೆ ಮನದಟ್ಟಾದರೆ, ಅದು ಆಗ ಅದರ ಆಧಾರದ ಮೇಲೆ ಮಾಲೀಕನ ಬಗ್ಗೆ ತೆರಿಗೆ ನಿರ್ಧರಿಸತಕ್ಕದ್ದು.

(3) (1)ನೇ ಉಪಕರಣದ ಮೇರೆಗೆ ಮನೋರಂಜನೆಯ ಮಾಲೀಕನು, ನಿಯಮಿಸಿದ ದಿನಾಂಕಕ್ಕಿಂತ ಮುಂಚೆ ಯಾವುದೇ ವಿವರಪಟ್ಟಿಕೆಯನ್ನು ಒಪ್ಪಿಸದಿದ್ದರೆ ಅಥವಾ ಅವನು ಒಪ್ಪಿಸಿದ ವಿವರಪಟ್ಟಿಕೆಯೂ ಸರಿಯಾಗಿಲ್ಲ ಅಥವಾ ಅಪೂರ್ಣವಾಗಿದೆ ಎಂದು ನಿಯಮಿಸಿದ ಪ್ರಾಧಿಕಾರಿಗೆ ಕಂಡುಬಂದರೆ, ನಿಯಮಿಸಿದ ಪ್ರಾಧಿಕಾರಿಯು, ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ, 3, 3ಕ ಮತ್ತು 4ನೇ ಪ್ರಕರಣಗಳ ಮೇರೆಗೆ ಬಾಕಿ ಇರುವ ತೆರಿಗೆಯನ್ನು ನಿರ್ಧರಿಸತಕ್ಕದ್ದು ಮತ್ತು ಮಾಲೀಕನ ಬಗ್ಗೆ ತನ್ನ ಅತ್ಯುತ್ತಮ ವಿವೇಚನೆಗೆ ಅನುಸಾರವಾಗಿ ತೆರಿಗೆ ನಿರ್ಧರಿಸತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ, ಕ್ರಮಕೈಗೊಳ್ಳುವುದಕ್ಕೆ ಮುಂಚೆ ಮಾಲೀಕನು ಒಪ್ಪಿಸಿದ ಯಾವುದೇ ವಿವರಪಟ್ಟಿಕೆಯ ಸರಿತನ ಮತ್ತು ಪೂರ್ಣತೆಯನ್ನು ಅಥವಾ ತನ್ನಿಂದ ಯಾವುದೇ ವಿವರಪಟ್ಟಿಕೆಯು ಬಾಕಿಯಿರಲಿಲ್ಲವೆಂಬುದನ್ನು ರುಜುವಾತು ಪಡಿಸಲು ಅವನಿಗೆ ಯುಕ್ತ ಅವಕಾಶವನ್ನು ನೀಡತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ನಿರ್ಧರಣೆಯನ್ನು ಮಾಡುವಲ್ಲಿ, ನಿಯಮಿಸಿದ ಪ್ರಾಧಿಕಾರಿಯು, (1ಕ) ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯ ಸರಿಯಾದ ಮೊಬಲಗನ್ನು, ಮಾಲೀಕನು ಉದ್ದೇಶಪೂರ್ವಕ ತಪ್ಪು ನಿರೂಪಣೆಯಿಂದ ಅಥವಾ ಸಂಗತಿಯನ್ನು ಮುಚ್ಚಿಡುವುದರಿಂದಾಗಿ ಸಂದಾಯ ಮಾಡಿಲ್ಲವೆಂದು ಅದಕ್ಕೆ ಮನದಟ್ಟಾದರೆ, ನಿರ್ಧರಿಸಲಾದ ತೆರಿಗೆಯ ಜೊತೆಗೆ, ನಿರ್ಧರಿಸಲಾದ ತೆರಿಗೆ ಮತ್ತು (1ಕ) ಉಪಪ್ರಕರಣದ ಮೇರೆಗೆ ಸಂದಾಯ ಮಾಡಿದ ತೆರಿಗೆಯ ನಡುವಣ ವ್ಯತ್ಯಾಸದ ಮೊಬಲಗಿಗೆ ಸಮನಾದ ಮೊತ್ತಕ್ಕಿಂತ ಕಡಿಮೆ ಇಲ್ಲದ ಆದರೆ, ಅದರ ಮೂರರಷ್ಟನ್ನು ಮೀರದ ದಂಡವನ್ನು ಸಂದಾಯ ಮಾಡುವಂತೆ ಮಾಲೀಕನಿಗೆ ನಿರ್ದೇಶಿಸಬಹುದು.

**6ಖ. ನಿರ್ಧರಣೆಯಿಂದ ತಪ್ಪಿಸಿಕೊಂಡ ಪ್ರವೇಶಕ್ಕಾಗಿನ ಸಂದಾಯ, ಇತ್ಯಾದಿ,–**

(1) ಯಾವುದೇ ಕಾರಣಕ್ಕಾಗಿ:

(i) ಯಾವುದೇ ಮನರಂಜನೆ ಪ್ರವೇಶಕ್ಕಾಗಿ ಯಾವುದೇ ಗೌರವಾರ್ಥ ಟಿಕೆಟ್ ಅಥವಾ ಯಾವುದೇ ಸಂದಾಯವು 3ನೇ ಪ್ರಕರಣ ಅಥವಾ 3ಕ ಪ್ರಕರಣದ ಮೇರೆಗೆ ತೆರಿಗೆಯ ನಿರ್ಧರಣೆಯಿಂದ ತಪ್ಪಿಸಿಕೊಂಡಿರುವಲ್ಲಿ; ಅಥವಾ...

(ii) ಯಾವುದೇ ಚಲನಚಿತ್ರ ಪ್ರದರ್ಶನವು 4 ಅಥವಾ 4ಕ ಪ್ರಕರಣದ ಮೇರೆಗೆ ತೆರಿಗೆಯ ನಿರ್ಧರಣೆಯಿಂದ ತಪ್ಪಿಸಿಕೊಂಡವರಲ್ಲಿ: ಅಥವಾ

(iii) ಅಂಥ ಟಿಕೆಟ್, ಸಂದಾಯ ಅಥವಾ ಪ್ರದರ್ಶನವು 3ನೇ ಪ್ರಕರಣ ಅಥವಾ 3ಕ ಪ್ರಕರಣ ಅಥವಾ 4ನೇ ಪ್ರಕರಣ ಅಥವಾ 4ಕ ಪ್ರಕರಣದ ಮೇರೆಗೆ ಅದು ನಿರ್ಧರಣೀಯವಾಗಬಹುದಾದಂಥ ದರಕ್ಕಿಂತ ಕಡಿಮೆ ದರದಲ್ಲಿ ನಿರ್ಧರಣೆಯಾಗಿರುವಲ್ಲಿ:

6ಕ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರವು (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಮತ್ತು ನಿಯಮಿಸಬಹುದಾದಂಥ ಕಾಲದೊಳಗೆ ಯಾವುದೇ ಕಾಲದಲ್ಲಿ ಮಾಲೀಕನಿಗೆ ನೋಟೀಸನ್ನು ಜಾರಿ ಮಾಡಿದ ತರುವಾಯ ಮತ್ತು ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಸಂದರ್ಭಾನುಸಾರ 3ನೇ ಪ್ರಕರಣ ಅಥವಾ 3ಕ ಪ್ರಕರಣ ಅಥವಾ 4ನೇ ಪ್ರಕರಣ ಅಥವಾ 4ಕ ಪ್ರಕರಣದ ಮೇರೆಗೆ ಅಂಥ ಟಿಕೆಟ್ಟು ಸಂದಾಯ ಅಥವಾ ಪ್ರದರ್ಶನದ ಮೇಲೆ ಬಾಕಿಯಿರುವ ತೆರಿಗೆಯನ್ನು ತನ್ನ ಅತ್ಯುತ್ತಮ ವಿವೇಚನೆಗೆ ಅನುಸರವಾಗಿ ನಿರ್ಧರಿಸಬಹುದು ಅಥವಾ ಮರು ನಿರ್ಧರಿಸಬಹುದು.

(2) (1) ನೇ ಉಪಪ್ರಕರಣದ ಮೇರೆಗೆ ನಿರ್ಧರಣೆ ಅಥವಾ ಮರು ನಿರ್ಧರಣೆಯನ್ನು ಮಾಡುವಲ್ಲಿ 6ಕ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರಿಯು, ಮಾಲೀಕನ ಉದ್ದೇಶಪೂರ್ವಕ ತಪ್ಪು ನಿರೂಪಣೆ ಅಥವಾ ಸಂಗತಿಗಳ ಮುಚ್ಚುವಿಕೆಯಿಂದಾಗಿ ತೆರಿಗೆಯನ್ನು ವಿಧಿಸಲಾಗಿಲ್ಲ ಅಥವಾ ಅದನ್ನು ವಿಧಿಸಬೇಕಾಗಿದ್ದ ದರಕ್ಕಿಂತ ಕಡಿಮೆ ದರದಲ್ಲಿ ವಿಧಿಸಲಾಗಿದೆ ಎಂದು ಅದಕ್ಕೆ ಮನದಟ್ಟಾದರೆ, (1)ನೇ ಉಪ ಪ್ರಕರಣದ ಮೇರೆಗೆ ನಿರ್ಧರಿಸಿದ ಅಥವಾ ಮರು ನಿರ್ಧರಿಸಿದ ತೆರಿಗೆಯ ಜೊತೆಗೆ, ಹಾಗೆ ನಿರ್ಧರಿಸಿದ ಅಥವಾ ಮರು ನಿರ್ಧರಿಸಿದ ತೆರಿಗೆಗೆ ಸಮನಾದ ಮೊತ್ತಕ್ಕಿಂತ ಕಡಿಮೆಯಿಲ್ಲದ, ಆದರೆ ಅದರ ಮೂರರಷ್ಟನ್ನು ಮೀರದ ದಂಡವನ್ನು ಸಂದಾಯ ಮಾಡುವಂತೆ ಮಾಲೀಕನಿಗೆ ನಿರ್ದೇಶಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ದಂಡವನ್ನು ಬಾಧಿತನಾದ ಮಾಲೀಕನಿಗೆ ಅಂಥ ವಿಧಿಸುವಿಕೆ ವಿರುದ್ಧವಾಗಿ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ವಿಧಿಸತಕ್ಕದ್ದಲ್ಲ.

(3) (1) ನೇ ಉಪಪ್ರಕರಣದ ಮೇರೆಗಿನ ಅಧಿಕಾರಗಳನ್ನು, ಆ ವಿಷಯದ ಬಗ್ಗೆ ಮಾಡಿದ ನಿರ್ಧರಣೆಯ ಮೂಲ ಆದೇಶ ಯಾವುದಾದರೂ ಇದ್ದರೆ, ಅದು ಅಪೀಲು ಅಥವಾ ಪುನರೀಕ್ಷಣೆಯ ವಸ್ತು ವಿಷಯವಾಗಿದ್ದರೂ ಕೂಡ 6ಕ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರಿಯು ಚಲಾಯಿಸಬಹುದು.

(4) ಈ ಪ್ರಕರಣದ ಮೇರೆಗೆ ನಿರ್ಧರಣೆ ಅಥವಾ ಮರು ನಿರ್ಧರಣೆಗಾಗಿನ ಕಾಲ ಪರಿಮಿತಿಯ ಅವಧಿಯನ್ನು ಲೆಕ್ಕ ಹಾಕುವಲ್ಲಿ, ನಿರ್ಧರಣೆ ಅಥವಾ ಮರು ನಿರ್ಧರಣೆಗಾಗಿನ ವ್ಯವಹರಣೆಗಳನ್ನು ಸಿವಿಲ್

ನ್ಯಾಯಾಲಯ ಅಥವಾ ಇತರ ಸಕ್ರಮ ಪ್ರಾಧಿಕಾರಿಯ ಆದೇಶಗಳ ಮೇರೆಗೆ ತಡೆಹಿಡಿಯಲಾಗಿದ್ದಂಥ ಕಾಲವನ್ನು ಹೊರತುಪಡಿಸತಕ್ಕದ್ದು.

7. **ವಿನಾಯಿತಿಗಳು:** ರಾಜ್ಯ ಸರ್ಕಾರವು, ಆದೇಶದ ಮೂಲಕ, ಕರ್ನಾಟಕ ರಾಜ್ಯದ ಪ್ರಾದೇಶಿಕ ಭಾಷೆಯಲ್ಲಿನ ಚಲನಚಿತ್ರದ ಸಂಬಂಧದಲ್ಲಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಆರು ವಾರಗಳು ಮತ್ತು ಇತರ ಸಂಬಂಧದಲ್ಲಿ ಮೂರು ವಾರಗಳಿಗೆ ಮೀರದಂಥ ಅವಧಿಗಾಗಿ ಯಾವುದೇ ಮನೋರಂಜನೆಗೆ ಪ್ರವೇಶಕ್ಕಾಗಿನ ಸಂದಾಯಗಳ ಮೇಲೆ ಸಂದಾಯ ಮಾಡಬೇಕಾದ, ಮನೋರಂಜನಾ ತೆರಿಗೆಯ ದರದಲ್ಲಿ ವಿನಾಯಿತಿ ಅಥವಾ ಇಳಿತಾಯವನ್ನು,—

(i) ಮನೋರಂಜನೆಯ ಯಾವುದೇ ವೆಚ್ಚಗಳಿಗಾಗಿ ಅಂಥ ಉತ್ಪತ್ತಿಗಳ ಮೇಲೆ ಯಾವುದೇ ಚಾರ್ಜಿಲ್ಲದೆಯೇ ಮನೋರಂಜನೆಯ ಪೂರ್ಣ ಒಟ್ಟು ಉತ್ಪತ್ತಿಗಳನ್ನು ಲೋಕೋಪಕಾರಿ, ಧಾರ್ಮಿಕ ಅಥವಾ ಧರ್ಮಾರ್ಥ ಉದ್ದೇಶಗಳಿಗಾಗಿ ವಿನಿಯೋಗಿಸಲಾಗುತ್ತಿದೆ:

(ii) ಮನೋರಂಜನೆಯು ಪೂರ್ಣವಾಗಿ ಶೈಕ್ಷಣಿಕ ಸ್ವರೂಪದ್ದಾಗಿದೆ; ಅಥವಾ

(iii) ಮನೋರಂಜನೆಯು ನಿಯಮಿಸಿದ ಷರತ್ತುಗಳನ್ನು ಈಡೇರಿಸಿ ಮತ್ತು ವಾಣಿಜ್ಯ ತೆರಿಗೆಗಳ ಕಮೀಷನರವರಿಂದ ಮಾನ್ಯತೆ ಪಡೆದ ಚಲನಚಿತ್ರ ಕ್ಲಬ್ ಅಥವಾ ಚಲನಚಿತ್ರ ಸಂಘವು ನಡೆಸಿದ ಚಲನಚಿತ್ರ ಪ್ರದರ್ಶನವೆಂದು ಮತ್ತು ಯಾವುದೇ ಲಾಭವನ್ನು ಪಡೆಯದೆ ಪ್ರದರ್ಶನವನ್ನು ನಡೆಸಲಾಗುತ್ತಿದೆ; ಅಥವಾ

(iv) ಮನೋರಂಜನೆಯನ್ನು, ಲಾಭಕ್ಕಾಗಿ ನಡೆಸದ ಅಥವಾ ಸ್ಥಾಪಿಸದ ಸಂಸ್ಥೆಯಿಂದ ಭಾಗಶಃ ಶೈಕ್ಷಣಿಕ, ಸಾಂಸ್ಕೃತಿಕ, ಅಥವಾ ವೈಜ್ಞಾನಿಕದಂಥ ಉದ್ದೇಶಗಳಿಗಾಗಿ ಒದಗಿಸಲಾಗಿದೆ ಎಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ,—

(ಖ) ಮನೋರಂಜನೆಯು;

(i) ಕೇಂದ್ರ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಕೊಟ್ಟ ಪ್ರಶಸ್ತಿಯನ್ನು ಪಡೆದಿರುವಂಥ:

(ii) ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಯಾವುದೇ ಸಂಸ್ಥೆಯು, ಶೈಕ್ಷಣಿಕ ಚಲನಚಿತ್ರ ಅಥವಾ ಮಕ್ಕಳ ಚಲನಚಿತ್ರವೆಂದು ಪ್ರಮಾಣೀಕರಿಸಿದಂಥ;

(iii) ಕರ್ನಾಟಕ ರಾಜ್ಯದಲ್ಲಿ ತಯಾರಿಸಿದ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರವಲ್ಲದ ಇತರ ಯಾವ ಚಲನಚಿತ್ರವಾಗಿದ್ದು, ಭಾಷೆ, ವಸ್ತು, ಕಲಾತ್ಮಕ ಮೌಲ್ಯ ಮತ್ತು ನಿಯಮಿಸಬಹುದಾದ ಇತರೆ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು, ಈ ಖಂಡದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ರಚಿಸಿದ ಸಮಿತಿಯಿಂದ, ಸಂದಾಯ ಮಾಡಬೇಕಾದ ತೆರಿಗೆಯ ಶೇಕಡ ಐವತ್ತರಷ್ಟನ್ನು ಮೀರದ ತೆರಿಗೆಯ ಸಂದಾಯದಿಂದ ವಿನಾಯಿತಿ ನೀಡಬಹುದಾದಂಥ ಚಲನಚಿತ್ರವೆಂದು ಪ್ರಮಾಣೀಕರಿಸಿರುವಂಥ ಚಲನಚಿತ್ರದ ಚಲನಚಿತ್ರ ಪ್ರದರ್ಶನವಾಗಿದ್ದರೆ;

–ಮಾಡಬಹುದು.

(2) ಉಪಪ್ರಕರಣ (1) ರ ಮೇರೆಗೆ ಮಾಡಿದ ಆದೇಶವು, ಆ ಆದೇಶದಲ್ಲಿ ನಿರ್ದಿಷ್ಟಪಡಿಸಲಾದಂಥ ಪರಿಬಂಧಗಳು ಮತ್ತು ಷರತ್ತುಗಳಿಗೆ (ಮನೋರಂಜನೆಗಳಿಗೆ ಪ್ರವೇಶಕ್ಕಾಗಿನ ಸಂದಾಯವನ್ನು ಹೆಚ್ಚಿಸಕೂಡದು ಎಂಬ ಷರತ್ತನ್ನು ಒಳಗೊಂಡು) ಒಳಪಟ್ಟಿರಬಹುದು.

(3) (1) ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಯಾವುದೇ ಆದೇಶವನ್ನು ರಾಜ್ಯಸರ್ಕಾರವು ಆದೇಶದ ಮೂಲಕ ರದ್ದುಪಡಿಸಬಹುದು ಅಥವಾ ಮಾರ್ಪಡಿಸಬಹುದು.

(4) ಉಪಪ್ರಕರಣ (2)ರ ಮೇರೆಗಿನ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಪರಿಬಂಧ ಅಥವಾ ಷರತ್ತನ್ನು ಉಲ್ಲಂಘಿಸಿದರೆ ಅಥವಾ ಪಾಲಿಸದಿದ್ದರೆ, ಉಪಪ್ರಕರಣ (1)ರ ಮೇರೆಗಿನ ಆದೇಶದ ಉಪಬಂಧಗಳು ಸದರಿ ಮನೋರಂಜನೆಗೆ ಅನ್ವಯವಾಗಿರದಿದ್ದರೆ ಹೇಗೋ ಹಾಗೆ, ಮಾಲೀಕನು ಮನೋರಂಜನೆ ತೆರಿಗೆಯ ಸಂದಾಯಕ್ಕೆ ಹೊಣೆಯಾಗಿರತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ ಮನೋರಂಜನಾ ತೆರಿಗೆಯು ಅಧಿಭಾರವನ್ನು ಸಹ ಒಳಗೊಳ್ಳುತ್ತದೆ.

**8. ಕೆಲವು ಪ್ರಕರಣಗಳಲ್ಲಿ ಮರುಪಾವತಿಗಳು:–** (1) ಮನೋರಂಜನೆಯ ಇಡೀ ನಿವ್ವಳ ಉತ್ಪತ್ತಿಗಳನ್ನು ಲೋಕೋಪಕಾರಿ, ಧಾರ್ಮಿಕ ಅಥವಾ ಧರ್ಮಾರ್ಥ ಉದ್ದೇಶಗಳಿಗಾಗಿ ವಿನಿಯೋಗಿಸಲಾಗುತ್ತಿದೆ ಮತ್ತು ನಿವ್ವಳ ಉತ್ಪತ್ತಿಗಳನ್ನು ಲೆಕ್ಕ ಹಾಕುವಾಗ ಒಟ್ಟು ಉತ್ಪತ್ತಿಗಳ ಶೇಕಡ ಇಪ್ಪತ್ತೈದಕ್ಕಿಂತ ಹೆಚ್ಚಲ್ಲದಷ್ಟನ್ನು ಮನೋರಂಜನೆಯ ವೆಚ್ಚದ ಬಗ್ಗೆ ಕಳೆಯಲಾಗಿದೆಯೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದಲ್ಲಿ ಅದು ಆದೇಶದ ಮೂಲಕ ಆ ಮನೋರಂಜನೆಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ಮನೋರಂಜನಾ ತೆರಿಗೆಯ ಮೊಬಲಗನ್ನು ಮಾಲೀಕನಿಗೆ ಮರು ಸಂದಾಯ ಮಾಡುವಂತೆ ನಿರ್ದೇಶಿಸತಕ್ಕದ್ದು.

(2) ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಚಲನಚಿತ್ರದ ಪ್ರದರ್ಶನವನ್ನು ವಿದ್ಯುಚ್ಛಕ್ತಿ ವಿಫಲತೆಯಿಂದಾಗಿ ಅಥವಾ ಯಾಂತ್ರಿಕ ಕುಸಿತದಿಂದಾಗಿ ಪೂರ್ಣಗೊಳಿಸಲಾಗಲಿಲ್ಲವೆಂದು ಮತ್ತು ಅಂಥ ಪ್ರದರ್ಶನಕ್ಕೆ ಪ್ರವೇಶ ಪಡೆದ ವ್ಯಕ್ತಿಗಳಿಗೆ ಪ್ರವೇಶಕ್ಕಾಗಿನ ಸಂದಾಯವನ್ನು ಮಾಲೀಕನು ಹಿಂತಿರುಗಿಸಿದ್ದಾನೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು ಅಂಥ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಅವನು ಸಂದಾಯ ಮಾಡಿದ ಮನೋರಂಜನಾ ತೆರಿಗೆಯ ಮೊಗಲಗನ್ನು ಮಾಲೀಕನಿಗೆ ಮರುಪಾವತಿ ಮಾಡಲು ಆದೇಶದ ಮೂಲಕ ನಿರ್ದೇಶಿಸಬಹುದು.

**8ಕ. ತೆರಿಗೆ ಇತ್ಯಾದಿಗಳನ್ನು ಪೂರ್ಣಾಂಕಕ್ಕೆ ತರುವುದು:–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಪ್ರವೇಶ, ಅಧಿಭಾರ, ಜುಲ್ಮಾನೆ, ದಂಡ ಅಥವಾ ಸಂದಾಯ ಮಾಡಬೇಕಾಗಿರುವ ಯಾವುದೇ ಇತರ ಮೊಬಲಗು ಮತ್ತು ಬಾಕಿಯಾಗುವ ಮರು ಪಾವತಿಯ ಮೊಬಲಗು ಇವುಗಳಿಗಾಗಿನ ಪ್ರತಿಯೊಂದು ಸಂದಾಯಕ್ಕೆ ಸಂಬಂಧಿಸಿದಂತೆ ತೆರಿಗೆಯ ಮೊಬಲಗನ್ನು ಐದು ಪೈಸೆಯ ಮುಂದಿನ ಹೆಚ್ಚಿನ ಗುಣಕದ ಪೂರ್ಣಾಂಕಕ್ಕೆ ತರತಕ್ಕದ್ದು.

**9. ತೆರಿಗೆಯ ಸಂದಾಯ ಮತ್ತು ವಸೂಲಿ:–** (1) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಅಧಿಭಾರವನ್ನು ಒಳಗೊಂಡು ತೆರಿಗೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಂತುಗಳಲ್ಲಿ ಯಾವುದಾದರೂ ಇದ್ದರೆ ಮತ್ತು ಅಂಥ ಕಾಲದೊಳಗೆ ಸಂದಾಯ ಮಾಡತಕ್ಕದ್ದು.

(2) (1) ನೇ ಉಪಪ್ರಕರಣಕ್ಕೆ ಅನುಸಾರವಾಗಿ ಸಂದಾಯ ಮಾಡುವಲ್ಲಿ ತಪ್ಪಿದರೆ:–

(i) ತಪ್ಪಿದ ದಿನಾಂಕದಂದು ವಸೂಲಾಗದೆ ಇರುವ ಎಲ್ಲಾ ಮೊಬಲಗು ಕೂಡಲೇ ಸಲ್ಲತಕ್ಕದ್ದಾಗಿರತಕ್ಕದ್ದು ಮತ್ತು ಅಂಥ ತೆರಿಗೆ, ಅಧಿಭಾರ ಅಥವಾ ಹೆಚ್ಚು ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಮಾಲೀಕನ ಸ್ವತ್ತುಗಳ ಮೇಲೆ ಅದು ಋಣಭಾರವಾಗಿರತಕ್ಕದ್ದು: ಮತ್ತು

(ii) ಈ ಅಧಿನಿಯಮದ ಮೇರೆಗೆ, ಅಧಿಭಾರವನ್ನು ಒಳಗೊಂಡು ಅಂಥ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಮಾಲೀಕನು,–

(ಕ) (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಿದ ಕಾಲವು ಮುಕ್ತಾಯವಾದ ತರುವಾಯ ಮೊದಲ ಮೂರು ತಿಂಗಳುಗಳಿಗಾಗಿ ಪ್ರತಿ ತಿಂಗಳಿಗೆ ಸಂದಾಯವಾಗದೆ ಉಳಿದಿರುವ, ಅಧಿಭಾರವನ್ನು ಒಳಗೊಂಡು ತೆರಿಗೆಯ ಮೊಬಲಗಿನ ಶೇಕಡ ಒಂದರಷ್ಟಕ್ಕೆ; ಮತ್ತು

(ಖ) ಹಿಂದೆ ಹೇಳಿದಂತೆ ಮೊದಲ ಮೂರು ತಿಂಗಳುಗಳಿಗೆ ತರುವಾಯ ಪ್ರತಿ ತಿಂಗಳಿಗಾಗಿ ಅಂಥ ಮೊಬಲಗಿನ ಶೇಕಡಾ ಎರಡೂವರೆಯಷ್ಟಕ್ಕೆ;

– ಸಮನಾದ ದಂಡವನ್ನು ಸಂದಾಯ ಮಾಡಲು ಹೊಣೆಗಾರನಾಗತಕ್ಕದ್ದು.

**ವಿವರಣೆ:–** (1)ನೇ ಖಂಡದ ಉದ್ದೇಶಗಳಿಗಾಗಿ, ಒಂದು ತಿಂಗಳಿನ ಒಂದು ಭಾಗಕ್ಕಾಗಿ ಸಂದಾಯ ಮಾಡಬೇಕಾದ ದಂಡವನ್ನು ಪ್ರಮಾಣಬದ್ಧವಾಗಿ ನಿರ್ಧರಿಸತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ಸಲ್ಲಬೇಕಾದ ಅಧಭಾರವನ್ನು ಒಳಗೊಂಡು ತೆರಿಗೆಯ ಯಾವುದೇ ಮೊಬಲಗನ್ನು ಅಥವಾ ದಂಡವನ್ನು ಒಳಗೊಂಡ ಇತರ ಯಾವುದೇ ಮೊಬಲಗನ್ನು ಸಂಗ್ರಹಣೆಯು ಯಾವುದೇ ಇತರ ವಿಧಾನಕ್ಕೆ ಬಾಧಕವಾಗದಂತೆ;

(ಕ) ಅದು ಭೂ ಕಂದಾಯದ ಬಾಕಿಯಾಗಿದ್ದಿದ್ದರೆ ಹೇಗೋ ಹಾಗೆ; ಅಥವಾ

(ಖ) 1973 ರ ದಂಡ ಪ್ರಕ್ರಿಯಾ ಸಂಹಿತೆ (1974 ರ ಕೇಂದ್ರ ಅಧಿನಿಯಮ (2) ಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ಮ್ಯಾಜಿಸ್ಟ್ರೇಟನಿಗೆ ಸಲ್ಲಿಸಿದ ಅರ್ಜಿಯ ಮೇಲೆ ಅದು ಅವನು ವಿಧಿಸಿದ ಜುಲ್ಮಾನೆಯಾಗದಿದ್ದರೆ ಹೇಗೋ ಹಾಗೆ, ಅಂಥ ಮ್ಯಾಜಿಸ್ಟ್ರೇಟನು;

– ವಸೂಲ್ಮಾಡಬಹುದು.

(4) ಉಚ್ಚ ನ್ಯಾಯಾಲಯವು, ತಾನಾಗಿಯೇ ಆಗಲಿ ನಿಯಮಿಸಿದ ಪ್ರಾಧಿಕಾರಿಯ ಅಥವಾ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯ ಯಾವುದೇ ಅರ್ಜಿಯ ಮೇಲಾಗಲೀ (3)ನೇ ಉಪಪ್ರಕರಣದ (ಖ) ಖಂಡದ ಮೇರೆಗೆ ಮ್ಯಾಜಿಸ್ಟ್ರೇಟನು ಮಾಡಿದ ಯಾವುದೇ ಆದೇಶವನ್ನು ಪುನರೀಕ್ಷಿಸಬಹುದು.

**10. ಪರಿಶೀಲನೆ:–** (1) (ಕ) ರಾಜ್ಯ ಸರ್ಕಾರವು ಈ ಬಗ್ಗೆ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲಿಸಲಾಗುತ್ತಿದೆಯೇ ಹೇಗೆ ಎಂಬುದನ್ನು ಅವನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮನೋರಂಜನೆಯು ನಡೆಯುತ್ತಿರುವಲ್ಲಿ ಮನೋರಂಜನೆ ಸ್ಥಳ ಮತ್ತು ಮನೋರಂಜನೆಗಳ ಸ್ಥಳವಾಗಿ ಸಾಮಾನ್ಯವಾಗಿ ಉಪಯೋಗಿಸುತ್ತಿರುವ ಯಾವುದೇ ಸ್ಥಳಕ್ಕೆ ಯಾವುದೇ ಯುಕ್ತ ಕಾಲದಲ್ಲಿ ಪ್ರವೇಶಿಸಬಹುದು.

(ಕ) ಆ ಮಾಲೀಕನು, ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ತೆರಿಗೆ, ಅಧಿಭಾರದ ಸಂದಾಯವನ್ನು ತಪ್ಪಿಸಿಕೊಳ್ಳುತ್ತಿದ್ದಾನೆ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ ಎಂದು ಅಂಥ ಯಾವನೇ ಅಧಿಕಾರಿಗೆ ಸಂಶಯ ಪಡಲು ಕಾರಣವಿದ್ದರೆ, ಅವನು ಬರಹದಲ್ಲಿ ದಾಖಲು ಮಾಡುವ ಕಾರಣಗಳಿಗಾಗಿ ಅವನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಮಾಲೀಕನ ಪತ್ರಗಳು, ರಿಜಿಸ್ಟರುಗಳು, ಟಿಕೆಟ್ ಪುಸ್ತಕಗಳು, ಅಥವಾ ಇತರೆ ದಸ್ತಾವೇಜುಗಳು ಅಥವಾ ವಸ್ತುಗಳನ್ನು ಅಭಿಗ್ರಹಿಸಬಹುದು ಮತ್ತು ಮಾಲೀಕನಿಗೆ ಅದಕ್ಕಾಗಿ ರಸೀದಿಯನ್ನು ಕೊಡತಕ್ಕದ್ದು. ಆ ತರುವಾಯ ಹಾಗೆ ಅಭಿಗ್ರಹಿಸಿದ ಲೆಕ್ಕಪತ್ರಗಳು,

ರಿಜಿಸ್ಟರುಗಳು, ಟಿಕೇಟ್ ಪುಸ್ತಕಗಳು ಮತ್ತು ಅಥವಾ ಇತರೆ ದಸ್ತಾವೇಜುಗಳು ಅಥವಾ ವಸ್ತುಗಳನ್ನು ಆದಷ್ಟು ಬೇಗನೆ ಸಂಬಂಧಪಟ್ಟ ನಿಯಮಿಸಿದ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು. ಅವನು ಅವುಗಳನ್ನು, ಈ ಅಧಿನಿಯಮದ ಮೇರೆಗೆ ಅವುಗಳ ಪರೀಕ್ಷೆ ಮತ್ತು ಯಾವುದೇ ವಿಚಾರಣೆ ಅಥವಾ ವ್ಯವಹರಣೆಗಳಿಗೆ ಅವಶ್ಯಕವಾಗಬಹುದಾದಷ್ಟು ಕಾಲದವರೆಗೆ ಮಾತ್ರ ಇಟ್ಟುಕೊಳ್ಳತಕ್ಕದ್ದು:

ಪರಂತು, ಅಂಥ ಲೆಕ್ಕಪತ್ರಗಳ, ರಿಜಿಸ್ಟರುಗಳು, ಟಿಕೆಟ್ ಪಸ್ತಕಗಳೂ ಅಥವಾ ಇತರೆ ದಸ್ತಾವೇಜುಗಳನ್ನು ರಾಜ್ಯ ಸರ್ಕಾರದ ಅನುಮತಿಯಿಂದ ಹೊರತು ಒಂದು ಬಾರಿಗೆ ಮೂವತ್ತು ದಿನಗಳಿಗಿಂತ ಹೆಚ್ಚಿಗೆ ಇಟುಕೊಳ್ಳತಕ್ಕದ್ದಲ್ಲ.

(ಖ) ಹಾಗೆ, ಅಧಿಕೃತವಾದ ಪ್ರತಿಯೊಬ್ಬ ಅಧಕಾರಿಯನ್ನು, ಭಾರತೀಯ ದಂಡ ಸಂಹಿತೆಯ (1860 XLV ನೇ ಕೇಂದ್ರ ಅಧಿನಿಯಮ) 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರನಾಗಿರುವುದಾಗಿ ಭಾವಿಸತಕ್ಕದ್ದು.

(2) ಪ್ರತಿಯೊಂದು ಮನೋರಂಜನೆಯ ಮಾಲೀಕನು ಅಥವಾ ಮನೋರಂಜನೆಯ ಸ್ಥಳವಾಗಿ ಸಾಮಾನ್ಯವಾಗಿ ಉಪಯೋಗಿಸಿದ ಯಾವುದೇ ಸ್ಥಳದ ಒಡೆಯನು ಅಥವಾ ಅದರ ಪ್ರಭಾರದಲ್ಲಿರುವ ವ್ಯಕ್ತಿಯು (1)ನೇ ಉಪಪ್ರಕರಣದ ಮೇರೆಗೆ ಅವನ ಕರ್ತವ್ಯಗಳನ್ನು ನೆರವೇರಿಸುವಲ್ಲಿ ಪರಿಶೀಲನಾ ಅಧಿಕಾರಿಗೆ ಎಲ್ಲ ಯುಕ್ತ ಸಹಾಯವನ್ನು ಕೊಡತಕ್ಕದ್ದು.

(3) ಯಾವನೇ ವ್ಯಕ್ತಿಯು ಪರಿಶೀಲನಾ ಅಧಿಕಾರಿಯ ಪ್ರವೇಶವನ್ನು ತಡೆಗಟ್ಟಿದರೆ ಅಥವಾ ಅಡ್ಡಿಪಡಿಸಿದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವ ಶಿಕ್ಷೆಗೆ ಅವನು ಗುರಿಯಾಗಬಹುದೋ ಆ ಯಾವುದೇ ಇತರೆ ಶಿಕ್ಷೆಯ ಜೊತೆಗೆ ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ದಂಡದಿಂದ ದಂಡನೀಯನಾಗತಕ್ಕದ್ದು.

**11. ಸಂದಾಯ ಮಾಡದೆ ಕೆಲವು ಅಧಿಕಾರಿಗಳ ಪ್ರವೇಶ:–** 10ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರಿಗೆ ಅಥವಾ ಈ ಅಧಿನಿಯಮ ಅಥವಾ ಇತರೆ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅದರಿಂದ ವಿಧಿಸಲಾದ ಕರ್ತವ್ಯದ ಅನುಸರಣೆಯಲ್ಲಿ ಮನರಂಜನೆಯ ಯಾವುದೇ ಸ್ಥಳವನ್ನು ಪ್ರವೇಶಿಸುವ ಇತರೆ ಯಾವನೇ ಅಧಿಕಾರಿಗೆ ಮನರಂಜನೆಗೆ ಅವನು ಪ್ರವೇಶಿಸುವುದಕ್ಕಾಗಿ ಸಂದಾಯ ಮಾಡುವಂತೆ ಅಗತ್ಯಪಡಿಸತಕ್ಕದಲ್ಲ.

**12. ದಂಡಗಳು:–** (1) (ಕ) 5ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಮನೋರಂಜನೆಯ ಸ್ಥಳಕ್ಕೆ ಯಾವನೇ ವ್ಯಕ್ತಿಗೆ ಪ್ರವೇಶವನ್ನು ಕೊಡುವ ಯಾವುದೇ ಮನರಂಜನೆಯ ಮಾಲೀಕ ಅಥವಾ ಯಾವುದೇ ಮನೋರಂಜನೆಯ ಸ್ಥಳದಲ್ಲಿ ಅವನಿಂದ ನಿಯೋಜಿತನಾದ ಯಾವನೇ ವ್ಯಕ್ತಿಯು; ಅಥವಾ

(ಖ) (i) ಈ ಅಧಿನಿಯಮದ ಮೇರೆಗೆ ಸಲ್ಲತಕ್ಕ ಯಾವುದೇ ತೆರಿಗೆಯನ್ನು ಸಂದಾಯ ಮಾಡಲು ಮೋಸದಿಂದ ತಪ್ಪಿಸಿಕೊಳ್ಳುವ; ಅಥವಾ

(ii) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾವುದೇ ಮನೋರಂಜನೆಯ ಮಾಲೀಕನು,– ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳಿಗೆ ವಿಸ್ತರಿಸಬಹುದಾದಂಥ ಸಾದಾ ಕಾರವಾಸ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು:

ಪರಂತು, ನ್ಯಾಯಾಲಯದ ತೀರ್ಪಿನಲ್ಲಿ ನಮೂದಿಸಬೇಕಾದ ತದ್ವಿರುದ್ಧವಾಗಿ ವಿಶೇಷ ಮತ್ತು ಸಾಕಷ್ಟು ಕಾರಣಗಳು ಇಲ್ಲದಿರುವಲ್ಲಿ ಅಂಥ ಜುಲ್ಮಾನೆಯು. (ಕ) ಖಂಡದ ಅಥವಾ (ಖ) ಖಂಡದ (1)ನೇ ಉಪಬಂಧದ ಮೇರೆಗೆ ಬರುವ ಅಪರಾಧದ ಸಂದರ್ಭದಲ್ಲಿ ಒಂದು ಸಾವಿರ ರೂಪಾಯಿಗಳಿಗೂ ಕಡಿಮೆ ಇಲ್ಲದಷ್ಟು ಇರತಕ್ಕುದು.

(2) ಮನೋರಂಜನೆಯ ಯಾವುದೇ ಸ್ಥಳದಲ್ಲಿ ಟಿಕೆಟ್ ಇಲ್ಲದೆ, ಕಂಡುಬರುವ ಯಾವನೇ ವ್ಯಕ್ತಿಯನ್ನು ಅದಕ್ಕೆ ತದ್ವಿರುದ್ಧವಾಗಿ ರುಜುವಾತುಪಡಿಸುವವರಿಗೆ, ಮನೋರಂಜನೆ ಮಾಲೀಕ ಅಥವಾ ಅಂಥ ಸ್ಥಳದಲ್ಲಿ ಅಂಥ ಮಾಲೀಕನಿಂದ ನಿಯೋಜಿತನಾದ ವ್ಯಕ್ತಿಯು 5ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಅವನಿಗೆ ಪ್ರವೇಶ ಕೊಟ್ಟಿದ್ದಾನೆ ಎಂದು ಭಾವಿಸತಕ್ಕದ್ದು.

**12ಕ. ಕೆಲವು ಪ್ರಕರಣಗಳ ಸಂಕ್ಷಿಪ್ತ ವಿಲೆ:–** (1) 12ನೇ ಪ್ರಕರಣದ (1)ನೇ ಉಪಪ್ರಕರಣದ (ಖ) ಖಂಡದ (ii) ಉಪಖಂಡದ ಮೇರೆಗಿನ ಅಪರಾಧ ಸಂಜ್ಞೇಯತೆಯನ್ನು ತೆಗೆದುಕೊಳ್ಳುವ ನ್ಯಾಯಾಲಯವು, ಆರೋಪಿತ ವ್ಯಕ್ತಿಗೆ ಜಾರಿ ಮಾಡಬೇಕಾದ ಸಮನ್ಸಿನ ಮೇಲೆ ಆರೋಪದ ಸುನಾವಣೆಗೆ ಮುಂಚೆ ನಿರ್ದಿಷ್ಟಪಡಿಸಿದ ದಿನಾಂಕದಂದು ಅವನು ಆರೋಪಕ್ಕೆ ರಿಜಿಸ್ಟರ್ಡ್ ಪತ್ರದ ಮೂಲಕ ತಪ್ಪನ್ನು ಒಪ್ಪಿಕೊಳ್ಳಬಹುದು ಮತ್ತು ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂತ ಎರಡು ನೂರು ರೂಪಾಯಿಗಳಿಗೆ ಮೀರದಂಥ ಮೊತ್ತವನ್ನು ನ್ಯಾಯಾಲಯಕ್ಕೆ ಕಳಿಸಬಹುದು ಎಂದು ತಿಳಿಸತಕ್ಕದ್ದು.

(2) ಆರೋಪಿತ ವ್ಯಕ್ತಿಯು ತಪ್ಪನ್ನು ಒಪ್ಪಿಕೊಂಡಲ್ಲಿ ಮತ್ತು (1) ಉಪ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಮೊತ್ತವನ್ನು ಕಳುಹಿಸುವಲ್ಲಿ, ನ್ಯಾಯಾಲಯವು ಆರೋಪಿಯ ಗೈರು ಹಾಜರಿಯಲ್ಲಿ ಸುನಾವಣೆ ಮಾಡಲು ಮುಂದುವರಿಯಬಹುದು ಮತ್ತು ಪ್ರಾಸಿಕ್ಯೂಟರನು ಕೂಡ ಅದೇ ರೀತಿಯಲ್ಲಿ ಗೈರು ಹಾಜರಾಗಿರಲಿ ಅಥವಾ ಆಗದಿರಲಿ ಎರಡೂ ಪಕ್ಷಗಳು ಹಾಜರಾಗಿದ್ದು ಮತ್ತು ಆರೋಪಿಯು ತಪ್ಪನ್ನು ಒಪ್ಪಿಕೊಂಡಿದ್ದರೆ ಹೇಗೋ ಹಾಗೆ ಪ್ರಕರಣವನ್ನು ವಿಲೆಮಾಡಬಹುದು.

**13. ಅಪರಾಧಗಳ ರಾಜಿ:–** ನಿಯಮಿಸಿದ ಪ್ರಾಧಿಕಾರಿಯು, ಈ ಅಧಿನಿಯಮಕ್ಕೆ ವಿರುದ್ಧವಾಗಿ ಅಪರಾಧವನ್ನು ಮಾಡಿರುವ ಅಥವಾ ಮಾಡಿದ್ದಾನೆಂದು ಯುಕ್ತವಾಗಿ ಶಂಕಿತನಾದ ಯಾವನೇ ವ್ಯಕ್ತಿಯಿಂದ ಅಂಥ ಅಪರಾಧದ ರಾಜಿಯ ರೂಪದಲ್ಲಿ,–

(ಕ) ಅಪರಾಧವು, ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ತೆರಿಗೆಯನ್ನು ಸಂದಾಯ ಮಾಡಲು ತಪ್ಪುವ ಅಥವಾ ತಪ್ಪಿಸಿಕೊಳ್ಳುವುದನ್ನು ಒಳಗೊಳ್ಳುವ ಅಪರಾಧವಾಗಿದ್ದಲ್ಲಿ, ಹಾಗೆ ಸಂದಾಯ ಮಾಡಬೇಕಾದ ತೆರಿಗೆಯ ಜೊತೆಗೆ ಎರಡು ಸಾವಿರ ರೂಪಾಯಿಗಳಿಗೆ ಮೀರದ ಹಣದ ಮೊತ್ತ ಅಥವಾ ಸಂದಾಯವಾಗಬೇಕಾದ ತೆರಿಗೆಯ ಮೊಬಲಗಿನ ಎರಡರಷ್ಟು ಇವುಗಳಲ್ಲಿ ಯಾವುದು ಹೆಚ್ಚಿನದೋ ಅದನ್ನು; ಮತ್ತು

(ಖ) ಇತರೆ ಪ್ರಕರಣಗಳಲ್ಲಿ ಎರಡು ಸಾವಿರ ರೂಪಾಯಿಗಳಿಗೆ ಮೀರಿದ ಹಣದ ಮೊತ್ತವನ್ನು

–ಅಂಗೀಕರಿಸಬಹುದು.

**14. ನಿರ್ದಿಷ್ಟ ವ್ಯವಹರಣೆಯ ಪ್ರತಿ ನಿಷೇಧ:–** (1) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಮಾಡಿರುವುದಾಗಿ ತಾತ್ಪರ್ಯವಾಗುವ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರದ ಯಾವನೇ ಅಧಿಕಾರಿ ಅಥವಾ ನೌಕರನು ಯಾವುದೇ ಅಂಥ ಕಾರ್ಯಕ್ಕೆ ಸಂಬಂಧಿಸಿದಂತೆ, ಆ ಕಾರ್ಯವನ್ನು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ವಿಧಿಸಿದ ಕರ್ತವ್ಯಗಳನ್ನು ನಿರ್ವಹಿಸುವ ಅಥವಾ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸದ್ಭಾವನೆಯಿಂದ ಮಾಡಿದ್ದರೆ ಅವನು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಗುರಿಯಾಗತಕ್ಕದ್ದಲ್ಲ.

**15. ನಿರ್ದಿಷ್ಟ ದಾವೆಗಳು ಮತ್ತು ಪ್ರಾಸಿಕ್ಯೂಷನ್‌ಗಳಿಗೆ ಕಾಲಪರಿಮಿತಿ:–** ಈ ಅಧಿನಿಯಮದ ಮೇರೆಗೆ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ದೂರಿದ ಕಾರ್ಯದ ದಿನಾಂಕದಿಂದ ಆರು ತಿಂಗಳೊಳಗಾಗಿ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ವ್ಯವಹರಣೆಯನ್ನು ಹೂಡಿದ ಹೊರತು, ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಹೂಡತಕ್ಕುದ್ದಲ್ಲ ಮತ್ತು ರಾಜ್ಯ ಸರ್ಕಾರದ ಯಾವನೇ ಅಧಿಕಾರಿ ಅಥವಾ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**16. ರಾಜ್ಯ ಸರ್ಕಾರದ ನಿರ್ದಿಷ್ಟ ಅಧಿಕಾರಗಳ ಪ್ರತ್ಯಾಯೋಜನೆ:–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, 1ನೇ ಪ್ರಕರಣದ (3)ನೇ ಉಪ–ಪ್ರಕರಣ 18ನೇ ಪ್ರಕರಣ ಮತ್ತು ಈ ಪ್ರಕರಣದ ಮೂಲಕ ತನಗೆ ಪ್ರದಾನ ಮಾಡಿದವುಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಮೇರೆಗಿನ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಅಧೀನನಾಗಿರುವ ಯಾವನೇ ವ್ಯಕ್ತಿ ಅಥವಾ ಪ್ರಾಧಿಕಾರಿಗೆ ಪ್ರತ್ಯಾಯೋಜಿಸಬಹುದು. ಅದೇ ರೀತಿಯಲ್ಲಿ ಹಾಗೆ ಪ್ರತ್ಯಾಯೋಜಿಸಿದ ಯಾವುದೇ ಅಧಿಕಾರಗಳನ್ನು ಹಿಂತೆಗೆದುಕೊಳ್ಳಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಧಿಕಾರಗಳನ್ನು ಚಲಾಯಿಸುವುದು, ರಾಜ್ಯ ಸರ್ಕಾರವು ವಿಧಿಸಬಹುದಾದ ಪರಿಬಂಧಗಳು, ಮಿತಿಗಳು ಮತ್ತು ಷರತ್ತುಗಳು ಯಾವುದಾದರೂ ಇದ್ದರೆ ಅವುಗಳಿಗೆ ಒಳಪಟ್ಟಿರತಕ್ಕದ್ದು ಮತ್ತು ಅದರ ನಿಯಂತ್ರಣ ಮತ್ತು ಪುನರೀಕ್ಷಣೆಗೂ ಸಹ ಒಳಪಟ್ಟಿರತಕ್ಕದ್ದು.

**17. ಸ್ಥಳೀಯ ಪ್ರಾಧಿಕಾರಗಳಿಗೆ ನಷ್ಟ ಪರಿಹರದ ಸಂದಾಯ:–** (1) ಯಾವುದೇ ಸ್ಥಳೀಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ನಡೆಸಿದ ಮನೋರಂಜನೆಗೆ ಸಂಬಂಧಿಸಿದಂತೆ, ಪ್ರತಿವರ್ಷ ಸಂಗ್ರಹಿಸಿದ 3ನೇ ಪ್ರಕರಣದ ಮೇರೆಗಿನ ಮನೋರಂಜನಾ ತೆರಿಗೆಯ ಉತ್ಪತ್ತಿಗಳ ಶೇಕಡ ಹತ್ತರಷ್ಟನ್ನು ರಾಜ್ಯ ಸರ್ಕಾರಕ್ಕೆ ಜಮೆ ಮಾಡತಕ್ಕದ್ದು ಮತ್ತು ಉಳಿದ ಶೇಕಡ ತೊಂಬತ್ತರಷ್ಟನ್ನು ಸ್ಥಳೀಯ ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕದ್ದು:

ಪರಂತು, 4–ಕ ಪ್ರಕರಣದ ಮೇರೆಗೆ ಸಂಗ್ರಹಿಸಿದ ಮನೋರಂಜನಾ ತೆರಿಗೆಯ ಸಂದರ್ಭದಲ್ಲಿ, ರಾಜ್ಯ ಸರ್ಕಾರಕ್ಕೆ ಜಮಾ ಮಾಡಬಹುದಾದ ಮೊಬಲಗು ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾದ ಮೊಬಲಗು ಅನುಕ್ರಮವಾಗಿ ಉತ್ಪತ್ತಿಯ ಶೇಕಡ ಅರವತ್ತ ನಾಲ್ಕು ಮತ್ತು ಶೇಕಡ ಮೂವತ್ತ ನಾಲ್ಕು ಆಗಿರತಕ್ಕದ್ದು.

ಮತ್ತೂ ಪರಂತು, ಅಂಥ ಶಿಲ್ಕನ್ನು ಹಿಂದೆ ಹೇಳಿದ ಸ್ಥಳೀಯ ಪ್ರಾಧಿಕಾರ ಮತ್ತು ನೆರೆಹೊರೆಯಲ್ಲಿನ ಇತರೆ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಪ್ರಾಧಿಕಾರಗಳ ನಡುವೆ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ಪ್ರಮಾಣದಲ್ಲಿ ಹಂಚತಕ್ಕದ್ದೆಂದು ರಾಜ್ಯ ಸರ್ಕಾರವು ನಿರ್ದೇಶಿಸಬಹುದು:

ಅದೂ ಅಲ್ಲದೆ, ಈ ಉಪಪ್ರಕರಣದಲ್ಲಿ ಅಡಕಗೊಂಡಿರುವುದಾವುದೂ, ಆ ತೆರಿಗೆಯ ಉತ್ಪತ್ತಿಗಳಲ್ಲಿ ಶೇಕಡಾ ತೊಂಭತ್ತರಷ್ಟು ಇಡೀ ಶಿಲ್ಕನ್ನು ವಹಿಸಿಕೊಡುವಂಥ ಅಥವಾ ಸಂದರ್ಭಾನುಸಾರ ಅಂಥ ಶಿಲ್ಕನ್ನು ಯಾವ ಪ್ರಮಾಣದಲ್ಲಿ ಸ್ಥಳೀಯ ಪ್ರಾಧಿಕಾರಗಳ ನಡುವೆ ಹಂಚತಕ್ಕದ್ದೆಂದು ನಿಗದಿಪಡಿಸಲಾಗಿದೆಯೋ ಆ ಪ್ರಮಾಣವನ್ನು ನಿಗದಿಪಡಿಸುವಂಥ ಯಾವುದೇ ಆದೇಶವನ್ನು,–

(i) ಸಂಗತಿಯದೇ ಆಗಿರಲಿ ಅಥವಾ ಕಾನೂನಿನದೇ ಆಗಿರಲಿ ಯಾವುದೇ ತಪ್ಪಿನಿಂದಾಗಿ ಸದರಿ ಆದೇಶವನ್ನು ಮಾಡಲಾಗಿದೆಯೆಂದು; ಅಥವಾ

(ii) ಯಾವುದೇ ಮುಖ್ಯ ಸಂಗತಿಯ ಅರಿವಿಲ್ಲದೆ ಅಥವಾ ಅದನ್ನು ಸರಿಯಾಗಿ ಗಣನೆಗೆ ತೆಗೆದುಕೊಳ್ಳದೆ ಸದರಿ ಆದೇಶವನ್ನು ಮಾಡಲಾಗಿದೆಯೆಂದು; ಅಥವಾ

(iii) ಆದೇಶವನ್ನು ಮಾಡಿದ ಮೇಲೆ ಅದನ್ನು ಮಾರ್ಪಾಟುಗೊಳಿಸಲು ವಿಹಿತವೆನಿಸುವಂಥ ಯಾವುದೇ ಹೊಸ ಸಂದರ್ಭಗಳು ಉದ್ಭವಿಸಿವೆಯೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ಯಾವುದೇ ಕಾಲದಲ್ಲಿ ಮಾರ್ಪಾಟುಗೊಳಿಸಲು ರಾಜ್ಯ ಸರ್ಕಾರವನ್ನು ತಡೆಗಟ್ಟುವುದಾಗಿ ಭಾವಿಸತಕ್ಕದ್ದಲ್ಲ:

ಅದೂ ಅಲ್ಲದೆ, ಅಂಥ ಯಾವುದೇ ಮಾರ್ಪಾಟನ್ನು ಯಾವುದೇ ಅವಧಿಗೆ ಸಂಬಂಧಿಸಿದಂತೆ, ಆ ಅವಧಿಯು, ಮುಕ್ತಾಯವಾದ ಮೇಲೆ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ.

**ವಿವರಣೆ:–** ಈ ಉಪಪ್ರಕರಣದಲ್ಲಿ **"ವರ್ಷ"** ಎಂದರೆ ಹಣಕಾಸು ವರ್ಷ.

(2) ಯಾವುದೇ ಅವಧಿಗೆ ಸಂಬಂಧಿಸಿದಂತೆ (1)ನೇ ಉಪಪ್ರಕರಣದ ಎರಡನೇ ಪರಂತುಕದ ಮೇರೆಗೆ ಯಾವುದೇ ಮಾರ್ಪಾಟನ್ನು ಮಾಡಿದಾಗಲೆಲ್ಲಾ, ರಾಜ್ಯ ಸರ್ಕಾರವು ಯಾವುದೇ ಸ್ಥಳೀಯ ಪ್ರಾಧಿಕಾರದಿಂದ ಮಾರ್ಪಾಟು ಮಾಡಿದಂದಿನ ಆದೇಶಕ್ಕನುಸಾರವಾಗಿ ಅದು ಎಷ್ಟನ್ನು ಪಡೆಯಲು ಹಕ್ಕುಳ್ಳದ್ದಾಗಿರಬಹುದಾಗಿತ್ತೋ, ಅದಕ್ಕಿಂತ ಹೆಚ್ಚಾಗಿ ಅದಕ್ಕೆ ಸಂದಾಯ ಮಾಡಿದ ಯಾವುದೇ ಮೊತ್ತವನ್ನು ವಸೂಲ್ಮಾಡಬಹುದು.

**18. ನಿಯಮ ರಚನಾಧಿಕಾರ:–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು, ಪೂರ್ವ ಪ್ರಕರಣೆಯ ಷರತ್ತಿಗೊಳಪಟ್ಟು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯನ್ವಯಕ್ಕೆ ಬಾಧಕವಾಗದಂತೆ,—

(ಕ) ೦ ೦ ೦

(ಖ) ಒಬ್ಬರಿಗಿಂತ ಹೆಚ್ಚು ವ್ಯಕ್ತಿಗಳ ಪ್ರವೇಶನವನ್ನು ಒಳಗೊಳ್ಳುವ ಟಿಕೆಟ್‌ಗಳ ಉಪಯೋಗ ಮತ್ತು ಅವುಗಳ ಮೇಲೆ ತೆರಿಗೆಯನ್ನು ಲೆಕ್ಕ ಹಾಕುವುದು; ಮತ್ತು ಒಂದು ಮನೋರಂಜನೆಯ ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾಯಿಸುವದರ ಮೇಲೆ ತರಿಗೆ ಸಂದಾಯ ಮಾಡುವುದು ಮತ್ತು ಆಸನಗಳು ಅಥವಾ ಇತರ ಸ್ಥಳಾವಕಾಶಗಳಿಗಾಗಿನ ಸಂದಾಯಗಳಿಗಾಗಿ;

(ಖಖ) 4–ಕ ಪ್ರಕರಣದ ಮೇರೆಗೆ ಒಟ್ಟು ಸಂಗ್ರಹಣಾ ಸಾಮರ್ಥ್ಯ ಮತ್ತು ತೆರಿಗೆಯ ಸಂದಾಯವನ್ನು ನಿರ್ಧರಿಸುವುದಕ್ಕಾಗಿ;

(ಗ) ಅಡ್ಡಗಟ್ಟೆಗಳು ಮತ್ತು ಯಾಂತ್ರಿಕ ಸಾಧನೆಗಳ (ವಿಭಿನ್ನ ಮೊಬಲಗಿನ ಸಂದಾಯಗಳಿಗಾಗಿ ಅದೇ ಅಡ್ಡಗಟ್ಟೆ ಅಥವಾ ಯಾಂತ್ರಿಕ ಸಾಧನದ ಉಪಯೋಗದ ತಡೆಗಟ್ಟುವಿಕೆಯು ಒಳಗೊಂಡಂತೆ) ಉಪಯೋಗವನ್ನು ನಿಯಂತ್ರಿಸುವುದು ಮತ್ತು ಅಡ್ಡಗಟ್ಟೆ ಅಥವಾ ಯಾಂತ್ರಿಕ ಸಾಧನದ ಮೂಲಕ ಪ್ರದೇಶದ ಸರಿಯಾದ ದಾಖಲೆಗಳನ್ನು ಪಡೆಯುವುದಕ್ಕಾಗಿ;

(ಘ) ಮನೋರಂಜನೆಗಳ ಮಾಲೀಕರು ಪ್ರವೇಶಗಳನ್ನು ಪರೀಕ್ಷಿಸುವುದು, ಲೆಕ್ಕ ಪತ್ರಗಳನ್ನು ಇಡುವುದು ಮತ್ತು ವಿವರಪಟ್ಟಿಕೆಗಳನ್ನು ಒದಗಿಸುವುದಕ್ಕಾಗಿ.

(ಙ) ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಅಪೀಲುಗಳು ಮತ್ತು ಪುನರೀಕ್ಷಣೆಗಳು, ಅಂಥ ಅಪೀಲುಗಳನ್ನು ಸಲ್ಲಿಸತಕ್ಕ ಕಾಲಾವಧಿ ಮತ್ತು ಅಂಥ ಅಪೀಲುಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಫೀಜಿಗಾಗಿ;

(ಚ) ಲೆಕ್ಕಪತ್ರಗಳ ಸರಿಯಾದ ನಿರ್ವಹಣೆ ಮತ್ತು ವಿವರಪಟ್ಟಿಕೆಗಳ ಸಲ್ಲಿಕೆಗಾಗಿ;

(ಛ) ಈ ಅಧಿನಿಯಮದ ಮೇರೆಗೆ ತೆರಿಗೆ ಸಂದಾಯ ಮಾಡುವ ಮತ್ತು ಸಂಗ್ರಹಣೆಯ ಕಾಲ ಮತ್ತು ರೀತಿಗಾಗಿ;

(ಜ) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ನೇಮಕಗೊಂಡ ಅಧಿಕಾರಿಗಳ ಕರ್ತವ್ಯಗಳು ಮತ್ತು ಅಧಿಕಾರಗಳಿಗಾಗಿ;

(ಝ) ಕಾನೂನಿನ ಮೂಲಕ ಅಧಿಕಾರಿಗಳಿಗೆ ವಿಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸಲು ಅವರ ಪ್ರವೇಶಕ್ಕಾಗಿ ಮನೋರಂಜನೆಗಳ ಮಾಲೀಕರು ಪಾಸುಗಳನ್ನು ಕೊಡುವುದಕ್ಕಾಗಿ;

(ಞ) ಈ ಅಧಿನಿಯಮದಲ್ಲಿ ಯಾವ ವಿಷಯಕ್ಕಾಗಿ ಅಥವಾ ಉಪಬಂಧವಿಲ್ಲವೊ ಅಥವಾ ಸಾಕಷ್ಟು ಉಪಬಂಧವಿಲ್ಲವೊ ಯಾವುದೇ ಇತರ ವಿಷಯ ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೆ ತರುವುದಕ್ಕಾಗಿ, ಯಾವುದಕ್ಕೆ ಉಪಬಂಧವು ಅವಶ್ಯವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವುದೋ ಆ ಯಾವುದೇ ಇತರೆ ವಿಷಯಕ್ಕಾಗಿ ಉಪಬಂಧಿಸಬಹುದು.

(3) (1)ನೇ ಉಪಪ್ರಕರಣ (2)ನೇ ಉಪಪ್ರಕರಣದ ಮೇರೆಗೆ ನಿಯಮವನ್ನು ರಚಿಸುವಾಗ, ರಾಜ್ಯ ಸರ್ಕಾರವು, ಅದರ ಉಲ್ಲಂಘನೀಯ ಒಂದು ಸಾವಿರ ರೂ.ಗಳ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧಿಸಬಹುದು.

(3ಕ) ಈ ಅಧಿನಿಯಮದ ಮೇರೆಗಿನ ನಿಯಮವನ್ನು ಪೂರ್ವಾನ್ವಯವಾಗಿ ಪರಿಣಾಮವುಳ್ಳಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ಆ ನಿಯಮವನ್ನು ರಚಿಸುವುದಕ್ಕಾಗಿನ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಇಟ್ಟ ವಿವರಣ ಪತ್ರದಲ್ಲಿ ನಿರ್ದಿಷ್ಟಪಡಿಸತಕ್ಕದ್ದು. (4)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಟಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವೂ ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದಿದ್ದರೆ ಹೇಗೋ ಹಾಗೆ ಪರಿಣಾಮವುಳ್ಳದ್ದಾಗಿರತಕ್ಕದ್ದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಎಲ್ಲಾ ನಿಯಮಗಳನ್ನು ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನ ಮಂಡಲದ ಎರಡರಲ್ಲಿ ಯಾವುದಾದರೊಂದು ಸದನವು ನಿಯಮಗಳಲ್ಲಿ ಯಾವುದೇ ಮಾರ್ಪಾಟನ್ನು ಮಾಡಿದರೆ, ಅಥವಾ ಯಾವುದೇ ನಿಯಮವು ಪರಿಣಾಮವುಳ್ಳದ್ದಾಗಿರತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಮತ್ತು ಆ ಮಾರ್ಪಾಟು ಅಥವಾ ನಿರ್ದೇಶನಕ್ಕೆ ಇನ್ನೊಂದು ಸದನವು ಒಪ್ಪಿದರೆ, ಆ ತರುವಾಯ ಆ ನಿಯಮಗಳು ಸಂದರ್ಭಾನುಸಾರ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮವುಳ್ಳದ್ದಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ.

**19. ನಿರಸನ ಮತ್ತು ಉಳಿಸುವಿಕೆಗಳು:–** (1) ಬೆಳಗಾವಿ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ, 1923ರ ಮುಂಬಯಿ ಮನೋರಂಜನಾ ಸುಂಕ ಅಧಿನಿಯಮ (1923ರ ಮುಂಬಯಿ ಅಧಿನಿಯಮ 1) ಬಳ್ಳಾರಿ ಜಿಲ್ಲೆಯನ್ನು ಹೊರತುಪಡಿಸಿ ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ, 1932ರ ಮೈಸೂರು ವಿನೋದಗಳ ತೆರಿಗೆ ಅಧಿನಿಯಮ, (1932ರ ಮೈಸೂರು ವಿನೋದಗಳ ಅಧಿನಿಯಮ VIII), ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶಗಳಲ್ಲಿ ಜಾರಿಯಲ್ಲಿರುವಂತೆ, 1939ರ ಮದರಾಸು ಮನರಂಜನಾ ತೆರಿಗೆ ಅಧಿನಿಯಮ, (1939ರ ಮದ್ರಾಸ್ ಅಧಿನಿಯಮ (X), ಕಲ್ಬುರ್ಗಿ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ, 1355 ಫಜಲಿ ಹೈದರಾಬಾದ್ ಅಧಿನಿಯಮ V) 1952 ಹೈದರಾಬಾದ್ ಚಲನಚಿತ್ರ ಪ್ರದರ್ಶನಗಳ ತೆರಿಗೆ ಅಧಿನಿಯಮ, (1952ರ ಹೈದರಾಬಾದ್ ಅಧಿನಿಯಮ XXVI) ಮತ್ತು 1956ರ ಹೈದರಾಬಾದ್ ಜಿಲ್ಲಾ ಪೌರಸಭೆಗಳ ಅಧಿನಿಯಮದ (1956ರ ಹೈದರಾಬಾದ್ ಅಧಿನಿಯಮ XVIII) 114ನೆಯ ಪ್ರಕರಣ ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿರುವಂತೆ 1951ರ ಮೈಸೂರು ಚಲನಚಿತ್ರ ಪ್ರದರ್ಶನಗಳ ತೆರಿಗೆ ಅಧಿನಿಯಮ (1951ರ ಮೈಸೂರು ಚಲನಚಿತ್ರ ಪ್ರದರ್ಶನ ತೆರಿಗೆ ಅಧಿನಿಯಮ XVI) ಮತ್ತು ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿರುವಂಥ 1953ರ ಕೊಡಗು ಮನರಂಜನಾ ತೆರಿಗೆ ಅಧಿನಿಯಮ (1953ರ ಕೊಡಗು ಅಧಿನಿಯಮ VII) ಮತ್ತು ಚಿತ್ರಮಂದಿರಗಳು ಅಥವಾ ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆಯೆಂದು ಅಥವಾ ಅನ್ಯಥಾ ಕರೆಯಲಾದ ಮನೋರಂಜನೆಗಳು ಅಥವಾ ವಿನೋದಗಳ ಮೇಲೆ ಮೈಸೂರು ರಾಜ್ಯದ ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿರುವ ತೆರಿಗೆಯನ್ನು ವಿಧಿಸುವ ಕಾನೂನು, ನಿಯಮ ಅಥವಾ ಉಪ–ವಿಧಿಯ ಯಾವುದೇ ಇತರ ಉಪ–ಬಂಧವನ್ನು ಈ ಮೂಲಕ ನಿರಸನಗೊಳಿಸಿದೆ; ಪರಂತು, ಅಂಥ ನಿರಸನವು;

(ಕ) ಸದರಿ ಅಧಿನಿಯಮಿತಿಗಳು, ಕಾನೂನುಗಳು, ನಿಯಮಗಳು ಅಥವಾ ಉಪ–ವಿಧಿಗಳ ಪೂರ್ವ ಪ್ರವರ್ತನೆಗೆ ಅಥವಾ ಅವುಗಳ ಮೇರೆಗೆ ಕ್ರಮಬದ್ಧವಾಗಿ ಮಾಡಿದ ಅಥವಾ ಅನುಭವಿಸಿದ ಯಾವುದೇ ಕಾರ್ಯಕ್ಕೆ, ಅಥವಾ

(ಖ) ಸದರಿ ಅಧಿನಿಯಮಿತಿಗಳು, ಕಾನೂನುಗಳು, ನಿಯಮಗಳು ಅಥವಾ ಉಪ–ವಿಧಿಗಳ ಮೇರೆಗೆ ಆರ್ಜಿಸಿದ ಒದಗಿಸಿದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ ಭಾದ್ಯತೆ ಅಥವಾ ಹೊಣೆಗಾರಿಕೆ (ಯಾವುದೇ ತೆರಿಗೆಯನ್ನು ಸಂದಾಯ ಮಾಡುವ ಹೊಣೆಗಾರಿಕೆಯನ್ನು ಒಳಗೊಂಡು) ಅಥವಾ

(ಗ) ಸದರಿ ಅಧಿನಿಯಮಿತಿಗಳು, ಕಾನೂನುಗಳು, ನಿಯಮಗಳು ಅಥವಾ ಉಪವಿಧಿಗಳ ವಿರುದ್ಧ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಅನುಭವಿಸಿದ ಯಾವುದೇ ದಂಡನೆ ಅಥವಾ ಶಿಕ್ಷೆಗೆ; ಅಥವಾ

(ಘ) ಹಿಂದೆ ಹೇಳಿದ ಯಾವುದೇ ಹಕ್ಕು, ವಿಶೇಷಾಧಿಕಾರ, ಭಾದ್ಯತೆ, ಹೊಣೆಗಾರಿಕೆ ಅಥವಾ ಶಿಕ್ಷೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ, ಕಾನೂನು ವ್ಯವಹರಣೆಗಳು (ಯಾವುದೇ ತೆರಿಗೆಯ ವಸೂಲಿಗಾಗಿನ ವ್ಯವಹರಣೆಯನ್ನು ಒಳಗೊಂಡು) ಅಥವಾ ಪರಿಹಾರೋಪಾಯಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ;

ಮತ್ತು ಯಾವುದೇ ಅಂಥ ತನಿಖೆ ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಈ ಅಧಿನಿಯಮವನ್ನು ಅಂಗೀಕರಿಸಿಲ್ಲದಿದ್ದರೆ ಹೇಗೋ ಹಾಗೆ ಮಾಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಯಾವುದೇ ಅಂಥ ದಂಡನೆ ಅಥವಾ ಶಿಕ್ಷೆಯನ್ನು ವಿಧಿಸಬಹುದು.

(2) (1) ನೆಯ ಉಪ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ (1) ನೆಯ ಉಪ ಪ್ರಕರಣದ ಪರಂತುಕವನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅದಕ್ಕೆ ಅವಶ್ಯ ಅಥವಾ ವಿಹಿತವೆಂದು ಕಂಡುಬರುವಂತಹ ಉಪ–ಬಂಧವನ್ನು,–

(ಕ) ನಿರಸನಗೊಳಿಸಿದ ಅಧಿನಿಯಮಗಳು ಅಥವಾ ಕಾನೂನುಗಳ ಮೇರೆಗೆ ಹೊರಡಿಸಿದ ನಿಯಮಗಳು, ಅಧಿಸೂಚನೆಗಳು ಅಥವಾ ಆದೇಶಗಳಲ್ಲಿ ಲೋಪಿಸಲು ಅವುಗಳಿಗೆ ಸೇರ್ಪಡೆ ಮಾಡುವುದಕ್ಕೆ ಮತ್ತು ಅವುಗಳನ್ನು ಅಳವಡಿಸಿಕೊಳ್ಳುವುದಕ್ಕೆ ಮತ್ತು ಮಾರ್ಪಾಡು ಮಾಡುವುದಕ್ಕಾಗಿ;

(ಖ) ನಿರಸನಗೊಂಡ ಯಾವುದೇ ಅಧಿನಿಯಮಿತಿಗಳು ಅಥವಾ ಕಾನೂನುಗಳು ಅಥವಾ ಅವುಗಳ ಮೇರೆಗೆ ಹೊರಡಿಸಿದ ಯಾವುದೇ ನಿಯಮಗಳು, ಅಧಿಸೂಚನೆಗಳು ಅಥವಾ ಆದೇಶಗಳ ಮೇರೆಗೆ ಚಲಾಯಿಸಬಹುದಾದ ಪ್ರಕಾರ್ಯಗಳನ್ನು ಸದರಿ ಅಧಿಸೂಚನೆಗಳು ಅಥವಾ ಆದೇಶಗಳ ಮೇರೆಗೆ ಚಲಾಯಿಸಬಹುದಾದ ಪ್ರಕಾರ್ಯಗಳನ್ನು ಸದರಿ ಅಧಿಸೂಚನೆಯಲ್ಲಿ ನಮೂದಿಸಬಹುದಾದಂತೆ ಚಲಾಯಿಸಲು ಸಕ್ಷಮವಾದ ಪ್ರಾಧಿಕಾರ, ಅಧಿಕಾರಿ ಅಥವಾ ವ್ಯಕ್ತಿಯನ್ನು ನಿರ್ದಿಷ್ಟಪಡಿಸುವುದಕ್ಕಾಗಿ, ಮಾಡಬಹುದು.

**20 ತೊಂದರೆಗಳನ್ನು ನಿವಾರಿಸಲು ಅಧಿಕಾರ:–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ತನಗೆ ಅವಶ್ಯಕ ಅಥವಾ ವಿಹಿತವೆಂದು ಕಂಡುಬರುವ ಉಪಬಂಧಗಳನ್ನು ಮಾಡಬಹುದು.

**1966ರ ಮೈಸೂರು ಅಧಿನಿಯಮ ಸಂಖ್ಯೆ 14**

**(ಮೈಸೂರು ರಾಜಪತ್ರ (ವಿಶೇಷ ಸಂಚಿಕೆಯಲ್ಲಿ) ದಿನಾಂಕ 1966 ರ ಏಪ್ರಿಲ್ ಇಪ್ಪತ್ತೈದನೇ ದಿವಸದಂದು ಮೊದಲು ಪ್ರಕಟವಾಯಿತು.)**

1966ರ ಮೈಸೂರು ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ.

(1966ರ ಏಪ್ರಿಲ್ ಇಪ್ಪತ್ತೆರಡನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು.)

1958ರ ಮೈಸೂರು ಮನೋರಂಜನಾ ತೆರಿಗೆ ಅಧಿನಿಯಮವನ್ನು (1958ರ ಮೈಸೂರು ಅಧಿನಿಯಮ 30) ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನೇಳನೇ ವರ್ಷದಲ್ಲಿ ಮೈಸೂರು ರಾಜ್ಯ ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು;

**(1) ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು 1958ರ ಮೈಸೂರು ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು. (2) ಇದು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(2ರಿಂದ 14 ರವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**15. 1962 ಮೈಸೂರು ಅಧಿನಿಯಮ 27ರ ನಿರಸನ – 1962** ರ ಮೈಸೂರು ಮನೋರಂಜನಾ ತೆರಿಗೆ (ಅಧಿಭಾರ) ಅಧಿನಿಯಮವನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

**1969ರ ಮೈಸೂರು ಅಧಿನಿಯಮ ಸಂಖ್ಯೆ 31**

(1969ರ ನವೆಂಬರ್ ಇಪ್ಪತ್ತನೇ ದಿವಸದಂದು ಮೈಸೂರು ರಾಜಪತ್ರದಲ್ಲಿ ಮೊದಲು ಪ್ರಕಟವಾಯಿತು).

**1969ರ ಮೈಸೂರು ಮಾರಾಟ ತೆರಿಗೆ ಮತ್ತು ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ.**

(1969ರ ನವೆಂಬರ್ ಏಳನೇ ದಿವಸದಂದು ರಾಷ್ಟ್ರಪತಿಯವರ ಅನುಮತಿಯನ್ನು ಪಡೆಯಿತು).

1957ರ ಮೈಸೂರು ಮಾರಾಟ ತೆರಿಗೆ ಅಧಿನಿಯಮವನ್ನು ಮತ್ತು 1958 ಮೈಸೂರು ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

1957ರ ಮೈಸೂರು ಮಾರಾಟ ತೆರಿಗೆ ಅಧಿನಿಯಮವನ್ನು (1957ರ ಮೈಸೂರು ಅಧಿನಿಯಮ 25) ಮತ್ತು 1958ರ ಮೈಸೂರು ಮನೋರಂಜನಾ ತೆರಿಗೆ ಅಧಿನಿಯಮ, 1958ರ ಮೈಸೂರು ಅಧಿನಿಯಮ 30)ವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹತ್ತೊಂಬತ್ತನೇ ವರ್ಷದಲ್ಲಿ ಮೈಸೂರು ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** ಈ ಅಧಿನಿಯಮವನ್ನು 1969ರ ಮೈಸೂರು ಮಾರಾಟ ತೆರಿಗೆ ಮತ್ತು ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

**2.** ಇದು ಕೂಡಲೇ ಜಾರಿಗೆ ಬರತಕ್ಕದ್ದು.

(2 ಮತ್ತು 3ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ).

**ಕರ್ನಾಟಕ ಮನೋರಂಜನಾ ತೆರಿಗೆ**

**1871ರ ರಾಷ್ಟ್ರಪತಿಯವರ ಅಧಿನಿಯಮ ಸಂಖ್ಯೆ 14**

ಭಾರತ ಗಣರಾಜ್ಯದ ಇಪ್ಪತ್ತೆರಡನೇ ವರ್ಷದಲ್ಲಿ ರಾಷ್ಟ್ರಪತಿಯವರಿಂದ ಅಧಿನಿಯಮಿತವಾಗಿದೆ.

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

1971ರ ಕರ್ನಾಟಕ ರಾಜ್ಯ ವಿಧಾನಮಂಡಲ (ಅಧಿಕಾರಗಳ ಪ್ರತ್ಯಾಯೋಜನೆ) ಅಧಿನಿಯಮದ (1971ರ 23)3ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ರಾಷ್ಟ್ರಪತಿಯು ಈ ಕೆಳಕಂಡಂತೆ ಅಧಿನಿಯಮಿಸುತ್ತಾರೆ.

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು 1971ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ).

**1973ರ ಕರ್ನಾಟಕ ಅಧಿನಿಯಮ ಸಂಖ್ಯೆ 4**

ಕರ್ನಾಟಕ ವಿಶೇಷ ರಾಜಪತ್ರದಲ್ಲಿ 1973ರ ಮಾರ್ಚ್ ಹತ್ತೊಂಭತ್ತನೇ ದಿವಸದಂದು ಮೊದಲು ಪ್ರಕಟವಾಯಿತು.

**1973ರ ಕರ್ನಾಟಕ ಪುನರ್ ಅಧಿನಿಯಮಿಸುವ ಅಧಿನಿಯಮ**

(1973 ರ ಮಾರ್ಚ್ ಹತ್ತೊಂಭತ್ತನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು.)

ರಾಷ್ಟ್ರಪತಿಯ ಕೆಲವು ಅಧಿನಿಯಮಗಳನ್ನು ಪುನರ್ ಅಧಿನಿಯಮಿಸುವ ಅಧಿನಿಯಮ.

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ (1958ರ ಕರ್ನಾಟಕ ಅಧಿನಿಯಮ 30), 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ 1957ರ ಕರ್ನಾಟಕ ಅಧಿನಿಯಮ 35), 1957ರ ಕರ್ನಾಟಕ ಸ್ಟಾಂಪ್ ಅಧಿನಿಯಮ (1957ರ ಕರ್ನಾಟಕ ಅಧಿನಿಯಮ 34) ಮತ್ತು 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ (1957ರ ಕರ್ನಾಟಕ ಅಧಿನಿಯಮ 25)– ಇವುಗಳಿಗೆ 1971ರ ಕರ್ನಾಟಕ ಮನೋರಂಜನಾ ತೆರಿಗೆ ತಿದ್ದುಪಡಿ ಅಧಿನಿಯಮ (1971ರ 14) ಕರ್ನಾಟಕ ಮನೋರಂಜನಾ ತೆರಿಗೆ ತಿದ್ದುಪಡಿ ಅಧಿನಿಯಮ (1971 ರಾಷ್ಟ್ರಪತಿಯ ಅಧಿನಿಯಮ 14) 1971ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಅಧಿನಿಯಮ (1971ರ ರಾಷ್ಟ್ರಪತಿ ಅಧಿನಿಯಮ 16) 1971ರ ಕರ್ನಾಟಕ ಸ್ಟಾಂಪ್ (ತಿದ್ದುಪಡಿ) ಅಧಿನಿಯಮ (1971ರ ರಾಷ್ಟ್ರಪತಿ ಅಧಿನಿಯಮ 17) ಮತ್ತು 1971ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ಅಧಿನಿಯಮ (1971ರ ರಾಷ್ಟ್ರಪತಿ ಅಧಿನಿಯಮ 18) ಅನುಕ್ರಮವಾಗಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಭಾರತ ಸಂವಿಧಾನದಂತೆ ಭಾರತ ಸಂವಿಧಾನದ 356ನೇ ಅನುಚ್ಛೇದದ ಮೇರೆಗೆ ಭಾರತ ರಾಷ್ಟ್ರಪತಿಯು ಹೊರಡಿಸಿದ 1971ನೇ ಮಾರ್ಚ್ 27ನೇ ದಿನಾಂಕ ಉದ್ಘೋಷಣೆಯ ಪ್ರವರ್ತನೆಯ ಅವಧಿಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿರುವುದರಿಂದ;

ಮತ್ತು ಸದರಿ ರಾಷ್ಟ್ರಪತಿಯ ಅಧಿನಿಯಮಗಳನ್ನು ಪುನರ್–ಅಧಿನಿಯಮಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:

**1. ಚಿಕ್ಕ ಹೆಸರು, ಪ್ರಾರಂಭ ಮತ್ತು ಅವಧಿ:–**

(1) ಈ ಅಧಿನಿಯಮವನ್ನು, 1973 ರ ಕರ್ನಾಟಕ ಪುನರ್ ಅಧಿನಿಯಮಿಸುವ ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

(3) ಇದು 1974ರ ಮಾರ್ಚ್ 31ರವರೆಗೆ ಮತ್ತು ಅದೂ ಒಳಗೊಂಡಂತೆ ಜಾರಿಯಲ್ಲಿರತಕ್ಕದ್ದು.

**2. ರಾಷ್ಟ್ರಪತಿ ಕೆಲವು ಅಧಿನಿಯಮಗಳನ್ನು ಪುನರ್–ಅಧಿನಿಯಮಿಸುವುದು:–**

ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಜಾರಿಯಲ್ಲಿರುವಂತೆ ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಷ್ಟ್ರಪತಿಯ ಅಧಿನಿಯಮಗಳನ್ನು ಈ ಮೂಲಕ ಪುನರ್ ಅಧಿನಿಯಮಿಸಲಾಗಿದೆ.

**3. ಉಳಿಸುವಿಕೆಗಳು:–** ಈ ಅಧಿನಿಯಮವು ಮುಕ್ತಾಯವಾದ ಮೇಲೆ 1958ರ ಕರ್ನಾಟಕ ಮನೋರಂಜನೆಗಳ ತೆರಿಗೆ ಅಧಿನಿಯಮ (1958 ರ ಕರ್ನಾಟಕ ಅಧಿನಿಯಮ 30) 1957ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ (1957ರ ಕರ್ನಾಟಕ ಅಧಿನಿಯಮ 35) 1957ರ ಕರ್ನಾಟಕ ಸ್ಟಾಂಪ್ ಅಧಿನಿಯಮ (1957ರ ಕರ್ನಾಟಕ ಸ್ಟಾಂಪ್ ಅಧಿನಿಯಮ 34) ಮತ್ತು 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ (1957ರ ಕರ್ನಾಟಕ ಅಧಿನಿಯಮ 25) (ಇನ್ನು ಮುಂದೆ ಮೂಲ ಅಧಿನಿಯಮಗಳೆಂದು ಉಲ್ಲೇಖಿಸಲಾಗಿದೆ) ಇವುಗಳಲ್ಲಿ–ಈ ಅಧಿನಿಯಮದ ಮೂಲಕ ಪುನರ್ ಅಧಿನಿಯಮಿಸಲಾದಂತೆ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ರಾಷ್ಟ್ರಪತಿಯ ಅಧಿನಿಯಮಗಳ ಮೂಲಕ ಮಾಡಿದ ತಿದ್ದುಪಡಿಗಳು–ಪರಿಣಾಮಕಾರಿಯಾಗಿರುವುದು ನಿಂತುಹೋಗತಕ್ಕದ್ದು. ಮತ್ತು ಮೂಲ ಅಧಿನಿಯಮಗಳಿಂದ ಅವುಗಳನ್ನು ಲೋಪಿಸತಕ್ಕದ್ದು. ಮತ್ತು ಈ ಅಧಿನಿಯಮದ ಮೂಲಕ ಪುನರ್ ಅಧಿನಿಯಮಿಸಲಾದಂತೆ ರಾಷ್ಟ್ರಪತಿಯ ಅಧಿನಿಯಮಗಳ ಮೂಲಕ ಬಾಧಿತರಾಗಿದ್ದಂಥ ಅದರ ಉಪಬಂಧಗಳು ಈ ಅಧಿನಿಯಮದ ಮೂಲಕ ಪುನರ್ ಅಧಿನಿಯಮಿಸಲಾದಂತೆ ಸದರಿ ರಾಷ್ಟ್ರಪತಿಯ ಅಧಿನಿಯಮಗಳು ಅಂಗೀಕಾರವಾಗಿರದಿದ್ದರೆ ಅವು ಅನ್ಯಥಾ ಪ್ರವರ್ತನೆಯಲ್ಲಿ ಮುಂದುವರಿಯುತ್ತಿದ್ದಷ್ಟು ಮಟ್ಟಿಗೆ ಪುನಃ ಜಾರಿಗೆ ಬರತಕ್ಕದ್ದು ಆದರೆ ಅವು,–

(ಕ) ಈ ಅಧಿನಿಯಮ ತಿದ್ದುಪಡಿಯಾದಂತೆ ಅಥವಾ ಮೂಲ ಅಧಿನಿಯಮಗಳ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶ ಮೂಲಕ ಕ್ರಮಬದ್ಧವಾಗಿ ಮಾಡಿದ ಅಥವಾ ಮಾಡದೆ ಬಿಟ್ಟ ಅಥವಾ ಅನುಭವಿಸಿದ ಯಾವುದೇ ಕಾರ್ಯದ ಪೂರ್ವ ಪ್ರವರ್ತನೆಗೆ; ಅಥವಾ

(ಖ) ಈ ಅಧಿನಿಯಮ ಈ ಅಧಿನಿಯಮ ತಿದ್ದುಪಡಿಯಾದ ಅಥವಾ ಮೂಲ ಅಧಿನಿಯಮಗಳ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಮೂಲಕ ಆರ್ಜಿಸಿದ, ಒದಗಿಬಂದ ಅಥವಾ ವಹಿಸಿದ ಯಾವುದೇ ಹಕ್ಕು, ವಿಶೇಷಾಧಿಕಾರ ಭಾದ್ಯತೆ ಅಥವಾ ಹೊಣೆಗಾರಿಕೆಗೆ; ಅಥವಾ

(ಗ) ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮಗಳ ಮೇರೆಗಿನ ಯಾವುದೇ ಅಪರಾಧದ ಸಂಬಂಧದಲ್ಲಿ ಅನುಭವಿಸಿದ ಯಾವುದೇ ದಂಡನೆ ಮುಟ್ಟುಗೋಲು ಅಥವಾ ಶಿಕ್ಷೆ ಅಥವಾ ಅವುಗಳ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶದ ಯಾವುದೇ ಉಲ್ಲಂಘನೆಗೆ ಅಥವಾ ಶಿಕ್ಷೆಗೆ; ಅಥವಾ

(ಘ) ಹಿಂದೆ ಹೇಳಿದಂತೆ ಯಾವುದೇ ಅಂಥ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಿಸಿದಂತೆ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲಿ ಮತ್ತು ಅಂಥ ಯಾವುದೇ ತನಿಖೆಯನ್ನು ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯ ಈ ಅಧಿನಿಯಮದ ಮೂಲಕ ಮಾಡಿದ ತಿದ್ದುಪಡಿಗಳು ಸಮಾಪ್ತಿಯಾಗಿರದಿದ್ದರೆ ಹೇಗೋ ಹಾಗೆ ಅವುಗಳನ್ನು ಹೂಡಬಹುದು, ಮುಂದುವರಿಸಬಹುದು ಅಥವಾ ಜಾರಿಗೊಳಿಸಬಹುದು ಮತ್ತು ಯಾವುದೇ ಅಂಥ ದಂಡನೆ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದು.

**ಅನುಸೂಚಿ**

**(2ನೇ ಪ್ರಕರಣ ನೋಡಿ)**

**ರಾಷ್ಟ್ರಪತಿಗಳ ಅಧಿನಿಯಮಗಳು**

1. 1971ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ (1971ರ ರಾಷ್ಟ್ರಪತಿಯ ಅಧಿನಿಯಮ 14)
2. 1971ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಅಧಿನಿಯಮ (1971ರ ರಾಷ್ಟ್ರಪತಿ ಅಧಿನಿಯಮ 16)
3. 1971ರ ಕರ್ನಾಟಕ ಸ್ಟಾಂಪ್ (ತಿದ್ದುಪಡಿ) ಅಧಿನಿಯಮ (1971ರ ರಾಷ್ಟ್ರಪತಿಯ ಅಧಿನಿಯಮ 17)
4. 1971ರ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ಅಧಿನಿಯಮ (1971ರ ರಾಷ್ಟ್ರಪತಿ ಅಧಿನಿಯಮ 18)

**1974ರ ಕರ್ನಾಟಕ ಅಧಿನಿಯಮ ಸಂಖ್ಯೆ 15**

(1974ರ ಮೇ ಇಪ್ಪತ್ತನಾಲ್ಕನೇ ದಿವಸದಂದು ಕರ್ನಾಟಕ ವಿಶೇಷ ರಾಜ್ಯ ಪತ್ರದಲ್ಲಿ ಮೊದಲು ಪ್ರಕಟವಾಯಿತು)

1974ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ

(1974 ರ ಮೇ ಹದಿನೆಂಟನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಯಿತು).

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು 1974ರ ಕರ್ನಾಟಕ ಮನೋರಂಜನೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆತಕ್ಕದ್ದು.

(2) ಇದು 1974ರ ಏಪ್ರಿಲ್ ಮೊದಲನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(2 ಮತ್ತು 3ನೇ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**1979ರ ಕರ್ನಾಟಕ ಅಧಿನಿಯಮ ಸಂಖ್ಯೆ 21**

(1979ರ ಮಾರ್ಚಿ ಮೂವತ್ತೊಂದನೇ ದಿವಸದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು)

(1979ರ ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ).

(1979ರ ಮಾರ್ಚಿ ಮುವತ್ತೊಂದನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವಂತೆ ತೆರಿಗೆ ನಿರ್ಧರಣೆ ಮತ್ತು ಇತರ ಕಾನೂನುಗಳನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ತೆರಿಗೆ ನಿರ್ಧರಣೆ ಮತ್ತು ಇತರ ಕಾನೂನುಗಳಿಗೆ ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮವಾಗತಕ್ಕದ್ದು:

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು 1979ರ ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

(ಪ್ರಕರಣ 6ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**11. ಉಳಿಸುವಿಕೆ:–** (1) ಸಂದೇಹಗಳನ್ನು ನಿವಾರಿಸುವುದಕ್ಕಾಗಿ,—

(i) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು 1959ರ ಕರ್ನಾಟಕ ಗ್ರಾಮ ಪಂಚಾಯತಿಗಳು ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ (1959ರ ಕರ್ನಾಟಕ ಅಧಿನಿಯಮ ಸಂಖ್ಯೆ 10) 1964 ಕರ್ನಾಟಕ ಪೌರಸಭೆಗಳ ಅಧಿನಿಯಮ (1964ರ ಕರ್ನಾಟಕ ಅಧಿನಿಯಮ 22) ಮತ್ತು 1976ರ ಕರ್ನಾಟಕ ಪೌರಸಭಾ ನಿಯಮಗಳ ಅಧಿನಿಯಮ 1977ರ ಕರ್ನಾಟಕ ಅಧಿನಿಯಮ ಸಂಖ್ಯೆ 14 ಇವುಗಳ ಮೇರೆಗೆ ಆಕ್ಟ್ರಾಯ್ ವಿಧಿಸುವಿಕೆಯು ಇರತಕ್ಕದ್ದಲ್ಲ.

(ii) 1899ರ ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮದ (1899ರ ಕರ್ನಾಟಕ ಅಧಿನಿಯಮ ಸಂಖ್ಯೆ 3) ಉಪಬಂಧಗಳು (1)ನೇ ಖಂಡದಲ್ಲಿ ಉಲ್ಲೇಖಿಸಿದ ಅಧಿನಿಯಮಗಳಲ್ಲಿ ಆಕ್ಟ್ರಾಯ್ ಸಂಬಂಧಪಟ್ಟ ಉಪಬಂಧಗಳ ನಿರಸನಕ್ಕೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

(2) 1979ರ ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಮೋಟಾರು ವಾಹನಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಒಂದು ವರ್ಷ, ಅರ್ಧವರ್ಷ ಅಥವಾ ಮೂರು ತಿಂಗಳುಗಳಿಗಾಗಿ ಸಂದಾಯವಾಗಬೇಕಾದ ತೆರಿಗೆಯನ್ನು ಸಂದಾಯ ಮಾಡಿರುವಲ್ಲಿ ಆಗ ಅದಕ್ಕೆ ತೆರಿಗೆ ಕಾರ್ಡನ್ನು ಕೊಡಲಾಗಿದ್ದು 4ನೇ ಪ್ರಕರಣದ ಮೇರೆಗೆ ಸದರಿ ವರ್ಷ, ಅರ್ಧ ವರ್ಷ ಅಥವಾ ಮೂರು ತಿಂಗಳಿಗೆ ಸಂದಾಯವಾಗಬೇಕಾದ ಪರಿಷ್ಕೃತ ತೆರಿಗೆ ಮತ್ತು ಹೆಚ್ಚುವರಿ ಅಧಿಭಾರವನ್ನು ಸದರಿ ದಿನಾಂಕದಿಂದ ಅರವತ್ತು ದಿವಸಗಳೊಳಗೆ ಸಂದಾಯ ಮಾಡತಕ್ಕದ್ದು.

**12. ತೊಂದರೆಗಳನ್ನು ನಿವಾರಿಸಲು ಅಧಿಕಾರ:–**

ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವಲ್ಲಿ, ಯಾವುದೇ ತೊಂದರೆಯು ಉದ್ಭವಿಸಿದರೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ತನಗೆ ಅವಶ್ಯ ಅಥವಾ ವಿಹಿತವೆಂಬುದಾಗಿ ಕಂಡುಬರುವ ಉಪಬಂಧಗಳನ್ನು ಮಾಡಬಹುದು.

**1979ರ ಕರ್ನಾಟಕ ಅಧಿನಿಯಮ ಸಂಖ್ಯೆ 25**

(1979ರ ಏಪ್ರಿಲ್ ಇಪ್ಪತ್ತೆಂಟನೇ ದಿವಸದಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಯಿತು).

**1979ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ**

(1979ರ ಏಪ್ರಿಲ್ 26ನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು).

1958ರ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು (1958ರ ಕರ್ನಾಟಕ ಅಧಿನಿಯಮ 30) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು 1979ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು 1979ರ ಏಪ್ರಿಲ್ 1ನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(2 ಮತ್ತು 3ನೇ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ).

**1976ರ ಕರ್ನಾಟಕ ಅಧಿನಿಯಮ 36**

**(1976ರ ಮೇ 3ನೇ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು).**

1976ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ.

(1976ರ ಏಪ್ರಿಲ್ ಇಪ್ಪತ್ತೆಂಟನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ).

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು (1958ರ ಕರ್ನಾಟಕ ಅಧಿನಿಯಮ 30) ಮತ್ತುಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೆಂಟನೇ ವರ್ಷದಲ್ಲಿ, ಕರ್ನಾಟಕ ರಾಜ್ಯ, ವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು 1976ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು 1976ರ ಏಪ್ರಿಲ್ 1ನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

(2 ರಿಂದ 12 ರ ವರೆಗಿನ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ).

**1977ರ ಕರ್ನಾಟಕ ಅಧಿನಿಯಮ ಸಂಖ್ಯೆ 16**

**(1977ರ ಜುಲೈ ಇಪ್ಪತ್ತೊಂದನೇ ದಿನದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)**

1977ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ

(1977ರ ಜುಲೈ ಇಪ್ಪತ್ತನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ)

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು (1958ರ ಕರ್ನಾಟಕ ಅಧಿನಿಯಮ 30) ಮತ್ತುಷ್ಟು ತಿದ್ದುಪಡಿ ಮಾಡುವುದು, ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೆಂಟನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು 1977ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ, ಎಂದು ಕರೆಯತಕ್ಕದ್ದು.

(2) ಇದು, ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

(2 ರಿಂದ 11ರವರೆಗಿನ ಪ್ರಕಟಣೆಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)-

**1979ರ ಕರ್ನಾಟಕ ಅಧಿನಿಯಮ ಸಂಖ್ಯೆ 3**

**(1979ರ ಜನವರಿ ಹತ್ತೊಂಬತ್ತನೆ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)**

**1978ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ**

(1979ರ ಜನವರಿ ಹನ್ನೆರಡನೇ ದಿವಸದಂದು ರಾಷ್ಟ್ರಪತಿಯವರ ಅನುಮತಿಯನ್ನು ಪಡೆಯಿತು)

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು (1958ರ ಕರ್ನಾಟಕ ಅಧಿನಿಯಮ ಸಂಖ್ಯೆ) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ :–** (1) ಈ ಅಧಿನಿಯಮವನ್ನು 1978ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

(2ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**1980ರ ಕರ್ನಾಟಕ ಅಧಿನಿಯಮ ಸಂಖ್ಯೆ 14**

**(1980ರ ಏಪ್ರಿಲ್ ಹದಿನೇಳನೇ ದಿವಸದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)**

**1980ರ ಕರ್ನಾಟಕ ತೆರಿಗೆ ನಿರ್ಧರಣಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ**

(1980ರ ಏಪ್ರಿಲ್ ಹದಿನೈದನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ನಿರ್ಧರಣೆ ಕಾನೂನುಗಳನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಇತರ ತೆರಿಗೆ ನಿರ್ಧರಣೆ ಕಾನೂನುಗಳನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ:

ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು 1980 ಕರ್ನಾಟಕ ತೆರಿಗೆ ನಿರ್ಧಾರಣಾ ಕಾನೂನುಗಳ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

(3ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**1980ರ ಕರ್ನಾಟಕ ಅಧಿನಿಯಮ ಸಂಖ್ಯೆ 26**

**(1980ರ ಆಗಸ್ಟ್ ಹನ್ನೊಂದನೇ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)**

**1980ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ**

(1980ರ ಆಗಸ್ಟ್ ಆರನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1968ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು (1958ರ ಕರ್ನಾಟಕ ಅಧಿನಿಯಮ 30) ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು 1980ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

(2 ಮತ್ತು 3ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

## 1981ರ ಕರ್ನಾಟಕ ಅಧಿನಿಯಮ ಸಂಖ್ಯೆ 5

**(1981ರ ಏಪ್ರಿಲ್ ನಾಲ್ಕನೇ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)**

1981ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ

(1981ರ ಆಗಸ್ಟ್ ನಾಲ್ಕನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಹೆಸರು:–** ಈ ಅಧಿನಿಯಮವನ್ನು 1981ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2 ರಿಂದ ಮತ್ತು 6ರ ವರೆಗೆ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

## 1982ರ ಕರ್ನಾಟಕ ಅಧಿನಿಯಮ ಸಂಖ್ಯೆ 13

**(1980ರ ಏಪ್ರಿಲ್ ಮೊದಲನೇ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)**

**1982ರ ಕರ್ನಾಟಕ ತೆರಿಗೆ ನಿರ್ಧಾರಣೆ ಮತ್ತು ಇತರೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ**

(1982ರ ಏಪ್ರಿಲ್ ಮೊದಲ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ನಿರ್ಧರಣೆ ಮತ್ತು ಇತರ ಕಾನೂನುಗಳನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ನಿರ್ಧರಣೆ ಮತ್ತು ಇತರೆ ಕಾನೂನುಗಳನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತ ಮೂರನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ :–** (1) ಈ ಅಧಿನಿಯಮವನ್ನು 1982ರ ಕರ್ನಾಟಕ ತೆರಿಗೆ ನಿರ್ಧರಣೆ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) 5ನೇ ಪ್ರಕರಣವು 1982ರ ಜುಲೈ ಮೊದಲ ದಿವಸದಂದು ಜಾರಿಗೆ ಬರತಕ್ಕದ್ದು ಮತ್ತು ಇತರೆ ಉಪಬಂಧಗಳು 1982ರ ಏಪ್ರಿಲ್ ಮೊದಲನೇ ದಿವಸದಂದು ಜಾರಿಗೆ ಬರತಕ್ಕದ್ದು.

(5ನೇ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.)

**1983ರ ಕರ್ನಾಟಕ ಅಧಿನಿಯಮ ಸಂಖ್ಯೆ 2**

**(1983ರ ಜನವರಿ ಹನ್ನೆರಡನೇ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)**

**1982ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ**

(1983ರ ಜನವರಿ ಎಂಟನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

1985ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ (1958ರ ಕರ್ನಾಟಕ ಅಧಿನಿಯಮ 30) ವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತ ಮೂರನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ :–** (1) ಈ ಅಧಿನಿಯಮವನ್ನು 1982ರ ಕರ್ನಾಟಕ ಮನೋರಂಜನಾ ತೆರಿಗೆ ತಿದ್ದುಪಡಿ ನಿರ್ಧರಣೆ ಅಧಿನಿಯಮ ಎಂದು ಕರೆಯತಕ್ಕದ್ದು.

2, 3ನೇ ಪ್ರಕರಣದ (1) ಮತ್ತು (2)ನೇ ಖಂಡಗಳು 1982ರ ಜುಲೈ ಮೊದಲ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ಉಳಿದ ಉಪಬಂಧಗಳು ಕೂಡಲೇ ಜಾರಿಗೆ ಬರತಕ್ಕದ್ದು.

(2ನೇ ಮತ್ತು 3ನೇ ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.)

**1983ರ ಕರ್ನಾಟಕ ಅಧಿನಿಯಮ ಸಂಖ್ಯೆ 9**

**(1983ರ ಏಪ್ರಿಲ್ ಮೊದಲ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)**

**1983ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ**

(1983ರ ಏಪ್ರಿಲ್ ಮೊದಲ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ)

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ (1958ರ ಕರ್ನಾಟಕ ಅಧಿನಿಯಮ 30) ವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತ ನಾಲ್ಕನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ :–** (1) ಈ ಅಧಿನಿಯಮವನ್ನು 1983ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2)ಇದು 1983ರ ಏಪ್ರಿಲ್ ಮೊದಲ ದಿವಸದಂದು ಜಾರಿಗೆ ಬರತಕ್ಕದ್ದು.

(2ರಿಂದ 4ರ ವರೆಗಿನ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.)

**1984ರ ಕರ್ನಾಟಕ ಅಧಿನಿಯಮ ಸಂಖ್ಯೆ 9**

**(1984ರ ಏಪ್ರಿಲ್ ಹದಿನಾಲ್ಕನೇ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು.)**

**1984ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ**

(1984ರ ಮಾರ್ಚ್ ಮೂವತ್ತೊಂದನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆದಿದೆ)

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ :–** (1) ಈ ಅಧಿನಿಯಮವನ್ನು 1984ರ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ ಎಂದು ಕರೆಯತಕ್ಕದ್ದು.

(2) ಇದು 1984ರ ಏಪ್ರಿಲ್ ಮೊದಲ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು. (2 ರಿಂದ 7ರ ವರೆಗಿನ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.)

## ಕರ್ನಾಟಕ ಮನರಂಜನೆಗಳ ತೆರಿಗೆ ನಿಯಮಗಳು, 1959

**(ತಿದ್ದುಪಡಿಯಾದಂತೆ)**

**ಪರಿವಿಡಿ**


ಭಾಗ I ಪ್ರಾರಂಭಿಕ

ಭಾಗ II ಬಿಟ್ಟು ಬಿಡಲಾಗಿದೆ

ಭಾಗ III ವಿವರಣಾ ಪಟ್ಟಿಕೆಗಳ ಆಧಾರದ ಮೇಲೆ ತೆರಿಗೆಯ ಸಂದಾಯ

ಭಾಗ IV ಪ್ರವೇಶವನ್ನು ಯಾಂತ್ರಿಕ ಸಾಧನದ ಮೂಲಕ ನಿಯಂತ್ರಿಸಿರುವ ಸಂದರ್ಭಗಳಲ್ಲಿ ತೆರಿಗೆ ಸಂದಾಯ

ಭಾಗ V ಸಂಸ್ಥೆಗೆ ಚಂದಾಗಳ ಅಥವಾ ವಂತಿಗೆಯ ಸಂದಾಯದ ಮೇಲೆ ಮನೋರಂಜನೆಗಳಿಗೆ ಪ್ರವೇಶಗಳ ಮೇಲೆ ತೆರಿಗೆಯ ಸಂದಾಯ

ಭಾಗ VI ಬಿಟ್ಟು ಬಿಡಲಾಗಿದೆ

ಭಾಗ VIಕ 4ಕ ಪ್ರಕರಣದ ಮೇಲೆ ತೆರಿಗೆ ಸಂದಾಯ

ಭಾಗ VII ವಿನಾಯಿತಿಗಳು ಮತ್ತು ಮರು ಪಾವತಿಗಳು

ಭಾಗ VIII ಸಂಕೀರ್ಣ

ಭಾಗ IX ಆಡಳಿತ


**ನಮೂನೆಗಳು II ರಿಂದ XIII**

## 1959ರ ಕರ್ನಾಟಕ ಮನೋರಂಜನಾ ತೆರಿಗೆ ನಿಯಮಗಳು

**ಅಧಿಸೂಚನೆ**

ಸಂಖ್ಯೆ ಆರ್.ಡಿ. 95 ಇಎನ್‌ಎಕ್ಸ್ 58, ದಿನಾಂಕ ಬೆಂಗಳೂರು 14ನೇ ಜುಲೈ 1959 ಆಷಾಢ 23 ಶಕವರ್ಷ 1881.

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ (1958ರ ಕರ್ನಾಟಕ ಅಧಿನಿಯಮದ ಸಂಖ್ಯೆ 30) 18ನೇ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ಮಾಡುತ್ತದೆ. ಸದರಿ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ಸದರಿ ನಿಯಮಗಳ ಕರಡನ್ನು ದಿನಾಂಕ 1ನೇ ಜನವರಿ 1959ರ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ; ಎಂದರೆ

## ನಿಯಮಗಳು

### ಪ್ರಾರಂಭಿಕ

1. ಈ ನಿಯಮಗಳನ್ನು 1959ರ ಕರ್ನಾಟಕ ಮನೋರಂಜನಾ ತೆರಿಗೆ ನಿಯಮಗಳು ಎಂದು ಕರೆಯತಕ್ಕದ್ದು.

2. ಇವು 1959ರ ಜನವರಿ ಮೊದಲನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

3. ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು;

(ಕ) "ಅಧಿನಿಯಮ" ಎಂದರೆ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ;

(ಕಕ) * * *

(ಖ) "ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ" ಎಂದರೆ, 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ "ರಾಜ್ಯಸರ್ಕಾರವು ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ" ಎಂದು ನೇಮಕ ಮಾಡಿದ ಯಾವನೇ ವ್ಯಕ್ತಿ;

(ಗ) "ವಾಣಿಜ್ಯ ತೆರಿಗೆ ಅಧಿಕಾರಿ" ಎಂದರೆ 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ವಾಣಿಜ್ಯ ತೆರಿಗೆ ಅಧಿಕಾರಿ ಎಂದು ನೇಮಕ ಮಾಡಿದ ಯಾವನೇ ವ್ಯಕ್ತಿ;

(ಘ) "ಕಮೀಷನರ್ ಎಂದರೆ" ಕರ್ನಾಟಕ ವಾಣಿಜ್ಯ ತೆರಿಗೆಗಳ ಕಮೀಷನರ್;

(ಙ) "ಡೆಪ್ಯುಟಿ ಕಮೀಷನರ್" ಎಂದರೆ 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗೆ ನೇಮಕಗೊಂಡ ವಾಣಿಜ್ಯ ತೆರಿಗೆಗಳ ಡೆಪ್ಯುಟಿ ಕಮೀಷನರ್;

(ಚ) "ಮನೋರಂಜನಾ ತೆರಿಗೆ" ಎಂದರೆ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆ;

(ಛ) "ಮನೋರಂಜನಾ ತೆರಿಗೆ ಅಧಿಕಾರಿ" ಎಂದರೆ ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಕ್ಕೆ ಸಂಬಂಧಿಸಿದಂತೆ ಈ ನಿಯಮಗಳ ಮೇರೆಗೆ ಮನೋರಂಜನಾ ಅಧಿಕಾರಿಯ ಅಧಿಕಾರಗಳನ್ನು ಚಲಾಯಿಸಲು ನೇಮಕ ಮಾಡಿದ ಯಾವನೇ ಅಧಿಕಾರಿ ಮತ್ತು ಈ ಖಂಡದ ಮೇರೆಗೆ ಯಾವುದೇ ಪ್ರದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಮನೋರಂಜನಾ ತೆರಿಗೆ ಅಧಿಕಾರಿಯನ್ನು ನೇಮಿಸಿಲ್ಲದಿದ್ದರೆ ಆ ಪ್ರದೇಶದ ಸಹಾಯಕ ತೆರಿಗೆ ಅಧಿಕಾರಿಯು ಮನೋರಂಜನಾ ತೆರಿಗೆ ಅಧಿಕಾರಿಯಾಗಿರತಕ್ಕದ್ದು;

(ಜ) "ಸರ್ಕಾರಿ ಖಜಾನೆ" ಎಂದರೆ ಸರ್ಕಾರದ ಖಜಾನೆ ಅಥವಾ ಉಪಖಜಾನೆ;

(ಝ) "ಸೀಸನ್ ಟಿಕೆಟ್" ಎಂದರೆ ಅದರಲ್ಲಿ ನಿದಿಷ್ಟಪಡಿಸಿದ ನಿಶ್ಚಿತ ಅವಧಿಯಲ್ಲಿ ಮನೋರಂಜನೆಗಳ ಸರಣಿಗೆ ಪ್ರವೇಶವನ್ನು ಅಧಿಕೃತಗೊಳಿಸುವ ಟಿಕೆಟ್";

(ಞ) "ಚಲನಚಿತ್ರ ಪ್ರದರ್ಶನ ತೆರಿಗೆ" ಎಂದರೆ, ಈ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಚಲನಚಿತ್ರ ಪ್ರದರ್ಶನಗಳ ಮೇಲೆ ಸಂದಾಯ ಮಾಡಬೇಕಾದ ಹೆಚ್ಚಿನ ಮನೋರಂಜನಾ ತೆರಿಗೆ;

(1) "ವರ್ಷ" ಎಂದರೆ ಏಪ್ರಿಲ್ 1ರಿಂದ ಪ್ರಾರಂಭವಾಗುವ ಹಣಕಾಸು ವರ್ಷ.

## ಭಾಗ – II * * *

## ಭಾಗ – III

### ವಿವರಣಾ ಪಟ್ಟಿಕೆಗಳ ಆಧಾರದ ಮೇಲೆ ತೆರಿಗೆ ಸಂದಾಯ

17. ಅಧಿನಿಯಮದ 5ನೇ ಪ್ರಕರಣದ ಮೇರೆಗೆ ವಿವರ ಪಟ್ಟಿಕೆಗಳನ್ನು ಒದಗಿಸುವುದಕ್ಕಾಗಿ ವ್ಯವಸ್ಥೆ ಮಾಡಲು ಅಗತ್ಯಪಡಿಸಿದ ಪ್ರತಿಯೊಬ್ಬ ಮಾಲೀಕನು, ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮನೋರಂಜನಾ ತೆರಿಗೆ ಅಧಿಕಾರಿಗೆ ಮನೋರಂಜನೆ ಪ್ರಾರಂಭವಾಗುವುದಕ್ಕೆ ಕನಿಷ್ಠ ಪಕ್ಷ ಮೂರು ದಿವಸಗಳಿಗೆ ಮುಂಚೆ ಮನೋರಂಜನೆಯ ಸ್ಥಳ, ದಿನಾಂಕ, ಕಾಲ ಮತ್ತು ಸ್ವರೂಪದ ಬಗ್ಗೆ ಮತ್ತು ಅದರ ಪ್ರವೇಶಕ್ಕೆ ಸಂದಾಯ ಮಾಡಬೇಕಾದ ದರಗಳ ಬಗ್ಗೆ ಸಹ ವಿವರಗಳನ್ನು ಒದಗಿಸಿದ ನಮೂನೆ IIIರಲ್ಲಿ ಅರ್ಜಿ ಸಲ್ಲಿಸತಕ್ಕದ್ದು. ಮನೋರಂಜನಾ ತೆರಿಗೆ ಅಧಿಕಾರಿಯು ಬರಹದಲ್ಲಿನ ಆದೇಶದ ಮೂಲಕ ಹಾಗೆ ಮಾಡುವುದರಿಂದ ಮಾಲೀಕನಿಗೆ ವಿನಾಯಿತಿ ನೀಡಿದ ಸಂದರ್ಭಗಳಲ್ಲಿ ಹೊರತು ನಮೂನೆ IIಕನಲ್ಲಿ ದ್ವಿಪ್ರತಿಯಲ್ಲಿ ವಿವರಣ ಪತ್ರವು ನೀಡಲು ಉದ್ದೇಶಿಸಿದ ಎಲ್ಲ ವರ್ಗಗಳ ಟಿಕೆಟುಗಳು ವಿವಿಧ ಬಣ್ಣದಲ್ಲಿ ಮುದ್ರಿಸಲಾಗಿದೆ ಮತ್ತು ಪ್ರತ್ಯೇಕ ಕ್ರಮಸಂಖ್ಯೆಗಳನ್ನು ಹೊಂದಿರುವ ಪ್ರತಿಯೊಂದು ವರ್ಗದ ಟಿಕೆಟುಗಳು ಅರ್ಜಿಯ ಜೊತೆ ಇರತಕ್ಕದ್ದು. ಮನೋರಂಜನಾ ತೆರಿಗೆ ಅಧಿಕಾರಿಯು ಸಾಕಷ್ಟು ಕಾರಣಗಳಿಗಾಗಿ ಅರ್ಜಿಯನ್ನು ಸಲ್ಲಿಸುವಲ್ಲಿನ ವಿಳಂಬವನ್ನು ಮನ್ನಾ ಮಾಡಬಹುದು.

18 (1) ಮನೋರಂಜನಾ ತೆರಿಗೆ ಅಧಿಕಾರಿಯು 17ನೇ ನಿಯಮದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಮೊಬಲಗನ್ನು ಮತ್ತು ಮಾಲೀಕನು ಒದಗಿಸಬೇಕಾಗಿರುವ ಭದ್ರತೆಯ ಸ್ವರೂಪವನ್ನು ಮತ್ತು ಅಂಥ ಭದ್ರತೆಯನ್ನು ಯಾವ ಕಾಲದೊಳಗೆ ಒದಗಿಸಬೇಕೋ ಆ ಕಾಲವನ್ನು ನಿಗದಿಪಡಿಸತಕ್ಕದ್ದು. ಆ ಭದ್ರತೆಯನ್ನು ಒದಗಿಸಿದಾಗ ಮನೋರಂಜನಾ ತೆರಿಗೆ ಅಧಿಕಾರಿಗಳು ನಮೂನೆ IVರಲ್ಲಿ ಮಾಲೀಕನಿಗೆ ಕೊಡತಕ್ಕದು.

(2) (1) ನೇ ಉಪ–ನಿಯಮದ ಮೇರೆಗೆ ಮನೋರಂಜನಾ ತೆರಿಗೆ ಅಧಿಕಾರಿಯು ನಿಗದಿಪಡಿಸಿದ ಮೊಬಲಗು, ಐದುನೂರು ರೂಪಾಯಿಗಳು ಅಥವಾ ಹಿಂದಿನ ಹನ್ನೆರಡು ತಿಂಗಳಿಗಾಗಿ ತೆರಿಗೆ ಮತ್ತು ಅಧಿಕಾರದ ಹದಿನೈದು ದಿವಸಗಳ ಸರಾಸರಿ ಸಂಗ್ರಹಣೆಗಳ ಆಧಾರದ ಮೇಲೆ ಲೆಕ್ಕ ಹಾಕಿದ ಒಂದು ಪ್ರಾಕ್ಷಿಕಕ್ಕಾಗಿ ಮಾಲೀಕನು ಸಂದಾಯ ಮಾಡಬೇಕಾದ ಮನರಂಜನಾ ತೆರಿಗೆ ಮತ್ತು ಅಧಿಭಾರದ ಮೊಬಲಗಿಗೆ ಅಥವಾ ಪ್ರಾಕ್ಷಿಕವಾಗಿ ಚಲನಚಿತ್ರ ಪ್ರದರ್ಶನಗಳ ಮೇಲಿನ ಹೆಚ್ಚಿನ ತೆರಿಗೆಯ ಮೊಬಲಗಿಗೆ ಸಮನಾದ ಮೊಬಲಗು–ಇವುಗಳಲ್ಲಿ ಯಾವುದು ಹೆಚ್ಚು ಆಧಾರವಿರತಕ್ಕದ್ದು ಹಾಗೆ ನಿಗದಿಪಡಿಸಿದ ಭದ್ರತಾ ಮೊಬಲಗು ವರ್ಷಕ್ಕೊಮ್ಮೆ ಪರಿಷ್ಕರಣಕ್ಕೆ ಒಳಪಟ್ಟಿರತಕ್ಕದ್ದು. ಪರಂತು, ಮನೋರಂಜನಾ ತೆರಿಗೆ ಅಧಿಕಾರಿಯು, ಮಾಲೀಕನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಮತ್ತು ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಈ ಮುಂಚೆ ನಿಗದಿಪಡಿಸಿದ ಭದ್ರತೆಯು ಕಡಿಮೆಯೆಂದು ಅವನು ಪರ್ಯಾಲೋಚಿಸಿದರೆ ವರ್ಷದ ಮುಕ್ತಾಯಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಭದ್ರತೆಯ ಮೊಬಲಗನ್ನು ಪರಿಷ್ಕರಿಸಬಹುದು.

19. ಅನುಮತಿ ಪತ್ರವನ್ನು ಕೊಟ್ಟಾಗ ಮನೋರಂಜನಾ ತೆರಿಗೆ ಅಧಿಕಾರಿಯು ಅಥವಾ ಕೇಂದ್ರ ಕಾರ್ಯಸ್ಥಾನದಿಂದ ಅವನು ಹಾಜರಾಗಿದ್ದಲ್ಲಿ ಈ ಬಗ್ಗೆ ಅವನಿಂದ ಅಧಿಕೃತನಾದ ನೌಕರನು, ಮಾಲೀಕನು ತನ್ನ ಅರ್ಜಿಯೊಂದಿಗೆ ಕಳುಹಿಸಿದ ಎಲ್ಲಾ ಟಿಕೆಟ್‌ಗಳಿಗೆ ಅಂಥ ಅಧಿಕಾರಿಯ ಅಧಿಕೃತ ಮೊಹರನ್ನು ಹಾಕತಕ್ಕದ್ದು ಮತ್ತು ಅವುಗಳನ್ನು ಮಾಲೀಕನಿಗೆ ಹಿಂತಿರುಗಿಸತಕ್ಕದ್ದು. ಮಾಲೀಕನು ಆ ತರುವಾಯ ನೀಡಬಹುದಾದ ಟಿಕೆಟ್‌ಗಳಿಗೆ ಸಂಬಂಧಿಸಿದಂತೆ ಇದೇ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಮನೋರಂಜನಾ ತೆರಿಗೆ ಅಧಿಕಾರಿಯು ಅವನು ನಿಗದಿಪಡಿಸಬಹುದಾದಂಥ ಅಂತರಗಳಲ್ಲಿ ನಮೂನೆ IIರಲ್ಲಿ ದ್ವಿಪ್ರತಿಯಲ್ಲಿ ವಿವರಣೆ

ಪತ್ರದೊಂದಿಗೆ ಅಂಥ ಟಿಕೆಟ್‌ಗಳನ್ನು ತನಗೆ ಕಳುಹಿಸುವಂತೆ ಮಾಲೀಕನಿಗೆ ಅಗತ್ಯಪಡಿಸಬಹುದು. ಈ ನಿಯಮಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ ಒಂದು ಬಾರಿಗೆ ಮೊಹರು ಮಾಡಿದ ಎಲ್ಲಾ ಟಿಕೆಟ್‌ಗಳ ಮೇಲೆ ಸಂದಾಯವಾಗಬೇಕಾದ ಮನೋರಂಜನಾ ತೆರಿಗೆ ಮತ್ತು ಅಧಿಭಾರವು ಈ ಹಿಂದೆ ಮೊಹರು ಮಾಡಿದ ಟಿಕೆಟ್‌ಗಳ ಮೇಲೆ ಸಲ್ಲಬೇಕಾದ ಮನೋರಂಜನಾ ತೆರಿಗೆ ಮತ್ತು ಅಧಿಭಾರದ ಶಿಲ್ಕಿನೊಂದಿಗೆ ಭದ್ರತಾ ಠೇವಣಿಯ ಶೇಕಡಾ ಎಪ್ಪತ್ತೈದರಷ್ಟನ್ನು ಮೀರತಕ್ಕದ್ದಲ್ಲ. ನಿಯಮ 18ರ ಮೇರೆಗೆ ಒದಗಿದ ಭದ್ರತೆಯನ್ನು ಟಿಕೆಟ್‌ಗಳನ್ನು ಮೊಹರು ಮಾಡುವುದಕ್ಕೆ ಮುಂಚೆ ಪೂರ್ಣವಾಗಿ ಇಟ್ಟುಕೊಳ್ಳತಕ್ಕದ್ದು.

20. (1) ಟಿಕೆಟ್‌ಗಳಿಗೆ ಅನುಕ್ರಮವಾಗಿ ಯಂತ್ರದ ಮೂಲಕ ಸಂಖ್ಯೆಯನ್ನು ಕೊಡತಕ್ಕದ್ದು ಮತ್ತು ಸರಣಿಗಳು ಪೂರ್ಣಗೊಳ್ಳುವವರೆಗೆ ಪ್ರದರ್ಶನದಿಂದ ಪ್ರದರ್ಶನ ಕ್ರಮಾನುಗತವಾಗಿ ಮುಂದುವರಿಯತಕ್ಕದ್ದು. ಅನುಕ್ರಮ ಸಂಖ್ಯೆಗಳನ್ನು (3)ನೇ ನಿಯಮದ ಮೇರೆಗೆ ನಿಯಮಿಸಿದ ನಮೂನೆ IVಕ ದಲ್ಲಿ ತೋರಿಸಿದಂತೆ ಪ್ರತಿಯೊಂದು ಟಿಕೆಟ್ ಮೇಲೆ ಮೂರು ಸ್ಥಳಗಳಲ್ಲಿ ಮುದ್ರಿಸತಕ್ಕದ್ದು. ಆ ಟಿಕೆಟ್‌ನ್ನು ಕೊಡುವ ಕಾಲದಲ್ಲಿ ಟಿಕೆಟ್‌ಗಳ ಪಕ್ಕ ಪ್ರತಿಗಳನ್ನು ಟಿಕೆಟ್ ಪುಸ್ತಕದಲ್ಲಿ ಉಳಿಸಿಕೊಳ್ಳತಕ್ಕದು ಮತ್ತು ಅದರ ಮೂಲಪ್ರತಿ ಮತ್ತು ದ್ವಿಪ್ರತಿಯನ್ನು ಪೋಷಕರಿಗೆ ನೀಡತಕ್ಕದು. ಒಂದೇ ದಿವಸ ಒಂದಕ್ಕಿಂತ ಹೆಚ್ಚು ಚಲನಚಿತ್ರಗಳನ್ನು ಪ್ರದರ್ಶಿಸುವ ಮಾಲೀಕರು ಬೇರೆ ಬೇರೆ ಚಲನಚಿತ್ರಗಳಿಗೆ ಬೇರೆ ಬೇರೆ ಶ್ರೇಣಿಯ ಟಿಕೆಟ್‌ಗಳನ್ನು ನೀಡಬಹುದು.

(2) ಮುಂಗಡ ಬುಕಿಂಗ್ ಸೌಲಭ್ಯಗಳಿಗೆ ಅನುಮತಿ ನೀಡುವ ಸಂದರ್ಭಗಳಲ್ಲಿ ಪ್ರತಿಯೊಂದು ವರ್ಗದ ಟಿಕೆಟ್‌ಗಳನ್ನು ಸಂದರ್ಭಾನುಸಾರ ಪ್ರತಿ ಪ್ರದರ್ಶನಕ್ಕೆ ಅಥವಾ ಪ್ರತಿದಿನಕ್ಕೆ ಬೇರೆ ಬೇರೆ ವಿಭಿನ್ನ ಬಣ್ಣಗಳಲ್ಲಿ ಪ್ರತ್ಯೇಕವಾಗಿ ಮುದ್ರಿಸತಕ್ಕದ್ದು ಮತ್ತು ಅಂಥ ಟಿಕೆಟ್‌ಗಳ ಕ್ರಮಸಂಖ್ಯೆಯನ್ನು ಸಂದರ್ಭಾನುಸಾರ ಪ್ರತಿಯೊಂದು ಸಂವಾದಿ ಪ್ರದರ್ಶನ ಅಥವಾ ದಿವಸಕ್ಕೆ ಪ್ರತ್ಯೇಕವಾಗಿ ಕ್ರಮಾನುಗತವಾಗಿ ಮುಂದುವರಿಯತಕ್ಕದ್ದು.

(3) ಟಿಕೆಟ್‌ಗಳನ್ನು ನಮೂನೆ IVಕ ದಲ್ಲಿ ಮುದ್ರಿಸತಕ್ಕದ್ದು.

21. ಕೆಳಗಿನ ವರ್ಗದಿಂದ ಮೇಲಿನ ವರ್ಗಕ್ಕೆ ಪ್ರವೇಶದ ಸಂದರ್ಭಗಳಲ್ಲಿ ವ್ಯತ್ಯಾಸದ ಸಂದಾಯಕ್ಕಾಗಿ ಟಿಕೆಟ್‌ಗಳನ್ನು ಸಹ 20ನೇ ನಿಯಮದಲ್ಲಿ ನಿರ್ದಿಷ್ಟಪಡಿಸದ ರೀತಿಯಲ್ಲಿ ಅನುಕ್ರಮವಾಗಿ ಸಂಖ್ಯೆ ಕೊಡತಕ್ಕದ್ದು ಮತ್ತು ಈ ಟಿಕೆಟ್‌ಗಳನ್ನು ನಮೂನೆ IIರಲ್ಲಿ ಟಿಕೆಟ್‌ಗಳ ರಿಜಿಸ್ಟರಿನಲ್ಲಿ ಮತ್ತು ನಮೂನೆ IVರಲ್ಲಿನ ಅನುಮತಿ ಪತ್ರದಲ್ಲಿ ನಿರ್ದಿಷ್ಟಪಡಿಸಿದ ಟಿಕಟ್‌ಗಳ ವಿವರಣೆ ಪಟ್ಟಿಕೆಯಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

22. 18ನೇ ನಿಯಮದ ಮೇರೆಗೆ ಒದಗಿಸಿದ ಭದ್ರತೆಯನ್ನು ಅನುಮತಿ ಪತ್ರವು ಜಾರಿಯಲ್ಲಿ ಮುಂದುವರಿಯುವಷ್ಟು ಕಾಲ ಪೂರ್ಣವಾಗಿ ಇಟ್ಟುಕೊಂಡಿರತಕ್ಕದ್ದು ಮತ್ತು ವಿವರಣಾ ಪಟ್ಟಿಕೆಗಳನ್ನು ಕೊಡಬೇಕಾದ ದಿನಾಂಕದಂದು ತೆರಿಗೆಗಾಗಿನ ರಸೀದಿಯೊಂದಿಗೆ ಒದಗಿಸದಿದ್ದರೆ ಅಥವಾ ಸೂಕ್ತ ವಿಚಾರಣೆಯ ತರುವಾಯ ವಿವರಣಾಪಟ್ಟಿಕೆ ಸರಿಯಾಗಿಲ್ಲವೆಂದು ಕಂಡುಬಂದರೆ ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ತಪ್ಪಿದ ಸಂದರ್ಭದಲ್ಲಿ ಸಹ ಭದ್ರತೆಯು (ಯಾವುದೇ ಕಾಲದಲ್ಲಿ ಚಲನಚಿತ್ರ ಪ್ರದರ್ಶನಗಳ ಮೇಲೆ ಬಾಕಿಯಾಗುವ) ಮನೋರಂಜನಾ ತೆರಿಗೆ, ಅಧಿಭಾರದ ಮತ್ತು ಹೆಚ್ಚಿನ ತೆರಿಗೆ ಬಗ್ಗೆ ಪೂರ್ವ ಸೂಚನೆಯಿಲ್ಲದೆ ಹೊಂದಾಣಿಕೆಗೆ ಗುರಿಯಾಗತಕ್ಕದ್ದು.

23. (1) ಮಾಲೀಕನು ನಿಜವಾದ ಮತ್ತು ಸರಿಯಾದ ಲೆಕ್ಕಪತ್ರಗಳನ್ನು ಇಡತಕ್ಕದ್ದು ಮತ್ತು ವಿವರ ಪಟ್ಟಿಕೆಗಳನ್ನು ನಮೂನೆ IVರಲ್ಲಿನ ಅನುಮತಿ ಪತ್ರದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಒಪ್ಪಿಸತಕ್ಕದ್ದು ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಷರತ್ತುಗಳನ್ನು ಸಹ ಅನುವರ್ತಿಸತಕ್ಕದ್ದು ಮತ್ತು ಪಾಲಿಸತಕ್ಕದ್ದು.

(2) ಚಲನಚಿತ್ರ ಪ್ರದರ್ಶನಗಳ ಮೇಲೆ ಬಾಕಿಯಿರುವ ಮನೋರಂಜನಾ ತೆರಿಗೆ ಅಧಿಭಾರ ಮತ್ತು ಹೆಚ್ಚುವರಿ ತೆರಿಗೆಯನ್ನು ಮಾಲೀಕನು ಮನೋರಂಜನೆ ತೆರಿಗೆ ಅಧಿಕಾರಿಯ ಹೆಸರಿಗೆ ಬರೆದ ಕ್ರಾಸ್ ಮಾಡಿದ

ಚೆಕ್ ಮೂಲಕ ಅಥವಾ ಸರ್ಕಾರಿ ಖಜಾನೆಗೆ ಸಂದಾಯ ಮಾಡತಕ್ಕದ್ದು. ಅವನು ಚೆಕ್ಕು ಅಥವಾ ಖಜಾನೆ ರಸೀದಿಯನ್ನು ತೆರಿಗೆಯು ಸಂಬಂಧಪಡಿವಂಥ ವಿವತಪಟ್ಟಿಕೆಗೆ ಲಗತ್ತಿಸತಕ್ಕದ್ದು.

24. ಮನೋರಂಜನೆಯ ಪ್ರವೇಶಕ್ಕೆ ಯಾವನೇ ವ್ಯಕ್ತಿಯನ್ನು ಅಧಿಕೃತಗೊಳಿಸುವ ಟಿಕೆಟ್ಟಾಗಿರುವ ಯಾವುದೇ ಟಿಕೆಟ್‌ನ್ನು ಅಂಥ ಟಿಕೆಟ್‌ನ ಮೇಲೆ ಪ್ರವೇಶದ ಬೆಲೆ ಮತ್ತು ಇಲ್ಲಿ ಇನ್ನು ಮುಂದೆ ನಮೂದಿಸಿದ ವಿವರಣಾ ಪತ್ರವನ್ನು ಸ್ಪಷ್ಟವಾಗಿ ಮುದ್ರಿಸಿದ, ಮುದ್ರೆ ಹಾಕಿದ ಅನ್ಯಥಾ ಗುರುತು ಮಾಡಿದ್ದ ಹೊರತು ಮತ್ತು ಆ ಟಿಕೆಟ್ ಮೇಲೆ ಮನೋರಂಜನಾ ತೆರಿಗೆ ಅಧಿಕಾರಿಯ ಅಧಿಕೃತ ಮೊಹರಿನಿಂದ ಟಿಕೆಟ್‌ನ ಮೇಲೆ ಹಾಕಿದ್ದ ಹೊರತು ಮಾಲೀಕನು ಅದನ್ನು ಕೊಡತಕ್ಕದ್ದಲ್ಲ ಅಥವಾ ಕೊಡುವಂತೆ ಮಾಡತಕ್ಕದ್ದಲ್ಲ ಅಥವಾ ಕೊಡುವಂತೆ ಅನುಮತಿಸತಕ್ಕದ್ದಲ್ಲ.

ಈ ನಿಯಮದ ಉದ್ದೇಶಕ್ಕಾಗಿ ಪ್ರವೇಶದ ಬೆಲೆಯು ಮನೋರಂಜನಾ ತೆರಿಗೆ ಮತ್ತು ಪ್ರವೇಶಕ್ಕಾಗಿ ಸಂದಾಯ ಮಾಡಿದ ಒಟ್ಟು ಮೊತ್ತದ ಮೇಲೆ ಸಲ್ಲತಕ್ಕ ಅಧಿಭಾರವನ್ನು ಒಳಗೊಳ್ಳುತ್ತದೆ ಮತ್ತು ಅಂಥ ಪ್ರತಿಯೊಂದು ಟಿಕೆಟಿನ ಮೇಲೆ ಮನೋರಂಜನಾ ತೆರಿಗೆ ಮತ್ತು ಅಧಿಭಾರವನ್ನು ಹೊರತುಪಡಿಸಿ, ಪ್ರವೇಶದ ಬೆಲೆ, ಮನೋರಂಜನಾ ತೆರಿಗೆಯ ಮೊಬಲಗು ಅಧಿಭಾರದ ಮೊಬಲಗು ಮತ್ತು ಮನೋರಂಜನಾ ತೆರಿಗೆ ಮತ್ತು ಅಧಿಭಾರವು ಸೇರಿದಂತೆ ಒಟ್ಟು ಮೊಬಲಗನ್ನು ತೋರಿಸುವ ವಿವರಣೆಯನ್ನು ಪ್ರತಿಯೊಂದು ಟಿಕೆಟಿನ ಮೇಲೆ ಗುರುತು ಹಾಕತಕ್ಕದ್ದು.

25. ಮಾಲೀಕನು ಕೊಟ್ಟಿರುವ ಸೀಸನ್ ಟಿಕೆಟ್‌ಗಳ ಸಂಖ್ಯೆ ಮತ್ತು ವರ್ಗಗಳು ಅಂಥ ಟಿಕೆಟ್‌ಗಳು ಲಭ್ಯವಿರುವ ಅವಧಿ ಮತ್ತು ಅವುಗಳಿಂದ ಪಡೆದ ಒಟ್ಟು ಮೊತ್ತವನ್ನು ತೋರಿಸುವ Vನೇ ನಮೂನೆಯಲ್ಲಿನ ವಿವರಣ ಪಟ್ಟಿಕೆಯನ್ನು ಅಂಥ ಸೀಸನ್ ಟಿಕೆಟ್‌ಗಳು ಯಾವ ಮನೋರಂಜನೆಗಳ ಪ್ರವೇಶಕ್ಕೆ ಕಾನೂನು ಸಮ್ಮತವಾಗಿರುವುದೋ ಆ ಮನೋರಂಜನೆಗಳ ಸರಣಿಗಳ ಮೊದಲನೆಯದಕ್ಕಾಗಿ ವಿವರಣ ಪಟ್ಟಿಕೆಯ ಜೊತೆಗೆ ಮನೋರಂಜನಾ ತೆರಿಗೆ ಅಧಿಕಾರಿಗೆ ಕಳುಹಿಸತಕ್ಕದ್ದು. ಬಾಕಿ ಇರುವ ಮನೋರಂಜನಾ ತೆರಿಗೆ ಮತ್ತು ಅಧಿಭಾರವನ್ನು ಸಂದಾಯ ಮಾಡಿದ್ದಕ್ಕಾಗಿನ ಸರ್ಕಾರಿ ಖಜಾನೆಯ ರಸೀದಿ ಅಥವಾ ಮನೋರಂಜನೆಯ ಅಧಿಕಾರಿಯ ಹೆಸರಿಗೆ ಬರೆಯಲಾದ ಕ್ರಾಸ್ ಮಾಡಿದ ಚೆಕ್ ಅಂಥ ವಿವರ ಪಟ್ಟಿಕೆಯ ಜೊತೆಗೆ ಇರತಕ್ಕದ್ದು. ಯಾವುದೇ ಸೀಸನ್ ಟಿಕೆಟನ್ನು ಅಂಥ ಸೀಸನ್ ಟಿಕೆಟ್‌ನ್ನು ಯಾವ ಮನೋರಂಜನೆಗಳಿಗೆ ಆ ಸೀಸನ್ ಟಿಕೆಟು ಕಾನೂನು ಸಮ್ಮತವಾಗಿರುವುದೋ ಆ ಮನೋರಂಜನಾ ಸರಣಿಗಳ ಮುಂದುವರಿಕೆಯ ತರುವಾಯ ಕೊಡಲಾದರೆ ಅದನ್ನು ಕೊಡಲಾದ ನಂತರ ನಡೆಯುವ ಮನೋರಂಜನೆಗಾಗಿ ಕಳುಹಿಸಬೇಕಾದ ವಿವರ ಪಟ್ಟಿಕೆಯಲ್ಲಿ ತೋರಿಸತಕ್ಕದ್ದು.

26. (1) ಮಾಲೀಕನು ಯಾವನೇ ವ್ಯಕ್ತಿಯನ್ನು, ಟಿಕೆಟನ್ನು ಪಡೆಯದೆ ಆ ವ್ಯಕ್ತಿಯು ಸಂದಾಯ ಮಾಡದೆ ಪ್ರವೇಶ ಪಡೆಯಲು ಅವನನ್ನು ಹಕ್ಕುಳ್ಳವನನ್ನಾಗಿಸುವ ಮತ್ತು ಗೌರವಾರ್ಥವೆಂದು ಸ್ಪಷ್ಟವಾಗಿ ಗುರುತು ಮಾಡಿದ ಟಿಕೆಟನ್ನು ಹೊಂದಿರುವ ವ್ಯಕ್ತಿಯಾಗಿದ್ದ ಹೊರತು ಮನೋರಂಜನೆಗೆ ಪ್ರವೇಶ ಕೊಡತಕ್ಕದ್ದಲ್ಲ ಅಥವಾ ಪ್ರವೇಶ ಕೊಡುವಂತೆ ಮಾಡತಕ್ಕದ್ದಲ್ಲ ಅಥವಾ ಪ್ರವೇಶಿಸಲು ಅನುಮತಿಸತಕ್ಕದ್ದಲ್ಲ.

(2) ಮಾಲೀಕನು ಮನರಂಜನೆಗೆ ಪ್ರವೇಶಿಸಲಿರುವ ಎಲ್ಲಾ ವ್ಯಕ್ತಿಗಳ ಟಿಕೆಟ್‌ಗಳನ್ನು ಸಂಗ್ರಹಿಸುವಂತೆ ಮಾಡತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು ಮನೋರಂಜನೆಗೆ ಪ್ರವೇಶ ಪಡೆಯುವುದಕ್ಕೆ ಮುಂಚೆ ಟಿಕೆಟನ್ನು ಸಂಗ್ರಹಿಸುವ ವ್ಯಕ್ತಿಗೆ ಟಿಕೆಟನ್ನು ಕೊಡತಕ್ಕದ್ದು. ಟಿಕೆಟನ್ನು ಹಾಗೆ ಸಂಗ್ರಹಿಸಿದಾಗ ಅದನ್ನು ಎರಡಾಗಿ ಹರಿಯತಕ್ಕದ್ದು. ಟಿಕೆಟ್ಟಿನ ಮೂಲ ಪ್ರತಿಯನ್ನು ಮನೋರಂಜನೆಗಳಿಗೆ ಪ್ರವೇಶ ಪಡೆಯಬೇಕಾದ ವ್ಯಕ್ತಿಗೆ ಹಿಂತಿರುಗಿಸತಕ್ಕುದು ಮತ್ತು ದ್ವಿಪ್ರತಿಯನ್ನು ಟಿಕೆಟಿಗೆ ಸಂವಾದಿಯಾದ ಪಕ್ಕ ಪ್ರತಿಯೊಂದಿಗೆ ಮನೋರಂಜನೆಯು ಮುಕ್ತಾಯವಾದ ನಂತರ ಬರುವ ಎರಡನೇ ದಿನದ ಮಧ್ಯಾಹ್ನ 12ರ ವರೆಗೆ ಮಾಲೀಕನು ಇಟ್ಟುಕೊಳ್ಳತಕ್ಕದ್ದು

ಮತ್ತು ಪರೀಕ್ಷಿಸಿಟ್ಟುಕೊಳ್ಳತಕ್ಕದ್ದು. ಹಾಗೆ ಇಟ್ಟುಕೊಂಡ ಮತ್ತು ಪರೀಕ್ಷಿಸಿದ ಪಕ್ಕ ಪ್ರತಿಯೊಂದಿಗಿನ ದ್ವಿಪ್ರತಿಯನ್ನು ಮನೋರಂಜನೆಯು ಮುಕ್ತಾಯವಾದ ನಂತರ ಬರುವ ಎರಡನೇ ದಿನದ ಮಧ್ಯಾಹ್ನ 12ರ ತರುವಾಯ ಕೂಡಲೇ ನಾಶಪಡಿಸತಕ್ಕದ್ದು.

(3) ಮನೋರಂಜನೆಗೆ ಪ್ರವೇಶ ಪಡೆದಿರುವ ವ್ಯಕ್ತಿಯು 10ನೇ ಪ್ರಕರಣದ ಮೇರೆಗೆ ಮನೋರಂಜನೆಯು ಯಾವುದೇ ಸ್ಥಳಕ್ಕೆ ಪ್ರವೇಶಿಸಲು ಅಧಿಕೃತನಾದ ಅಧಿಕಾರಿಯು ಮನೋರಂಜನೆಯು ನಡೆಯುತ್ತಿರುವಲ್ಲಿ ಅಥವಾ ಅದಕ್ಕೆ ಮುಂಚೆ ಅಥವಾ ತರುವಾಯ ತಗಾದೆ ಮಾಡಿದ ಮೇಲೆ ಕೂಡಲೇ ತಾನು ಯಾವ ಟಿಕೆಟಿನಿಂದಾಗಿ ಪ್ರವೇಶ ಪಡೆದಿದ್ದನೋ ಆ ಟಿಕೆಟ್‌ನ ಭಾಗವನ್ನು ಸಂದಾಯವಿಲ್ಲದೆ ಅಥವಾ ಇಳಿಸಿದ ದರದಲ್ಲಿ ಸಂದಾಯ ಮಾಡಿ ಪ್ರವೇಶ ಪಡೆಯಲು ಅವನನ್ನು ಹಕ್ಕುಳ್ಳವನನ್ನಾಗಿಸುವ ಗೌರವಾರ್ಥ ಟಿಕೆಟನ್ನು ಅಂಥ ಅಧಿಕಾರಿಗೆ ಹಾಜರ್ಪಡಿಸತಕ್ಕದ್ದು.

27. (1) ಮಾಲೀಕನು ಪ್ರವೇಶಕ್ಕಾಗಿನ ಸಂದಾಯಗಳ ರಿಜಿಸ್ಟರುಗಳನ್ನು ನಮೂನೆ IIರಲ್ಲಿ ಇಡತಕ್ಕದ್ದು.

(2) ನಮೂನೆ Iರ ರಿಜಿಸ್ಟರು ಪ್ರತಿಯೊಂದು ಒಂದು ನೂರು ಹಾಳೆಗಳನ್ನು ಒಳಗೊಂಡಿರುವ ಯಂತ್ರದ ಮೂಲಕ ಅನುಕ್ರಮವಾಗಿ ಸಂಖ್ಯೆಯನ್ನು ಹಾಕಿರುವಂಥ ಪುಸ್ತಕಗಳಲ್ಲಿರತಕ್ಕದ್ದು.

(3) ನಮೂನೆ IIರ ಪ್ರತಿಯೊಂದು ಹಾಳೆಯು ಅಧಿಕಾರ ವ್ಯಾಪ್ತಿಯನ್ನುಳ್ಳ ಮನೋರಂಜನಾ ತೆರಿಗೆ ಅಧಿಕಾರಿಯ ಅಧಿಕೃತ ಮೊಹರನ್ನು ಹೊಂದಿರತಕ್ಕದ್ದು.

(4) ಪ್ರವೇಶಕ್ಕಾಗಿನ ಸಂದಾಯದ ವಿವರಗಳನ್ನು ಪ್ರತಿಯೊಂದು ಪ್ರದರ್ಶನಕ್ಕಾಗಿ ಟಿಕೆಟ್‌ಗಳನ್ನು ಕೊಡುವುದು ಮುಕ್ತಾಯವಾದ ತರುವಾಯ ಕೂಡಲೇ ಆದರೆ ಯಾವುದೇ ಸಂದರ್ಭದಲ್ಲೂ ಚಲನಚಿತ್ರ ಪ್ರದರ್ಶನದ ಪ್ರಾರಂಭಕ್ಕೆ ಗೊತ್ತುಪಡಿಸಿದ ಕಾಲಕ್ಕೆ 60 ನಿಮಿಷಗಳಿಗೆ ಮೀರದಂತೆ ಪ್ರತ್ಯೇಕವಾಗಿ ನಮೂದಿಸತಕ್ಕದ್ದು ಮತ್ತು ಪ್ರತಿದಿನದ ಲೆಕ್ಕದ ಉಧೃತಿಯನ್ನು ಮುಂದಿನ ಕೆಲಸದ ದಿನದಂದು ಮನೋರಂಜನಾ ತೆರಿಗೆ ಅಧಿಕಾರಿಗೆ ಕಳುಹಿಸತಕ್ಕದ್ದು.

28. (1) ಮಾಲೀಕನು ಎಲ್ಲಾ ಯುಕ್ತಕಾಲಗಳಲ್ಲಿ ಮನೋರಂಜನಾ ತೆರಿಗೆ ಅಧಿಕಾರಿ ಅಥವಾ ಅಧಿನಿಯಮ 10ನೇ ಪ್ರಕರಣದ (1)ನೇ ಉಪಪ್ರಕರಣದ (ಕ) ಖಂಡದ ಮೇರೆಗೆ ರಾಜ್ಯ ಸರ್ಕಾರದಿಂದ ಅಧಿಕೃತನಾದ ಇತರ ಯಾವನೇ ಅಧಿಕಾರಿಯ ತಗಾದೆಯ ಮೇಲೆ ಅಂಥ ಅಧಿಕಾರಿಯ ಮುಂದೆ ಯಾವುದೇ ಮನೋರಂಜನೆಗೆ ಸಂಬಂಧಿಸಿದಂತೆ ಮಾಲೀಕನು ಇಟ್ಟಿರುವ ಎಲ್ಲಾ ಪುಸ್ತಕಗಳು ಮತ್ತು ದಾಖಲೆಗಳನ್ನು ಮತ್ತು ತತ್ಕಾಲದಲ್ಲಿ ಅವನ ಸ್ವಾಧೀನದಲ್ಲಿರುವ ಎಲ್ಲಾ ಟಿಕೆಟ್‌ಗಳನ್ನು ಮತ್ತು ಟಿಕೆಟ್‌ಗಳ ಎಲ್ಲಾ ಭಾಗಗಳನ್ನು ಹಾಜರುಪಡಿಸತಕ್ಕದ್ದು ಅಥವಾ ಹಾಜರುಪಡಿಸುವಂತೆ ಮಾಡತಕ್ಕುದು ಮತ್ತು ಪರೀಕ್ಷಿಸುವ ಅಥವಾ ವಿಚಾರಣೆಯ ಉದ್ದೇಶಕ್ಕಾಗಿ ಅವುಗಳನ್ನು ಪರೀಕ್ಷಿಸಲು ಮತ್ತು ಅವುಗಳ ಲೆಕ್ಕಗಳನ್ನು ತೆಗೆದುಕೊಳ್ಳಲು ಅಥವಾ ತೆಗೆದುಕೊಂಡು ಹೋಗಲು ಅವಕಾಶ ಕೊಡತಕ್ಕದ್ದು.

(2) ಮಾಲೀಕನು ಮನೋರಂಜನೆಯು ನಡೆಯುತ್ತಿರುವಲ್ಲಿ ಚಿತ್ರ ಮಂದಿರದ ಮುಖ್ಯ ಗೇಟನ್ನು (ದ್ವಾರವನ್ನು) ಮತ್ತು ಕಚೇರಿಯನ್ನು ತೆರೆದಿಡತಕ್ಕದ್ದು. ಮಾಲೀಕನು ಅಥವಾ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಯಾವನೇ ವ್ಯಕ್ತಿಯು ಮನೋರಂಜನೆಯ ಸ್ಥಳದಲ್ಲಿ ಹಾಜರಿರತಕ್ಕದ್ದು ಮತ್ತು ಪರಿಶೀಲನೆ ನಡೆಸುವಲ್ಲಿ ಅಂಥ ಅಧಿಕಾರಿಗೆ ಸಹಾಯ ಮಾಡತಕ್ಕದ್ದು.

29. ಅನುಮತಿ ಪತ್ರವನ್ನು ಎದ್ದುಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕುದು ಮತ್ತು ತಗಾದೆಯ ಮೇಲೆ ಪರಿಶೀಲನಾ ಅಧಿಕಾರಿಯ ಮುಂದೆ ಅದನ್ನು ಹಾಜರುಪಡಿಸತಕ್ಕದ್ದು.

29(ಕ) ಈ ಭಾಗದಲ್ಲಿನ ನಿಯಮಗಳು ಈ ಅಧಿನಿಯಮದ 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಸ್ವರೂಪದ ಟಿಕೆಟ್‌ಗಳಿಂದ ಯಾವ ಮನೋರಂಜನೆಗಳಿಗೆ ಪ್ರವೇಶಕ್ಕೆ ಅಗತ್ಯಪಡಿಸಲಾಗಿದೆಯೋ ಆ ಎಲ್ಲ ಮನೋರಂಜನೆಗಳಿಗೆ ಅನ್ವಯವಾಗತಕ್ಕದ್ದು.

29(ಖ) ಈ ಭಾಗದಲ್ಲಿನ ನಿಯಮಗಳ ಮೂಲಕ ಅನ್ಯಥಾ ಉಪಬಂಧಿಸಿದಂತೆ ಹೊರತು ಯಾವನೇ ಮಾಲೀಕನು ಮನೋರಂಜನೆಗೆ ಪ್ರವೇಶ ಪಡೆಯುವುದಕ್ಕೆ ವ್ಯಕ್ತಿಯನ್ನು ಅಧಿಕೃತಗೊಳಿಸುವ ಟಿಕೆಟ್ ಆಗಿರುವ ಯಾವುದೇ ಟಿಕೆಟನ್ನು ಅದು ಮನೋರಂಜನಾ ತೆರಿಗೆ ಅಧಿಕಾರಿಯ ಅಧಿಕೃತ ಮೊಹರನ್ನು ಹೊಂದಿದ್ದ ಹೊರತು ಕೊಡತಕ್ಕದ್ದಲ್ಲ ಅಥವಾ ಕೊಡುವಂತೆ ಮಾಡತಕ್ಕದ್ದಲ್ಲ ಅಥವಾ ಕೊಡಲು ಅನುಮತಿಸತಕ್ಕದ್ದಲ್ಲ.

29(ಗ) (1) ಮನೋರಂಜನೆಗೆ ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳಿಗೆ ಪ್ರವೇಶವನ್ನು ಅಧಿಕೃತಗೊಳಿಸುವುದೆಂದು ತಾತ್ಪರ್ಯವಾಗುವ ಅಥವಾ ಉದ್ದೇಶಿಸಿದ ಯಾವುದೇ ಟಿಕೆಟನ್ನು ಕೊಟ್ಟಿರುವಲ್ಲಿ ಆ ಟಿಕೆಟ್ ಮೇಲೆ ಪ್ರವೇಶಪಡೆಯಲು ಹಾಗೇ ಅಧಿಕೃತಗೊಳಿಸಿದ ವ್ಯಕ್ತಿಗಳ ಸಂಖ್ಯೆ ಮತ್ತು ಟಿಕೆಟ್‌ಗಾಗಿ ವಿಧಿಸಿದ ಒಟ್ಟು ಬೆಲೆಯನ್ನು ಸ್ಪಷ್ಟವಾಗಿ ಗುರುತುಮಾಡತಕ್ಕದ್ದು ಮತ್ತು ಮಾಲೀಕನು ಆ ಟಿಕೆಟ್‌ನ ಕಾರಣದಿಂದಾಗಿ ಟಿಕೆಟ್‌ನ ಮೇಲೆ ಗುರುತು ಮಾಡಿದ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳಿಗೆ ಕೊಡತಕ್ಕದ್ದಲ್ಲ ಅಥವಾ ಪ್ರವೇಶ ಕೊಡುವಂತೆ ಮಾಡತಕ್ಕದ್ದಲ್ಲ ಅಥವಾ ಪ್ರವೇಶಿಸಲು ಅನುಮತಿಸತಕ್ಕದ್ದಲ್ಲ.

(2) ಅಂಥ ಪ್ರಕರಣದಲ್ಲಿ ವಿಧಸಬಹುದಾದ ಮನೋರಂಜನೆ ತೆರಿಗೆ ಮತ್ತು ಅಧಿಭಾರವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಆ ಟಿಕೆಟ್‌ನ ಮೇರೆಗೆ ಪ್ರವೇಶಿಸಲು ಅಧಿಕೃತಗೊಳಿಸಿದ ವ್ಯಕ್ತಿಗಳಿರುವಷ್ಟು ಪ್ರವೇಶಕ್ಕಾಗಿನ ಸಂದಾಯಗಳು ಇರುವುದಾಗಿ ಭಾವಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಸಂದಾಯವು ಆ ಟಿಕೆಟ್‌ಗಾಗಿ ವಿಧಿಸಿದ ಒಟ್ಟು ಬೆಲೆಯನ್ನು ಹಾಗೆ ಅಧಿಕೃತಗೊಳಿಸಿದ ವ್ಯಕ್ತಿಗಳ ಒಟ್ಟು ಸಂಖ್ಯೆಯಿಂದ ಭಾಗಿಸಿದ ಮೇಲೆ ಬರುವ ಮೊಬಲಗಿಗೆ ಸಮನಾಗಿರುವುದಾಗಿ ಭಾವಿಸತಕ್ಕದ್ದು.

29(ಘ) ಮಾಲೀಕನು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮನೋರಂಜನಾ ತೆರಿಗೆ ಅಧಿಕಾರಿಗೆ ಮನೋರಂಜನೆ ಸ್ಥಳ, ದಿನಾಂಕ ಮತ್ತು ಕಾಲದ ಬಗ್ಗೆ ಕನಿಷ್ಟ ಪಕ್ಷ ಮೂರು ದಿವಸಗಳ ನೋಟೀಸನ್ನು ಕೊಡತಕ್ಕದ್ದು ಮತ್ತು ನಮೂನೆ IVರಲ್ಲಿ ಅನುಮತಿ ಪತ್ರವನ್ನು ಪಡೆಯತಕ್ಕದ್ದು. ಅವನು ಗ್ರಾಮ ಮುಖ್ಯಸ್ಥನಿಗೆ ಮತ್ತು ಆ ಸ್ಥಳದ ಮೇಲೆ ಅಧಿಕಾರದ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೂ ಸಹ ನೋಟೀಸನ್ನು ಕೊಡತಕ್ಕದ್ದು.

29(ಙ) ಮಾಲೀಕನು ಸೋಮವಾರದಿಂದ ಭಾನುವಾರದವರೆಗಿನ (ಎರಡೂ ದಿವಸಗಳನ್ನು ಒಳಗೊಂಡು) ಆ ವಾರದಲ್ಲಿನ ಎಲ್ಲಾ ಆಟಗಳು ಪ್ರದರ್ಶನಗಳಿಗಾಗಿ ನಮೂನೆ IIರಲ್ಲಿ ನಿಯಮಿಸಿದ ವಿವರಗಳಿಗೆ ಸಂಬಂಧಿಸಿದಂತೆ ಒಟ್ಟು ಜುಮ್ಲಾಗಳನ್ನು ಕೊಟ್ಟು ನಮೂನೆ IIಖದಲ್ಲಿನ ವಿವರ ಪಟ್ಟಿಕೆಯನ್ನು ದ್ವಿಪ್ರತಿಯಲ್ಲಿ ಆ ಪ್ರದೇಶದ ಮನೋರಂಜನೆಗಳ ತೆರಿಗೆ ಅಧಿಕಾರಿಗೆ ಹೆಚ್ಚೆಂದರೆ ನಿಕಟೋತ್ತರದ ಮಂಗಳವಾರದಂದು ತಲುಪುವ ಹಾಗೆ ಒಪ್ಪಿಸತಕ್ಕದ್ದು. ಆ ವಿವರ ಪಟ್ಟಿಕೆಯ ಜೊತೆಗೆ ಆ ವಿವರ ಪಟ್ಟಿಕೆಗೆ ಸಂಬಂಧಪಟ್ಟಂಥ ಎಲ್ಲಾ ಆಟಗಳ/ಪ್ರದರ್ಶನಗಳಿಗೆ ಸಂಬಂಧಿಸಿದಂತೆ ಬಾಕಿಯಾಗುವ ಚಲನಚಿತ್ರ ಪ್ರದರ್ಶನಗಳ ಮೇಲೆ ಮನೋರಂಜನಾ ತೆರಿಗೆ ಮತ್ತು ಅಧಿಭಾರ ಮತ್ತು ಹೆಚ್ಚಿನ ತೆರಿಗೆಯ ಪೂರ್ಣ ಮೊಬಲಗಿಗಾಗಿ ಯುಕ್ತ ನಮೂನೆಯಲ್ಲಿ ಖಜಾನೆ ರಸೀದಿ ಅಥವಾ ಮನೋರಂಜನಾ ತೆರಿಗೆ ಅಧಿಕಾರಿಯ ಹೆಸರಿಗೆ ಬರೆದ ಕ್ರಾಸ್ ಮಾಡಿದ ಚೆಕ್ಕು ಇರತಕ್ಕದ್ದು.

(2) (1)ನೆಯ ಉಪ-ನಿಯಮದಲ್ಲಿ ಉಲ್ಲೇಖಿಸಿದ ವಿವರ ಪಟ್ಟಿಕೆ ಮತ್ತು ಖಜಾನೆ ರಸೀದಿ ಅಥವಾ ಕ್ರಾಸ್ ಮಾಡಿದ ಚೆಕ್ಕನ್ನು ಸ್ವೀಕರಿಸಿದ ಮೇಲೆ ಮನೋರಂಜನಾ ತೆರಿಗೆ ಅಧಿಕಾರಿಯು ಅವನು ಅವಶ್ಯಕವೆಂದು ಪರ್ಯಾಲೋಚಿಸುವಂಥ ಲೆಕ್ಕಪತ್ರಗಳ ಪರಿಶೋಧನೆಯ ತರುವಾಯ ಮತ್ತು ವಿಚಾರಣೆಯನ್ನು ನಡೆಸಿದ

ತರುವಾಯ ಮತ್ತು ಆ ವಿವರ ಪಟ್ಟಿಕೆಯು ಸರಿಯಾಗಿದೆ ಮತ್ತು ಪೂರ್ಣವಾಗಿದೆ ಎಂದು ಮತ್ತು ಮನೋರಂಜನಾ ತೆರಿಗೆ ಮತ್ತು ಅಧಿಭಾರದ ಸರಿಯಾದ ಮೊಬಲಗನ್ನು ಸಂದಾಯ ಮಾಡಲಾಗಿದೆ ಎಂದು ತಾನು ಮನದಟ್ಟು ಮಾಡಿಕೊಂಡ ತರುವಾಯ ವಿವರ ಪಟ್ಟಿಕೆಯನ್ನು ಅಂಗೀಕರಿಸತಕ್ಕದ್ದು.

(3) ಮಾಲೀಕನು ಕೊಡಬೇಕಾದ ದಿನಾಂಕದಂದು ಯಾವುದೇ ವಾರಕ್ಕೆ ಸಂಬಂಧಿಸಿದಂತೆ ಯಾವುದೇ ವಿವರ ಪಟ್ಟಿಕೆಯನ್ನು ಒಪ್ಪಿಸದಿದ್ದರೆ ಅಥವಾ ಒಪ್ಪಿಸಿದ ವಿವರ ಪಟ್ಟಿಕೆಯು ಮನೋರಂಜನಾ ತೆರಿಗೆ ಅಧಿಕಾರಿಗೆ ಸರಿಯಲ್ಲ ಅಥವಾ ಅಪೂರ್ಣವಾಗಿದೆ ಎಂದು ಕಂಡುಬಂದರೆ ಅಥವಾ ಅದರೊಂದಿಗೆ ಪೂರ್ಣ ಮೊಬಲಗಿಗಾಗಿ ಖಜಾನೆ ರಸೀದಿ ಅಥವಾ ಕ್ರಾಸ್ ಮಾಡಿದ ಡಿಮ್ಯಾಂಡ್ ಡ್ರಾಫ್ಟ್ ಅಥವಾ ಕ್ರಾಸ್ ಮಾಡಿದ ಚೆಕ್ ಇಲ್ಲದಿದ್ದರೆ ಮನೋರಂಜನಾ ತೆರಿಗೆ ಅಧಿಕಾರಿಯು ತಾನು ಅವಶ್ಯಕವೆಂದು ಪರ್ಯಾಲೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಮತ್ತು ಮಾಲೀಕನಿಗೆ ವಿವರ ಪಟ್ಟಿಕೆಯ ಸರಿತನ ಮತ್ತು ಪೂರ್ಣತೆಯನ್ನು ರುಜುವಾತುಪಡಿಸಲು ಯುಕ್ತ ಅವಕಾಶ ಕೊಟ್ಟ ತರುವಾಯ ಅಧಿನಿಯಮದ 3.3ಕ ಮತ್ತು 4ನೇ ಪ್ರಕರಣಗಳ ಮೇರೆಗೆ ಸಂದಾಯ ಮಾಡಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ಮನರಂಜನಾ ತೆರಿಗೆ ಅಧಿಭಾರ ಹೆಚ್ಚುವರಿ ತೆರಿಗೆಗಳನ್ನು ತನ್ನ ಅತ್ಯುತ್ತಮ ವಿವೇಚನಾನುಸಾರ ನಿರ್ಧರಣೆ ಮಾಡಿ ಆದೇಶವನ್ನು ಮಾಡತಕ್ಕುದು. ಮನೋರಂಜನಾ ತೆರಿಗೆ ಅಧಿಕಾರಿಯು ಚಲನಚಿತ್ರ ಪ್ರದರ್ಶನಗಳ ಮೇಲೆ ಬಾಕಿಯಾಗುವ ಮನರಂಜನಾ ತೆರಿಗೆ, ಅಧಿಭಾರ ಮತ್ತು ಹೆಚ್ಚಿನ ತೆರಿಗೆಯನ್ನು ನೋಟೀಸಿನ ಜಾರಿಯ ದಿನಾಂಕದಿಂದ ಒಂದು ವಾರದೊಳಗೆ ಸಂದಾಯ ಮಾಡುವಂತೆ ಕೋರುವ ನಮೂನೆ XIIರಲ್ಲಿ ಮಾಲೀಕನಿಗೆ ಆ ತರುವಾಯ ಸದರಿ ನೋಟೀಸನ್ನು ಜಾರಿ ಮಾಡತಕ್ಕದ್ದು. ಚಲನಚಿತ್ರದ ಪ್ರದರ್ಶನಗಳ ಮೇಲಿನ ಮನರಂಜನಾ ತೆರಿಗೆ ಅಧಿಭಾರ ಮತ್ತು ಹೆಚ್ಚಿನ ತೆರಿಗೆಗಳನ್ನು ನಿರ್ಧಿಷ್ಟಪಡಿಸಿದ ಕಾಲದೊಳಗೆ ಸಂದಾಯ ಮಾಡದಿದ್ದರೆ ಮನೋರಂಜನಾ ತೆರಿಗೆ ಅಧಿಕಾರಿಯು ಮಾಲೀಕನಿಂದ ಚಲನಚಿತ್ರ ಪ್ರದರ್ಶನಗಳ ಮೇಲೆ ಬಾಕಿಯಾಗುವ ಮನೋರಂಜನಾ ತೆರಿಗೆ ಅಧಿಭಾರ ಮತ್ತು ಹೆಚ್ಚಿನ ತೆರಿಗೆಗೆ ಸಮಾನವಾದ ಮೊಬಲಗನ್ನು 18ನೆಯ ನಿಯಮದ ಮೇರೆಗೆ ಭದ್ರತೆಗಾಗಿ ಒದಗಿಸಲಾದ ಮೊಬಲಗಿನಿಂದ ಹೊಂದಾಣಿಕೆ ಮಾಡಿಕೊಳ್ಳಬಹುದು ಮತ್ತು ಮಾಲೀಕನು, ಸಂದಾಯವಾಗಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲೆ ಮನರಂಜನಾ ತೆರಿಗೆ, ಅಧಿಭಾರ ಮತ್ತು ಹೆಚ್ಚಿನ ತೆರಿಗೆ ಬಗ್ಗೆ ಅದನ್ನು ಜಮೆ ಮಾಡಬಹುದು. ಮನರಂಜನಾ ತೆರಿಗೆ ಅಧಿಕಾರಿಯ ಬಳಿ ಇರುವ ಭದ್ರತೆಯ ಮೊಬಲಗು ಚಲನಚಿತ್ರ ಪ್ರದರ್ಶನಗಳ ಮೇಲೆ ಬಾಕಿಯಾಗುವ ಮನರಂಜನಾ ತೆರಿಗೆ ಅಧಿಭಾರ ಮತ್ತು ಮೇಲಿನ ಹೆಚ್ಚಿನ ತೆರಿಗೆಗಳಿಗಿಂತ ಕಡಿಮೆ ಬಿದ್ದರೆ ಭದ್ರತೆಯನ್ನು ಪೂರ್ಣವಾಗಿ ಹೊಂದಾಣಿಕೆ ಮಾಡಿಕೊಂಡ ತರುವಾಯ ಬಾಕಿ ಉಳಿಯುವ ಶುಲ್ಕವನ್ನು 9ನೆಯ ಪ್ರಕರಣದ 3ನೆಯ ಉಪ–ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು.

ಪರಂತು, ಮನರಂಜನಾ ತೆರಿಗೆ ಅಧಿಕಾರಿಯು ಚಲನಚಿತ್ರ ಪ್ರದರ್ಶನಗಳ ಮೇಲೆ ಸಂದಾಯ ಮಾಡಬೇಕಾದ ಮನರಂಜನಾ ತೆರಿಗೆ ಅಧಿಭಾರ ಮತ್ತು ಹೆಚ್ಚಿನ ತೆರಿಗೆಗಳನ್ನು ವಿವರ ಪಟ್ಟಿಕೆಯಲ್ಲಿ ಬಾಕಿಯಾಗಿ ಇರುವುದಾಗಿ ತೋರಿಸಿದ ಹೆಚ್ಚಿನ ಅಂಕಕ್ಕೆ ನಿರ್ಧರಿಸುವ ಆದೇಶವನ್ನು ಮಾಡಿದಾಗಲೆಲ್ಲಾ ಅವನು ಅದಕ್ಕಾಗಿನ ಕಾರಣಗಳನ್ನು ಬರಹದಲ್ಲಿ ದಾಖಲು ಮಾಡತಕ್ಕದ್ದು ಮತ್ತು ಅಂಥ ಆದೇಶದ ಒಂದು ಪ್ರತಿಯನ್ನು ಮಾಲೀಕನಿಗೆ ಒದಗಿಸತಕ್ಕದ್ದು.

(4) ಭದ್ರತೆಯ ಮೊಬಲಗನ್ನು (3) ನೇ ಉಪ–ನಿಯಮದ ಮೇರೆಗೆ ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆ ಅಧಿಭಾರ ಮತ್ತು ಹೆಚ್ಚಿನ ತೆರಿಗೆಗಾಗಿ ಹೊಂದಾಣಿಕೆ ಮಾಡಿಕೊಂಡಿದ್ದರೆ ಮನರಂಜನಾ ತೆರಿಗೆ ಅಧಿಕಾರಿಯು 18ನೇ ನಿಯಮದ ಮೇರೆಗೆ ನಿಗದಿ ಮಾಡಿದ ಮೂಲ ಮೊಬಲಗಿಗೆ ತುಂಬಿಕೊಡಲು ಮಾಲೀಕನನ್ನು ತಗಾದೆ ಮಾಡತಕ್ಕದ್ದು ಮತ್ತು ಅದನ್ನು ಮಾಡುವವರಿಗೆ ಮನರಂಜನಾ ತೆರಿಗೆ ಅಧಿಕಾರಿಯು 19ನೇ ನಿಯಮದ ಮೇರೆಗೆ ಮಾಲೀಕನು ಮುದ್ರೆ ಹಾಕುವ ಉದ್ದೇಶಕ್ಕಾಗಿ ತನಗೆ ಕಳುಹಿಸಿದ ಟಿಕೆಟ್‌ಗಳಿಗೆ ತನ್ನ ಅಧಿಕೃತ ಮೊಹರನ್ನು ಹಾಕಲು ನಿರಾಕರಿಸಬಹುದು.

29(ಚ) 68ನೇ ಪ್ರಕರಣದ ಮೇರೆಗೆ ಚಲಾಯಿಸಬಹುದಾದ ಅಧಿಕಾರವನ್ನು ಯಾವ ಅವಧಿಗೆ ನಿರ್ಧರಣೆಯ ಪ್ರಶ್ನೆಯು ಸಂಬಂಧಪಡುವುದೋ ಆ ಅವಧಿ ಮುಕ್ತಾಯವಾದಂದಿನಿಂದ ಐದು ವರ್ಷಗಳಾಗಿರತಕ್ಕದ್ದು.

29(ಛ) ಈ ಅಧಿನಿಯಮದ ಪ್ರಕರಣ 4–ಕ ಪ್ರಕಣದಲ್ಲಿ ಒಳಗೊಳ್ಳದ ಚಿತ್ರಮಂದಿರದ ಮಾಲೀಕನು,—

(ಕ) ಟಿಕೆಟ್ ಕೊಡುವ ಪ್ರತಿಯೊಂದು ಕೌಂಟರಿನಲ್ಲಿ ಚಿತ್ರಮಂದಿರದಲ್ಲಿ ನಡೆಸುವ ಚಿತ್ರ ಪ್ರದರ್ಶನಗಳಿಗೆ ಪ್ರವೇಶಕ್ಕಾಗಿ ಮನೋರಂಜನಾ ತೆರಿಗೆ ಅಧಿಕಾರಿಯ ಅಧಿಕೃತ ಮೊಹರನ್ನು ಹೊಂದಿರುವ ಟಿಕೆಟ್‌ಗಳನ್ನು ಮಾತ್ರ ಕಾನೂನು ಸಮ್ಮತವೆಂದು ಸಾರ್ವಜನಿಕರಿಗೆ ತಿಳಿಸುವ ನೋಟೀಸನ್ನು; ಮತ್ತು

(ಖ) ಸಭಾಂಗಣದ ಪ್ರತಿಯೊಂದು ಪ್ರವೇಶದಲ್ಲಿ ವ್ಯಕ್ತಿಗಳಿಗೆ ಕೊಡಲಾದ ಟಿಕೆಟ್‌ನ ಮೂಲ ಭಾಗವನ್ನು ತಗಾದೆ ಮಾಡಲು ಮತ್ತು ಪ್ರದರ್ಶನವು ಮುಗಿಯುವವರೆಗೆ ಅದನ್ನು ಅವರ ಬಳಿ ಇಟ್ಟುಕೊಳ್ಳಲು ಪೋಷಕರನ್ನು ಕೋರುವ ನೋಟೀಸನ್ನು–ಪ್ರದರ್ಶಿಸತಕ್ಕದ್ದು ಅಥವಾ ಪ್ರದರ್ಶಿಸುವಂತೆ ಮಾಡತಕ್ಕದ್ದು.

## ಭಾಗ– IV

### ಪ್ರದೇಶವನ್ನು ಯಾಂತ್ರಿಕ ಸಾಧನದ ಮೂಲಕ ನಿಯಂತ್ರಿಸುವ ಸಂದರ್ಭದಲ್ಲಿ ತೆರಿಗೆ ಸಂದಾಯ

30. ರಾಜ್ಯ ಸರ್ಕಾರದ ಅಥವಾ ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ಯಾರಿಗೆ ತನ್ನ ಅಧಿಕಾರಗಳನ್ನು ಪ್ರತ್ಯಾಯೋಜಿಸಬಹುದೋ ಆ ಇತರ ಅಧಿಕಾರಿಯ ಅನುಮೋದನೆಯೊಂದಿಗೆ, ಅಗತ್ಯಪಡಿಸಬಹುದಾದಂಥ ಭದ್ರತೆಯನ್ನು ಮಾಲೀಕನು ಒದಗಿಸಿದ ಮೇಲೆ ಈ ಅಧಿನಿಯಮದ 5ನೇ ಪ್ರಕರಣದ ಉಪಬಂಧಗಳನ್ನು ಅವನು ಉಪಯೋಗಿಸಿಕೊಳ್ಳಲು ಮನೋರಂಜನಾ ತೆರಿಗೆ ಅಧಿಕಾರಿಯು ಅವನಿಗೆ ಅನುಮತಿ ನೀಡಬಹುದು. ಅವನಿಗೆ ನಮೂನೆ IV ರಲ್ಲಿ ಅನುಮತಿ ಪತ್ರವನ್ನು ಕೊಡತಕ್ಕದ್ದು.

31. (1) ಪ್ರವೇಶದ ಪ್ರತಿಯೊಂದು ವರ್ಗಕ್ಕೂ ಪ್ರತ್ಯೇಕವಾದ ಸಾಧನ ಮತ್ತು ಪ್ರವೇಶದ್ವಾರ ಇರತಕ್ಕದ್ದು.

(2) ಯಾಂತ್ರಿಕ ಸಾಧನದ ಮೂಲಕ ಹೊರತುಪಡಿಸಿ ಮತ್ತು ಮನೋರಂಜನಾ ತೆರಿಗೆ ಮತ್ತು ಅಧಿಭಾರವನ್ನು ಒಳಗೊಂಡು ಪ್ರವೇಶ ಬೆಲೆಯ ಸಂದಾಯದ ಮೇಲೆ ಹೊರತು 30ನೇ ನಿಯಮದ ಮೇರೆಗೆ ಕೊಟ್ಟಂಥ ಅನುಮತಿ ಪತ್ರಕ್ಕೆ ಸಂಬಂಧಿಸಿದಂತೆ, ಗೌರವಾರ್ಥ ಎಂದು ಸ್ಪಷ್ಟವಾಗಿ ಗುರುತಿಸಿದ ಪಾಸನ್ನು ಅವನು ಹೊಂದಿದ್ದ ಹೊರತು ಯಾವನೇ ವ್ಯಕ್ತಿಗೆ ಮನೋರಂಜನೆಗೆ ಪ್ರವೇಶ ಕೊಡತಕ್ಕದ್ದಲ್ಲ.

(3) ಮಾಲೀಕನು, ಪ್ರತಿಯೊಂದು ವರ್ಗದ ಪ್ರವೇಶಕ್ಕಾಗಿ ಕೊಟ್ಟ **"ಉಚಿತ"** ಎಂದು ಗುರುತು ಮಾಡಿದ ಪಾಸ್‌ಗಳ ಸಂಖ್ಯೆಯ ಲೆಕ್ಕವನ್ನು ಇಡತಕ್ಕದ್ದು.

32. 30ನೇ ನಿಯಮದ ಮೇರೆಗೆ ಒದಗಿಸಿದ ಭದ್ರತೆಯನ್ನು ಅನುಮತಿ ಪತ್ರವು ಜಾರಿಯಲ್ಲಿರುವಷ್ಟು ಕಾಲದವರೆಗೆ ಪೂರ್ಣವಾಗಿ ಇಟ್ಟುಕೊಂಡು ಬರತಕ್ಕದ್ದು ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲೆ ಮನೋರಂಜನಾ ತೆರಿಗೆ ಅಧಿಭಾರದ ಮತ್ತು ಹೆಚ್ಚಿನ ತೆರಿಗೆಗಾಗಿನ ರಸೀದಿಯೊಂದಿಗೆ ಗಡುವಿನ ದಿನಾಂಕದಂದು ವಿವರ ಪಟ್ಟಿಕೆಗಳನ್ನು ಒದಗಿಸದಿದ್ದರೆ ಅಥವಾ ವಿವರ ಪಟ್ಟಿಕೆಗಳು ಸರಿಯಾಗಿಲ್ಲವೆಂದು ಕಂಡುಬಂದರೆ, ಅದು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು. ತಪ್ಪಿದ ಸಂದರ್ಭದಲ್ಲಿ ಸಹ ಭದ್ರತೆಯು ಯಾವುದೇ ಕಾಲದಲ್ಲಿ ಮುನ್ಸೂಚನೆಯಿಲ್ಲದೆ ಬಾಕಿ ಬಗ್ಗೆ ಹೊಂದಾಣಿಕೆ ಮಾಡಿಕೊಳ್ಳಲು ಗುರಿಯಾಗತಕ್ಕದ್ದು.

33. ಮಾಲೀಕನು, ಪ್ರವೇಶ ಪಡೆದ ವ್ಯಕ್ತಿಗಳ ರಿಜಿಸ್ಟರನ್ನು ನಮೂನೆ VIIರಲ್ಲಿ ಇಡತಕ್ಕದ್ದು.

34. (1) ಮಾಲೀಕನು, ನಿಜವಾದ ಮತ್ತು ಸರಿಯಾದ ಲೆಕ್ಕಗಳನ್ನು ಇಡತಕ್ಕದ್ದು ಮತ್ತು ನಮೂನೆ IV ರಲ್ಲಿನ ಅನುಮತಿ ಪತ್ರವನ್ನು ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಿವರಣಾ ಪಟ್ಟಿಕೆಯನ್ನು ಒಪ್ಪಿಸತಕ್ಕದ್ದು ಮತ್ತು ಅದರಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಷರತ್ತುಗಳನ್ನು ಅನುಮತಿಸತಕ್ಕದ್ದು; ಮತ್ತು ಅವುಗಳನ್ನು ಪಾಲಿಸತಕ್ಕದ್ದು.

(2) ಮಾಲೀಕನು, ಸಿನಿಮಾ ಪ್ರದರ್ಶನಗಳ ಮೇಲೆ ಬಾಕಿಯಾಗುವ ಮನೋರಂಜನಾ ತೆರಿಗೆ ಅಧಿಭಾರ ಮತ್ತು ಹೆಚ್ಚಿನ ತೆರಿಗೆಯನ್ನು ಮನೋರಂಜನಾ ತೆರಿಗೆ ಅಧಿಕಾರಿ ಹೆಸರಿಗೆ ಬರೆಯಲಾದ ಕ್ರಾಸ್ ಮಾಡಿದ ಚೆಕ್ಕಿನ ಮೂಲಕ ಅಥವಾ ಸರ್ಕಾರಿ ಖಜಾನೆಗೆ ಸಂದಾಯ ಮಾಡತಕ್ಕದ್ದು. ಅವನು, ಸಂಬಂಧಪಡುವಂಥ ವಿವರಪಟ್ಟಿಕೆಗೆ ಚಲನಚಿತ್ರ ಪ್ರದರ್ಶನಗಳ ಮೇಲಿನ ಮನೋರಂಜನಾ ತೆರಿಗೆ, ಅಧಿಭಾರ. ಹೆಚ್ಚಿನ ತೆರಿಗೆ ಚೆಕ್ ಮೂಲಕ ಖಜಾನೆ ರಸೀದಿಯನ್ನು ಲಗತ್ತಿಸತಕ್ಕದ್ದು.

35. ಮನೋರಂಜನಾ ಸ್ಥಳದಲ್ಲಿರುವ ಪ್ರತಿಯೊಂದು ಯಾಂತ್ರಿಕ ಸಾಧನವು ಎಲ್ಲ ಯುಕ್ತ ಕಾಲದಲ್ಲಿ ಮನೋರಂಜನಾ ತೆರಿಗೆ ಅಧಿಕಾರಿ ಅಥವಾ ಈ ಅಧಿನಿಯಮದ 10ನೇ ಪ್ರಕರಣದ (1)ನೇ ಉಪಪ್ರಕರಣದ (ಕ) ಖಂಡದ ಮೇರೆಗೆ ರಾಜ್ಯಸರ್ಕಾರವು ಅಧಿಕೃತಗೊಳಿಸಿದ ಯಾವುದೇ ಅಧಿಕಾರಿಯ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು.

36. ಮಾಲೀಕನು, ಎಲ್ಲ ಸೂಕ್ತ ಕಾಲಗಳಲ್ಲಿ, ಮನೋರಂಜನಾ ತೆರಿಗೆ ಅಧಿಕಾರಿ ಅಥವಾ ಈ ಅಧಿನಿಯಮದ 10ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯ ತಗಾದೆಯ ಮೇಲೆ ಆ ಆಧಿಕಾರಿಯ ಮುಂದೆ ಯಾವುದೇ ಮನೋರಂಜನೆಗೆ ಸಂಬಂಧಪಟ್ಟಂತೆ ಮಾಲೀಕನು ಇಟ್ಟ ಎಲ್ಲ ಪುಸ್ತಕಗಳು ಮತ್ತು ದಾಖಲೆಗಳನ್ನು ಹಾಜರುಪಡಿಸತಕ್ಕದ್ದು ಅತವಾ ಹಾಜರು ಪಡಿಸುವಂತೆ ಮಾಡತಕ್ಕದ್ದು ಮತ್ತು ಪರೀಕ್ಷೆ ಅಥವಾ ವಿಚಾರಣೆಯ ಉದ್ದೇಶಕ್ಕಾಗಿ ಅವುಗಳನ್ನು ಪರಿಶೀಲಿಸಲು ಮತ್ತು ಅವುಗಳ ಲೆಕ್ಕವನ್ನು ತೆಗೆದುಕೊಳ್ಳಲು ಅಥವಾ ಅವುಗಳನ್ನು ತೆಗೆದುಕೊಳ್ಳಲು ಅ ಅಧಿಕಾರಿಗೆ ಅವಕಾಶ ಕೊಡತಕ್ಕದ್ದು.

37. 30ನೇ ನಿಯಮದ ಮೇರೆಗೆ, ಕೊಟ್ಟ ಅನುಮತಿ ಪತ್ರವನ್ನು ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ತಗಾದೆಯ ಮೇಲೆ ಪರಿಶೀಲನಾ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕುದು.

## ಭಾಗ –V

ಸಂಸ್ಥೆಗೆ ಚಂದಾಗಳ ಅಥವಾ ವಂತಿಗೆಯ ಸಂದಾಯದ ಮೇಲೆ ಮನೋರಂಜನೆಗಳಿಗೆ ಪ್ರವೇಶಗಳ ಮೇಲೆ ತೆರಿಗೆಯ ಸಂದಾಯ.

38. (1) ಮನೋರಂಜನೆ ಅಥವಾ ಮನೋರಂಜನಾ ಸರಣಿಗಳಿಗೆ ಪ್ರವೇಶಕ್ಕಾಗಿನ ಸಂದಾಯವನ್ನು ಸಂಸ್ಥೆಗೆ ಚಂದಾ ಅಥವಾ ವಂತಿಗೆಯಾಗಿ ಒಂದೇ ಗಂಟಿನಲ್ಲಿ ಸಂದಾಯ ಮಾಡಿರುವಾಗ ಮತ್ತು ಅಂಥ ಸಂದಾಯವು, ಅದನ್ನು ಕೊಡುವ ವ್ಯಕ್ತಿಗಳನ್ನು ಸಂಸ್ಥೆಯಲ್ಲಿ ಇತರ ವಿಶೇಷ ಅಧಿಕಾರಗಳು ಮತ್ತು ಹಕ್ಕುಗಳನ್ನು ಸಹ ಚಲಾಯಿಸಲು ಸಾಧ್ಯಮಾಡಿಕೊಡುವಾಗ, ಮಾಲೀಕನು ಮನೋರಂಜನೆಗೆ ಅಥವಾ ಮನೋರಂಜನಾ ಸರಣಿಗಳಿಗೆ ಪ್ರವೇಶದ ಹಕ್ಕನ್ನು ಪ್ರತಿನಿಧಿಸುವುದೆಂದು ಮನೋರಂಜನಾ ಅಧಿಕಾರಿಗೆ ಕಂಡುಬರುವಂಥ ಮೊಬಲಗು ಮತ್ತು ಅಂಥ ಭಾಗದ ಮೇಲೆ ಸಂದಾಯಮಾಡಬೇಕಾದ ತೆರಿಗೆಯ ಮೊಬಲಗನ್ನು ನಿಗದಿಪಡಿಸುವಂತೆ, ಅವನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಮಾಲೀಕನು, ಅರ್ಜಿಯ ಜೊತೆಗೆ ಹಾಗೆ ಚಂದಾ ನೀಡುವ ಅಥವಾ ವಂತಿಗೆ ಕೊಡುವ ವ್ಯಕ್ತಿಗಳ ಸಂಖ್ಯೆ, ವಸೂಲಾದ ಮೊಬಲಗು, ಮನೋರಂಜನೆಗಳ ಸಂಖ್ಯೆ ಮತ್ತು ಸ್ವರೂಪ, ಹಾಗೆ ಚಂದಾ ನೀಡದೆ

ಇದ್ದವರ ಅಥವಾ ವಂತಿಗೆ ಕೊಡದಿದ್ದವರಿಗೆ ಪ್ರವೇಶಕ್ಕಾಗಿ ಸಂದಾಯ ಮಾಡಬೇಕಾದ ದರಗಳು ಮತ್ತು ಸಂಸ್ಥೆಗೆ ಚಂದಾ ನೀಡಲು ಅಥವಾ ವಂತಿಗೆಯನ್ನು ಕೊಡಲು ಅರ್ಹನಾದಂಥ ವ್ಯಕ್ತಿಗೆ ಸಂಬಂಧಿಸಿದಂತೆ ಇತರ ಹಕ್ಕುಗಳು, ವಿಶೇಷ ಅಧಿಕಾರಗಳು, ಇತ್ಯಾದಿಗಳ ಸ್ವರೂಪ ಮತ್ತು ಇವುಗಳ ವಿವರಗಳು ಮತ್ತು ಆ ಸಂಸ್ಥೆಯ ನಿಯಮಗಳು ಮತ್ತು ವಿನಿಮಯಗಳು ಯಾವುದಾದರೂ ಇದ್ದರೆ ಅವುಗಳ ಪ್ರತಿಯನ್ನು ಸಹ ಒದಗಿಸತಕ್ಕದ್ದು.

(3) ಮನೋರಂಜನಾ ತೆರಿಗೆ ಅಧಿಕಾರಿಯು, ಮನೋರಂಜನೆಗಳಿಗೆ ಅಥವಾ ಮನೋರಂಜನಾ ಸರಣಿಗಳಿಗೆ ಪ್ರವೇಶದ ಹಕ್ಕನ್ನು ಪ್ರತಿನಿಧಿಸುವುದೆಂದು ತನಗೆ ಕಂಡು ಬರುವಂಥ ಮೊಬಲಗು ಮತ್ತು ಅದರ ಮೇಲೆ ಸಂದಾಯ ಮಾಡಬೇಕಾದ ತೆರಿಗೆ ಮಬಲಗನ್ನು ನಿಗದಿಪಡಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಯೋಚಿಸಬಹುದಾದಂಥ ಭದ್ರತೆಯನ್ನು ಒದಗಿಸಲು ಮಾಲೀಕನನ್ನು ಅಗತ್ಯಪಡಿಸಬಹುದು.

(4) ಮನೋರಂಜನಾ ತೆರಿಗೆ ಅಧಿಕಾರಿಯು ನಿಗದಿಪಡಿಸಿದ ಮೊಬಲಗನ್ನು ಬಾಕಿಯಾಗಿರುವ ಮೊಬಲಗನ್ನು ನಿಗದಿಪಡಿಸುವ ಹಿಂದೆ ಹೇಳಿದ ಅಧಿಕಾರಿಯ ಆದೇಶವನ್ನು ಅವನು ಸ್ವೀಕರಿಸಿದ ದಿನಾಂಕದಿಂದ ಏಳು ದಿವಸಗಳೊಳಗಾಗಿ ಮಾಲೀಕನು ಸಂದಾಯ ಮಾಡತಕ್ಕದ್ದು.

## ಭಾಗ –V

### 4–ಕ ಪ್ರಕರಣದ ಮೇರೆಗೆ ತೆರಿಗೆ ಸಂದಾಯ

41–ಕ. (1) 4–ಕ ಪ್ರಕರಣದ ಮೇರೆಗೆ ಚಲನಚಿತ್ರ ಪ್ರದರ್ಶನಗಳ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಚಲನಚಿತ್ರ ಮಂದಿರದ ಪ್ರತಿಯೊಬ್ಬ ಮಾಲೀಕನು, ಚಲನಚಿತ್ರ ಪ್ರದರ್ಶಿಸಲು ಪ್ರಾರಂಭಿಸುವಂಥ ದಿನಾಂಕಕ್ಕಿಂತ ಏಳು ದಿವಸಗಳ ಮುಂಚೆ ಸಂಬಂಧಪಟ್ಟ ಪ್ರದೇಶದ ಮನೋರಂಜನಾ ತೆರಿಗೆ ಅಧಿಕಾರಿಗೆ ನಮೂನೆ–IVಖ ದಲ್ಲಿನ ಅನುಮತಿ ಪತ್ರಕ್ಕಾಗಿ ನಮೂನೆ–IVಕ ದಲ್ಲಿನ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಮನೋರಂಜನಾ ತೆರಿಗೆ ಅಧಿಕಾರಿಯು ನಮೂನೆ IV–ಖದಲ್ಲಿ ಕಾನೂನು ಸಮ್ಮತ ಅನುಮತಿ ಪತ್ರವನ್ನು ಅವನಿಗೆ ಕೊಟ್ಟ ಹೊರತು ಮತ್ತು ಅಲ್ಲಿಯವರೆಗೆ, ಯಾವನೇ ಮಲೀಕನು, 4ಕ ಪ್ರಕರಣ ಅನ್ವಯವಾಗುವಂಥ ಸ್ಥಳಗಳಲ್ಲಿ ಚಲನಚಿತ್ರ ಪ್ರದರ್ಶನಗಳನ್ನು ಪ್ರದರ್ಶಿಸತಕ್ಕದ್ದಲ್ಲ;

ಪರಂತು, 4–ಕ ಪ್ರಕರಣದ ಪ್ರಾರಂಭದ ದಿನಾಂಕಕ್ಕಿಂತ ಮುಂಚೆ ಅಂಥ ಸ್ಥಳಗಳಲ್ಲಿ ಈಗಾಗಲೇ ಚಲನಚಿತ್ರ ಪ್ರದರ್ಶನಗಳನ್ನು ಪ್ರದರ್ಶಿಸುತ್ತಿರುವ ಚಲನಚಿತ್ರ ಮಂದಿರಗಳ ಸಂದರ್ಭದಲ್ಲಿ, ಮಾಲೀಕನು ಸದರಿ ಪ್ರಕರಣದ ಪ್ರಾರಂಭದ ದಿನಾಂಕದಿಂದ ಏಳು ದಿವಸಗಳೊಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕುದು ಮತ್ತು ಮಾಲೀಕನು ಮನೋರಂಜನಾ ತೆರಿಗೆ ಅಧಿಕಾರಿಯು IVಖ ನಮೂನೆಯಲ್ಲಿ ಕಾನೂನು ಸಮ್ಮತ ಅನುಮತಿ ಪತ್ರವನ್ನು ಅವನಿಗೆ ಕೊಡುವವರೆಗೆ ಅಂಥ ಸ್ಥಳಗಳಲ್ಲಿ ಚಲನಚಿತ್ರ ಪ್ರದರ್ಶನಗಳನ್ನು ಪ್ರದರ್ಶಿಸುವುದನ್ನು ಮುಂದುವರಿಸಬಹುದು. ಮಾಲೀಕನು 4–ಕ ಪ್ರಕರಣವು ಪ್ರಾರಂಭವಾದಾಗಿನಿಂದ 4–ಕ ಪ್ರಕರಣಕ್ಕೆ ಅನುಸಾರವಾಗಿ ಅನುಮತಿ ಪತ್ರವನ್ನು ಕೊಡುವ ದಿನಾಂಕದವರೆಗಿನ ಅವಧಿಗಾಗಿ ಸದರಿ ಅನುಮತಿ ಪತ್ರವನ್ನು ಕೊಟ್ಟಾಗಿನಿಂದ ಮೂರು ದಿವಸಗಳೊಳಗಾಗಿ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು.

(2) ಹದಿನೈದು ಸಾವಿರಕ್ಕೆ ಮೀರಿದ ಆದರೆ ಇಪ್ಪತ್ತೈದು ಸಾವಿರವನ್ನು ಮೀರದ ಜನಸಂಖ್ಯೆಯನ್ನು ಹೊಂದಿರುವ ಪಟ್ಟಣಗಳಲ್ಲಿ ಇರುವ ಯಾವುದೇ ಚಲನಚಿತ್ರ ಮಂದಿರದ ಸಂದರ್ಭದಲ್ಲಿ, ಮಾಲೀಕನು, ಚಲನಚಿತ್ರ ಪ್ರದರ್ಶನಗಳನ್ನು ಪ್ರದರ್ಶಿಸಲು ಅವನು ಪ್ರಾರಂಭಿಸುವಂಥ ದಿನಾಂಕಕ್ಕೆ ಮುಂಚೆ ಏಳು ದಿವಸಗಳಿಗೆ ಕಡಿಮೆ ಇಲ್ಲದಂತೆ ಸಂಬಂಧಪಟ್ಟ ಪ್ರದೇಶದ ಮನೋರಂಜನಾ ತೆರಿಗೆ ಅಧಿಕಾರಿ IV–ಗ ನಮೂನೆಯಲ್ಲಿ 1964ರ ಕರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ, (1964ರ ಕರ್ನಾಟಕ ಅಧಿನಿಯಮದ 23)ದ

ಉಪಬಂಧಗಳ ಮೇರೆಗೆ ನಡೆಸಲು ಅನುಮತಿಸಲಾದಂಥ ಪ್ರತಿ ದಿವಸದ ಪ್ರದರ್ಶನಗಳ ಗರಿಷ್ಠ ಸಂಖ್ಯೆಯ ಆಧಾರದ ಮೇಲೆ ಮುಂಬರುವ ವರ್ಷದಲ್ಲಿ ತೆರಿಗೆಯನ್ನು ತಾನು ಸಂದಾಯ ಮಾಡುವುದಕ್ಕಾಗಿ ಬರಹದಲ್ಲಿ ಇಚ್ಛೆಯನ್ನು ಒದಗಿಸಬಹುದು. ಹಾಗೆ ಚಲಾಯಿಸಿದ ಇಚ್ಛೆಯು, ಮುಂದಿನ ಮಾರ್ಚ್ 31ರವರೆಗೆ ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಆ ವರ್ಷದ ಪ್ರಾರಂಭಕ್ಕೆ ಮುಂಚೆ ಒಂದು ವಾರವನ್ನು ಮೀರದಂತೆ ಮನೋರಂಜನಾ ತೆರಿಗೆ ಅಧಿಕಾರಿಗೆ ಬರಹದಲ್ಲಿ ಪತ್ರವನ್ನು ಕೊಡಮಾಡುವ ಮೂಲಕ ವರ್ಷದಿಂದ ವರ್ಷಕ್ಕೆ ನವೀಕರಿಸಬಹುದು.

(3) ಯಾವುದೇ ನಿರ್ದಿಷ್ಟ ವರ್ಷಕ್ಕೆ ಒಮ್ಮೆ ಚಲಾಯಿಸಿದ ಇಚ್ಛೆಯು ಆ ವರ್ಷಕ್ಕೆ ಮಾತ್ರ ಅಂತಿಮವಾಗಿರತಕ್ಕದ್ದು.

**ಟಿಪ್ಪಣಿ:–** ಅಸ್ತಿತ್ವದಲ್ಲಿರುವ ಚಲನಚಿತ್ರ ಮಂದಿರಗಳ ಸಂಬಂಧದಲ್ಲಿ 1982ರ ಜುಲೈ 1ರಿಂದ 1983ರ ಮಾರ್ಚ್ 31ರ ಅವಧಿಗೆ IV–ಗ ನಮೂನೆಯಲ್ಲಿನ ಇಚ್ಛೆಯನ್ನು ಕೊನೇ ಪಕ್ಷ 1982ರ ಜುಲೈ 5ನೇ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಚಲಾಯಿಸಬಹುದು.

41–ಖ, (1) 41–ಕ ನಿಯಮದ ಮೇರೆಗೆ ನಿರ್ದಿಷ್ಟ ಪಡಿಸಿದ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಆ ಪ್ರದೇಶದ ಮನೋರಂಜನಾ ತೆರಿಗೆ ಅಧಿಕಾರಿಯು, ಮಾಲೀಕನು ಒದಗಿಸಬೇಕಾದ ಮೊಬಲಗು ಮತ್ತು ಭದ್ರತೆಯ ಸ್ವರೂಪವನ್ನು ಮತ್ತು ಅಂಥ ಭದ್ರತೆಯನ್ನು ಯಾವ ಕಾಲದೊಳಗೆ ಒದಗಿಸಬೇಕೋ ಆ ಕಾಲವನ್ನು ನಿಗದಿಪಡಿಸತಕ್ಕದ್ದು. ಆ ಭದ್ರತೆಯನ್ನು ಒದಗಿಸಿದಾಗ, ಮನೋರಂಜನಾ ತೆರಿಗೆ ಅಧಿಕಾರಿಯು, ಮಾಲೀಕನಿಗೆ ನಮೂನೆ IV –ಖ ನಲ್ಲಿ ಚಲನಚಿತ್ರ ಮಂದಿರದ ಒಟ್ಟು ಸಂಗ್ರಹಣಾ ಸಾಮರ್ಥ್ಯ ಮತ್ತು ಅವನು ಪ್ರದರ್ಶನವನ್ನು ನಡೆಸುವ ಪ್ರತಿಯೊಂದು ಪ್ರದರ್ಶನಕ್ಕೆ ಮಾಲೀಕನು ಸಂದಾಯ ಮಾಡಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆ ಮತ್ತು ಚಲನಚಿತ್ರ ಪ್ರದರ್ಶನದ ಮೇಲಿನ ಹೆಚ್ಚಿನ ತೆರಿಗೆಯನ್ನು ಅದರಲ್ಲಿ ನಿರ್ದಿಷ್ಟಪಡಿಸಿ ಅನುಮತಿ ಪತ್ರವನ್ನು ಮಂಜೂರ್ಮಾಡತಕ್ಕದ್ದು.

(2) (1)ನೇ ಉಪನಿಯಮದ ಮೇರೆಗೆ ಮನೋರಂಜನಾ ತೆರಿಗೆ ಅಧಿಕಾರಿಯು ನಿಗದಿಪಡಿಸಿದ ಭದ್ರತಾ ಮೊಬಲಗು, ಒಂದು ಪಾಕ್ಷಿಕಕ್ಕಾಗಿ ಮಾಲೀಕನು ಸಂದಾಯ ಮಾಡಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆ (ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ ಹೆಚ್ಚಿನ ತೆರಿಗೆಯ) ಮೊಬಲಗಿಗೆ ಸಮನಾದ ಮೊಬಲಗು ಆಗಿರತಕ್ಕದ್ದು.

(3) (2)ನೇ ಉಪ–ನಿಯಮದ ಮೇರೆಗೆ ಒದಗಿಸಿದ ಭದ್ರತೆಯನ್ನು ಅನುಮತಿ ಪತ್ರ ಜಾರಿಯಲ್ಲಿರುವವರೆಗೆ ಪೂರ್ಣವಾಗಿ ಇಟ್ಟುಕೊಂಡು ಬರತಕ್ಕದ್ದು ಮತ್ತು ತೆರಿಗೆಗಾಗಿ ಖಜಾನೆಯ ರಸೀದಿಯೊಡನೆ ನಡುವಿನ ದಿನಾಂಕದಂದು ವಿವರ ಪಟ್ಟಿಕೆಗಳನ್ನು ಒದಗಿಸದಿದ್ದರೆ ಅಥವಾ ಯುಕ್ತ ವಿಚಾರಣೆಯ ತರುವಾಯ ವಿವರ ಪಟ್ಟಿಕೆಗಳು ಸರಿಯಾಗಿಲ್ಲವೆಂದು ಕಂಡುಬಂದರೆ ಅದು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು. ತಪ್ಪಿದ ಸಂದರ್ಭದಲ್ಲಿ ಪೂರ್ವ ಸೂಚನೆಯಿಲ್ಲದೆ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆ ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ ಹೆಚ್ಚಿನ ತೆರಿಗೆ ಬಗ್ಗೆ ಹೊಂದಾಣಿಕೆಗೂ ಸಹ ಬದ್ಧವಾಗಿರತಕ್ಕದ್ದು.

(4) ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆ, ಮತ್ತು ಚಲನಚಿತ್ರ ಪ್ರದರ್ಶನದ ಮೇಲಿನ ಹೆಚ್ಚಿನ ತೆರಿಗೆಗಾಗಿ ಭದ್ರತೆಯ ಮೊಬಲಗನ್ನು ಸರಿಹೊಂದಾಣಿಕೆ ಮಾಡಿದ್ದರೆ ಅಥವಾ ಅದನ್ನು ಮುಟ್ಟುಗೋಲು ಹಾಕಿಕೊಂಡಿದ್ದರೆ, ಮನೋರಂಜನಾ ತೆರಿಗೆ ಅಧಿಕಾರಿಯು (2)ನೇ ಉಪ–ನಿಯಮದ ಮೇರೆಗೆ ನಿಗದಿಪಡಿಸಲಾದ ಮೂಲ ಮೊಬಲಗಿಗಾಗಿ ಹೊಸ ಭದ್ರತೆಯನ್ನು ಒದಗಿಸುವಂತೆ ಮಾಲೀಕನನ್ನು ಅಗತ್ಯಪಡಿಸಬಹುದು ಮತ್ತು

ಅಂಥ ತಗಾದೆಯ ದಿನಾಂಕದಿಂದ ಹತ್ತು ದಿವಸಗಳ ಒಳಗಾಗಿ ಅಂಥ ಯಾವುದೇ ಭದ್ರತೆಯನ್ನು ಒದಗಿಸದಿದ್ದರೆ, ಮನೋರಂಜನಾ ತೆರಿಗೆ ಅಧಿಕಾರಿಯು ಮಾಲೀಕನಿಗೆ ಕೊಟ್ಟಿರುವ ಅನುಮತಿ ಪತ್ರವನ್ನು ರದ್ದುಪಡಿಸಬಹುದು.

41–ಗ, (1) ಮಾಲೀಕನು, ಸೋಮವಾರದಿಂದ ಭಾನುವಾರದವರೆಗಿನ ವಾರದಲ್ಲಿನ ಪ್ರತಿ ದಿನದಂದು (ಎರಡು ದಿನಗಳೂ ಒಳಗೊಂಡಂತೆ) ಪ್ರದರ್ಶನಗಳ ಸಂಖ್ಯೆ ಬಗ್ಗೆ ವಿವರಗಳನ್ನು ತೋರಿಸುವ ವಿವರ ಪಟ್ಟಿಯನ್ನು X–ಕ ನಮೂನೆಯಲ್ಲಿ ಕೊನೆಯ ಪಕ್ಷ ನಿಕಟೋತ್ತರದ ಮಂಗಳವಾರದಂದು ಆ ಪ್ರದೇಶದ ಮನೋರಂಜನಾ ತೆರಿಗೆ ಅಧಿಕಾರಿಗೆ ತಲುಪುವ ಹಾಗೆ ಒಪ್ಪಿಸತಕ್ಕದ್ದು. ಆ ವಿವರ ಪಟ್ಟಿಕೆಯು, 4–ಕ ವಿವರ ಪಟ್ಟಿಕೆಯು ಸಂಬಂಧಪಡುವಂಥ ವಾರಕ್ಕಾಗಿ ಸಂದಾಯ ಮಾಡಬೇಕಾದ 4–ಕ ಪ್ರಕರಣದ ಮೇರೆಗಿನ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆ ಮತ್ತು 4ನೇ ಪ್ರಕರಣದ ಮೇರೆಗಿನ ಚಲನಚಿತ್ರ ಪ್ರದರ್ಶನಗಳ ಹೆಚ್ಚಿನ ತೆರಿಗೆಯು ಹೊಂದಿರತಕ್ಕದ್ದು. ಪೂರ್ಣ ಮೊಬಲಗಿಗಾಗಿ ಖಜಾನೆ ರಸೀದಿ ಅಥವಾ ಮನೋರಂಜನಾ ತೆರಿಗೆ ಅಧಿಕಾರಿ ಹೆಸರಿಗೆ ಕ್ರಾಸ್ ಮಾಡಿದ ಚೆಕ್/ಡಿಮ್ಯಾಂಡ್ ಡ್ರಾಫ್ಟ್‌ನೊಂದಿಗೆ ಇರತಕ್ಕದ್ದು.

(2) (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ, ವಿವರಪಟ್ಟಿಕೆ ಮತ್ತು ಖಜಾನೆ ರಸೀತಿ ಅಥವಾ ಕ್ರಾಸ್‌ಮಾಡಿದ ಚೆಕ್ಕನ್ನು ಸ್ವೀಕರಿಸಿದ ಮೇಲೆ ಮನೋರಂಜನಾ ತೆರಿಗೆ ಅಧಿಕಾರಿಯು, ತಾನು ಅವಶ್ಯವೆಂದು ಪರ್ಯಾಲೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಮತ್ತು ವಿವರಪಟ್ಟಿಕೆಯು ಸರಿಯಾಗಿದೆ ಮತ್ತು ಪೂರ್ಣವಾಗಿದೆ ಎಂದು ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆಯ ಮತ್ತು ಚಲನಚಿತ್ರ ಪ್ರದರ್ಶನಗಳ ಹೆಚ್ಚಿನ ತೆರಿಗೆ ಸರಿಯಾದ ಮೊಬಲಗನ್ನು ಸಂದಾಯ ಮಾಡಲಾಗಿದೆ ಎಂದು ಸ್ವತಃ ತಾನು ಮನದಟ್ಟು ಮಾಡಿಕೊಂಡ ತರುವಾಯ ವಿವರ ಪಟ್ಟಿಕೆಯನ್ನು ಅಂಗೀಕರಿಸತಕ್ಕದ್ದು.

(3) ಗಡುವಿನ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಯಾವುದೇ ವಾರಕ್ಕೆ ಸಂಬಂಧಿಸಿದಂತೆ ಮಾಲೀಕನು ಯಾವುದೇ ವಿವರಪಟ್ಟಿಕೆಯನ್ನು ಸಲ್ಲಿಸದಿದ್ದರೆ, ಅಥವಾ ಸಲ್ಲಿಸಿದ ವಿವರಪಟ್ಟಿಕೆಯು ಮನೋರಂಜನಾ ತೆರಿಗೆ ಅಧಿಕಾರಿಗೆ ಸರಿಯಾಗಿಲ್ಲ ಅಥವಾ ಅಪೂರ್ಣವಾಗಿದೆ ಎಂದು ಕಂಡುಬಂದರೆ ಅಥವಾ ಸಂದಾಯ ಮಾಡಬೇಕಾದ ತೆರಿಗೆಯ ಪೂರ್ಣ ಮೊಬಲಗಿಗಾಗಿ ಖಜಾನೆ ರಸೀದಿ ಅಥವಾ ಕ್ರಾಸುಮಾಡದ ಚೆಕ್ಕು ಅದರ ಜೊತೆಗೆ ಇಲ್ಲದಿದ್ದರೆ ಮನೋರಂಜನಾ ತೆರಿಗೆ ಅಧಿಕಾರಿಯು, ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ವಿಚಾರಣೆಯನ್ನು ಮಾಡಿದ ತರುವಾಯ, 4–ಕ ಮತ್ತು 4ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯನ್ನು ತನ್ನ ಅತ್ಯುತ್ತಮ ವಿವೇಚನೆಯನುಸಾರ ನಿರ್ಧಾರಣೆ ಮಾಡಿ ಆದೇಶವನ್ನು ಮಾಡತಕ್ಕುದು. ಆ ತರುವಾಯ ಮನೋರಂಜನಾ ತೆರಿಗೆ ಅಧಿಕಾರಿಯು, ಸದರಿ ತೆರಿಗೆಯನ್ನು, ನೋಟೀಸಿನ ಜಾರಿಯ ದಿನಾಂಕದಿಂದ ಒಂದು ವಾರದೊಳಗಾಗಿ ಸಂದಾಯ ಮಾಡುವಂತೆ ಅವನನ್ನು ಕೋರುವ ನಮೂನೆ XIರಲ್ಲಿನ ಸದರಿ ನೋಟೀಸನ್ನು ಮಾಲೀಕನಿಗೆ ಜಾರಿ ಮಾಡತಕ್ಕದ್ದು. ಸದರಿ ತೆರಿಗೆಯನ್ನು, ನಿರ್ದಿಷ್ಟ ಪಡಿಸಿದ ಕಾಲದೊಳಗೆ ಸಂದಾಯ ಮಾಡದಿದ್ದರೆ, ಅಧಿನಿಯಮದ 9ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ವಸೂಲು ಮಾಡತಕ್ಕದ್ದು:

ಪರಂತು, ಈ ಉಪ–ನಿಯಮದ ಮೇರೆಗೆ ಕ್ರಮ ಕೈಗೊಳ್ಳುವುದಕ್ಕೆ ಮುಂಚೆ ಮಾಲೀಕನಿಗೆ, ಅವನು ಒಪ್ಪಿಸಿದ ಯಾವುದೇ ವಿವರಪಟ್ಟಿಕೆಯ ಸರಿತನ ಮತ್ತು ಪೂರ್ಣತೆಯನ್ನು ಅಥವಾ ಅವನಿಂದ ಯಾವುದೇ ವಿವರಪಟ್ಟಿಕೆ ಸಲ್ಲಬೇಕಾಗಿರಲಿಲ್ಲವೆಂಬುದನ್ನು ರುಜುವಾತುಪಡಿಸಲು, ಯುಕ್ತ ಅವಕಾಶವನ್ನು ಕೊಡತಕ್ಕದ್ದು:

ಮತ್ತು ಪರಂತು, ಸಂದಾಯವಾಗಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆ ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ ಹೆಚ್ಚಿನ ತೆರಿಗೆಯು (1)ನೇ ಉಪ–ನಿಯಮದ ಮೇರೆಗೆ ವಿವರಪಟ್ಟಿಕೆಯಲ್ಲಿ ತೋರಿಸಿದ ಮೊಬಲಗಿಗಿಂತ ಹೆಚ್ಚಿನ ಅಂಕಿಯಲ್ಲಿ ಬಾಕಿಯಾಗಿದೆಯೆಂದು ಮನೋರಂಜನಾ ತೆರಿಗೆ ಅಧಿಕಾರಿಯು ನಿರ್ಧರಿಸಿ

ಆದೇಶ ಹೊರಡಿಸಿದಾಗಲೆಲ್ಲಾ ಅವನು ಅದಕ್ಕಾಗಿನ ಕಾರಣಗಳನ್ನು ಬರಹದಲ್ಲಿ ದಾಖಲ್ಮಾಡತಕ್ಕದ್ದು ಮತ್ತು ಅಂಥ ಆದೇಶದ ಪ್ರತಿಯನ್ನು ಮಾಲೀಕನಿಗೆ ಒದಗಿಸತಕ್ಕದ್ದು.

## ಭಾಗ –VII

### ವಿನಾಯಿತಿಗಳು ಮತ್ತು ಮರುಪಾವತಿಗಳು

42. ಅಧಿನಿಯಮದ 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡುವುದರಿಂದ ವಿನಾಯಿತಿಯನ್ನು ಕ್ಲೇಮು ಮಾಡುವ ಯಾವನೇ ಮಾಲೀಕನು ಮನೋರಂಜನಾ ದಿನಾಂಕಕ್ಕೆ ಮುಂಚೆ ಏಳು ಸ್ಪಷ್ಟ ದಿವಸಗಳಿಗಿಂತ ಕಡಿಮೆ ಇಲ್ಲದಂತೆ, ಅಂಥ ವಿನಾಯಿತಿಗಾಗಿ, ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಸದರಿ ಪ್ರಕರಣದ ಮೇರೆಗೆ, ತನ್ನ ಅಧಿಕಾರಗಳನ್ನು ಯಾರಿಗೆ ಪ್ರತ್ಯಾಯೋಜಿಸಿದೆಯೋ ಆ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಹಿಂದೆ ಹೇಳಿದ ಅಧಿಕಾರಿಯು, ತನ್ನ ವಿವೇಚನೆಯಲ್ಲಿ ತಾನು ಅವಶ್ಯವೆಂದು ಪರ್ಯಾಲೋಚಿಸುವಂಥ ಭದ್ರತೆಯನ್ನು ಒದಗಿಸಲು ಮಾಲೀಕನನ್ನು ಅಗತ್ಯಪಡಿಸಬಹುದು:

ಪರಂತು, ಹಿಂದೆಹೇಳಿದ ಅಧಿಕಾರಿಯು ತನ್ನ ವಿವೇಚನೆಯಲ್ಲಿ ಅಲ್ಪಕಾಲದಲ್ಲಿ ಅಥವಾ ಮನೋರಂಜನೆಯನ್ನು ನಡೆಸಿದ ತರುವಾಯ ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸಬಹುದು ಅಥವಾ ಮನೋರಂಜನೆಯ ಸದರಿ ಉಪಪ್ರಕರಣದ (ಕ)ಯಿಂದ (ಜ)ವರೆಗಿನ ಒಂದು ಅಥವ ಹೆಚ್ಚಿನ ಖಂಡಗಳ ಅಡಿಯಲ್ಲಿ ಬರುವುದೆಂದು ಅವನಿಗೆ ಮನದಟ್ಟಾದರೆ ಅರ್ಜಿಯನ್ನು ಒಟ್ಟಾರೆ ಬಿಡಬಹುದು.

43. ಅಧಿನಿಯಮದ (7)ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೊಟ್ಟ ವಿನಾಯಿತಿಯು, ಸಂದರ್ಭಾನುಸಾರ ನಮೂನೆ VIII ಅಥವಾ IX ರಲ್ಲಿನ ಪ್ರಮಾಣಪತ್ರದ ರೂಪದಲ್ಲಿರತಕ್ಕುದು, ಮತ್ತು ಮಾಲೀಕನು ಅದರಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.

44. ಅಧಿನಿಯಮದ 7ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ವಿನಾಯತಿ ಪಡೆದಿರುವ ಮನೋರಂಜನೆಗಳಿಗೆ ಸಂಬಂಧಿಸಿದಂತೆ ಕೊಡಲು ಉದ್ದೇಶಿಸಿದ ಎಲ್ಲ ಟಿಕೆಟ್ಟುಗಳಿಗೆ ಸಂಬಂಧಪಟ್ಟ ಮನೋರಂಜನಾ ತೆರಿಗೆ ಅಧಿಕಾರಿಯ ಅಧಿಕೃತ ಮೊಹರನ್ನು ಹಾಕಿಸತಕ್ಕದ್ದು.

45. ನಮೂನೆ VIII ಅಥವಾ IXರಲ್ಲಿನ ವಿನಾಯಿತಿಯ ಪ್ರಮಾಣ ಪತ್ರವನ್ನು ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ತಗಾದೆಯ ಮೇಲೆ ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸತಕ್ಕದ್ದು.

45.ಕ (1) 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 7ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕ) ಖಂಡದ (iii) ನೇ ಉಪ–ಖಂಡದ ಉದ್ದೇಶಗಳಿಗಾಗಿ, ಫಿಲಂ ಕ್ಲಬ್ಬು ಅಥವಾ ಫಿಲಂ ಸೊಸೈಟಿಯು ಮನ್ನಣೆಗೆ ಮತ್ತು ತತ್ಪರಿಣಾಮವಾಗಿ ಮನೋರಂಜನಾ ತೆರಿಗೆ ಸಂದಾಯದಿಂದ ವಿನಾಯಿತಿ ಪಡೆಯುವುದಕ್ಕೆ ಅರ್ಹವಾಗಲು ಈ ಕೆಳಕಂಡ ಷರತ್ತುಗಳನ್ನು ಪೂರೈಸತಕ್ಕದ್ದು:–

(i) ಅದು, 1960ರ ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮದ ಮೇರೆಗೆ ನೋಂದಾಯಿತವಾಗಿರತಕ್ಕದ್ದು.

(ii) ಅದು, ಭಾರತದ ಚಲನಚಿತ್ರ ಸೊಸೈಟಿಗಳ; ಸಂಯುಕ್ತ ಸಂಘಕ್ಕೆ ಸಂಲಗ್ನಗೊಂಡಿರತಕ್ಕದ್ದು, ಅಥವಾ (ಮೇಲೆ (1)ನೇ ಖಂಡದಲ್ಲಿ ಅಗತ್ಯಪಡಿಸಿರುವಂತೆ) ಅದರ ನೋಂದಣಿಯ ದಿನಾಂಕದಿಂದ ಒಂದು ವರ್ಷವನ್ನು ಪೂರ್ಣಗೊಳಿಸಿದಂಥ ಫಿಲಂ ಕ್ಲಬ್ಬು ಅಥವ ಫಿಲಂ

ಸೊಸೈಟಿಯ, ಸಂದರ್ಭದಲ್ಲಿ, ಅದು ಕರ್ನಾಟಕ ರಾಜ್ಯ ಚಲನಚಿತ್ರ, ಸೊಸೈಟಿಗಳ ಅಭಿವೃದ್ಧಿ ಪರಿಷತ್‌ಗೆ ಸಂಲಗ್ನಗೊಂಡಿರತಕ್ಕದ್ದು.

(iii) ಅದು, ಅದರ ಸದಸ್ಯರನ್ನು ನೇರವಾಗಿ ಚಲನಚಿತ್ರ ಕಲೆ ಅಥವಾ ಕುಶಲಕಲೆ ಅಥವಾ ಚಲನಚಿತ್ರ ತಾಂತ್ರಿಕತೆಯ ಕ್ಷೇತ್ರದಲ್ಲಿ ತೊಡಗಿಸುವ ಉದ್ದೇಶಕ್ಕಾಗಿ ಮಾತ್ರವೇ ರಚಿಸಿದ್ದಾಗಿರತಕ್ಕದ್ದು ಮತ್ತು ಅದರ ಸದಸ್ಯರು ಸದರಿ ಕ್ಷೇತ್ರಗಳಲ್ಲಿ ಕಲಾ ಹವ್ಯಾಸಿಗಳು ಅಥವಾ ತರಬೇತಿ ಕೊಡುವವರು ಅಥವಾ ತರಬೇತಿ ಪಡೆಯುವವರಾಗಿರತಕ್ಕದ್ದು.

(iv) ಫಿಲಂ ಕ್ಲಬ್ಬು/ಸೊಸೈಟಿಯ ನಿಯಮಗಳು ಮತ್ತು ವಿನಿಯಮಗಳು, ಅಂಥ ಫಿಲಂ ಕ್ಲಬ್ಬು/ಸೊಸೈಟಿಯು ನಡೆಸುವ ಮನೋರಂಜನೆಗಳಿಗೆ (i) ಫಿಲಂ ಕ್ಲಬ್ಬು/ಸೊಸೈಟಿಯ ನಿಜವಾದ ಸದಸ್ಯರು ಮತ್ತು (ii)ಅಧಿನಿಯಮದ 10(1)ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಗಳನ್ನು ಹೊರತುಪಡಿಸಿ, ಮಕ್ಕಳು ಅಥವಾ ಯಾವನೇ ವ್ಯಕ್ತಿಯ ಪ್ರವೇಶವನ್ನು ಹೊರತುಪಡಿಸುವುದಕ್ಕಾಗಿ ಉಪ–ಬಂಧಿಸತಕ್ಕದ್ದು.

(v) ಫಿಲಂ ಕ್ಲಬ್ಬು/ಸೊಸೈಟಿಯು, ಭಾರತದ ಚಲನಚಿತ್ರ ಸೊಸೈಟಿಗಳ ಸಂಯುಕ್ತ ಸಂಘವು ಅನುಮೋದಿಸಿದವುಗಳನ್ನಲ್ಲದೆ ಹೊರತುಪಡಿಸಿ ಬೇರೆ ಯಾವುದೇ ಚಲನಚಿತ್ರವನ್ನು ಪ್ರದರ್ಶಿಸತಕ್ಕದ್ದಲ್ಲ.

(vi) ಫಿಲಂ ಕ್ಲಬ್ಬು/ಸೊಸೈಟಿಯು, ವಾರ್ಷಿಕ ಸದಸ್ಯತ್ವ ಫೀಜನ್ನು ಹೊರುತುಪಡಿಸಿ ಮನೋರಂಜನೆಗೆ ಅದರ ಸದಸ್ಯರ ಪ್ರವೇಶಕ್ಕಾಗಿ ಬೇರೆ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ.

(vii) ಫಿಲಂ ಕ್ಲಬ್ಬು/ಸೊಸೈಟಿಯು, ಕಮೀಷನರಿಗೆ ಅದರ ಲೆಕ್ಕದ ವರ್ಷದ ಮುಕ್ತಾಯದಿಂದ ಮೂರು ತಿಂಗಳುಗಳ ಅವಧಿಯೊಳಗೆ ಅಥವಾ ಈ ಬಗ್ಗೆ ಕಮೀಷನರನು ಮಂಜೂರು ಮಾಡಬಹುದಾದಂಥ ಇನ್ನೂ ಹೆಚ್ಚಿನ ಕಾಲದೊಳಗೆ ಅದರ ಲೆಕ್ಕಪತ್ರಗಳ ಪರಿಶೋಧಿತ ವಿವರಣೆ ಪತ್ರದೊಂದಿಗೆ ಅದರ ವಾರ್ಷಿಕ ವರದಿಯನ್ನು ಒಪ್ಪಿಸತಕ್ಕದ್ದು.

(viii) ಇದು, 7 (1) (ಕ) ನೇ ಪ್ರಕರಣದ ಮೇರೆಗೆ ಮನ್ನಣೆಗಾಗಿ ಅರ್ಜಿಯನ್ನು ಮಾಡಿಕೊಳ್ಳುವುದಕ್ಕೆ ಮುಂಚೆ 200 ರೂಪಾಯಿಗಳ ಕನಿಷ್ಟ ಫೀಜಿನ ಜೊತೆಗೆ ಪ್ರತಿ 200 ಅಥವಾ ಕಡಿಮೆ ಸದಸ್ಯರಿಗಾಗಿ ವಾರ್ಷಿಕವಾಗಿ 200 ರೂಪಾಯಿಗಳ ಮನ್ನಣಾ ಫೀಜನ್ನು ಸಂದಾಯ ಮಾಡಿರತಕ್ಕದ್ದು ಮತ್ತು 200ಕ್ಕಿಂತಲೂ ಹೆಚ್ಚಿನ ಸದಸ್ಯತ್ವ ಇರುವಲ್ಲಿ, 200 ಸದಸ್ಯತ್ವಕ್ಕಿಂತ ಹೆಚ್ಚಿನ ಪ್ರತಿಯೊಬ್ಬ ಸದಸ್ಯನಿಗಾಗಿ ವಾರ್ಷಿಕವಾಗಿ ತಲಾ ಒಂದು ರೂಪಾಯಿಯನ್ನು ಸಂದಾಯ ಮಾಡತಕ್ಕದ್ದು ಮತ್ತು ಅದಕ್ಕೆ ಮಂಜೂರ್ಮಾಡಿದ ಮನ್ನಣಾ ಪತ್ರವನ್ನು ನವೀಕರಿಸುವುದಕ್ಕಾಗಿ ಅರ್ಜಿಯನ್ನು ಹಾಕಿಕೊಳ್ಳುವ ಕಾಲದಲ್ಲಿ, ಆ ತರುವಾಯ ವಾರ್ಷಿಕವಾಗಿ ಅದೇ ದರಗಳಲ್ಲಿ ಫೀಜಿನ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

(ix) ಫಿಲಂ ಕ್ಲಬ್ಬು/ಸೊಸೈಟಿಯು, ಪ್ರದರ್ಶಿಸಬೇಕಾದ ಚಲನಚಿತ್ರದ ಹೆಸರು, ಭಾಷೆ ಮತ್ತು ನಡೆಸಬೇಕಾದ ಪ್ರದರ್ಶನಗಳ ದಿನಾಂಕ/ದಿನಾಂಕಗಳು ಮತ್ತು ಕಾಲ/ಕಾಲಗಳನ್ನು ಮೂರು ದಿವಸಗಳ ಮಂಚಿತವಾಗಿ:

(ಕ) ಸರ್ಕಾರಕ್ಕೆ

(ಖ) ವಾಣಿಜ್ಯ ತೆರಿಗೆಗಳ ಕಮೀಷನರ್‌ಗೆ ಮತ್ತು

(ಗ) ಸಂಬಂಧಿಸಿದ ಮನೋರಂಜನಾ ತೆರಿಗೆ ಅಧಿಕಾರಿಗೆ,–

ಇವುಗಳನ್ನು ಒದಗಿಸತಕ್ಕದ್ದು.

(x) ಫಿಲಂ ಕ್ಲಬ್ಬು/ಫಲಂ ಸೊಸೈಟಿಯು, ಮನ್ನಣೆಯನ್ನು ಮಂಜೂರ್ಮಾಡುವ ಕಾಲದಲ್ಲಿ ಕಮೀಷನರನು ವಿಧಿಸಬಹುದಾದಂಥ ಇತರ ಷರತ್ತುಗಳನ್ನು ಈಡೇರಿಸತಕ್ಕದ್ದು.

(2) (i) ಮನ್ನಣಾ ಪ್ರಮಾಣಪತ್ರವು ಅದನ್ನು ನೀಡಿದ ದಿನಾಂಕದಿಂದ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು.

(ii) ಮನ್ನಣಾ ಪ್ರಮಾಣಪತ್ರದ ನವೀಕರಣಕ್ಕಾಗಿನ ಅರ್ಜಿಯನ್ನು, ಫಿಲಂ ಕ್ಲಬ್ಬು/ಸೊಸೈಟಿಯು, ಸರ್ಕಾರ ಮತ್ತು ಸಂಬಂಧಪಟ್ಟ ಮನೋರಂಜನಾ ತೆರಿಗೆ ಅಧಿಕಾರಿಗೆ ತಿಳಿಸಿ ಅದರ ಮುಕ್ತಾಯದ ಅವಧಿಗೆ ಕನಿಷ್ಟ ಒಂದು ತಿಂಗಳ ಮುಂಚೆ ಕಮೀಷನರನಿಗೆ ಮಾಡಿಕೊಳ್ಳತಕ್ಕದ್ದು. ಕಮೀಷನರನು, ಆದಾಗ್ಯೂ ತಾನು ಸೂಕ್ತವೆಂದು ಯೋಚಿಸಬಹುದಾದಂಥ, ಅದರ ಮುಕ್ತಾಯದ ದಿನಾಂಕಕ್ಕೆ ಮುಂಚೆ ಅಂಥ ಅಲ್ಪಾವಧಿಯೊಳಗೆ ಅಂಥ ಪ್ರಮಾಣಪತ್ರದ ನವೀಕರಣಕ್ಕಾಗಿ ಅರ್ಜಿಯನ್ನು ಪುರಸ್ಕರಿಸಬಹುದು.

(iii) ಮನ್ನಣಾ ಪ್ರಮಾಣಪತ್ರದಲ್ಲಿ ವಿಧಿಸಿರುವ ಯಾವುದೇ ಷರತ್ತನ್ನು ಪಾಲಿಸಲು ತಪ್ಪುವುದು, ಫಿಲಂ ಕ್ಲಬ್ಬು/ಸೊಸೈಟಿಗೆ ಮಂಜೂರ್ಮಾಡಿದ ಅಂಥ ಪ್ರಮಾಣಪತ್ರವು ರದ್ದಿಯಾತಿಗೆ ಗುರಿಯಾಗತಕ್ಕದ್ದು.

(vi) ಈ ನಿಯಮದಲ್ಲಿ ಅಂಥ ಫಿಲಂ ಕ್ಲಬ್ಬು/ಸೊಸೈಟಿಯು ವಿಧಿಸಿದ ಯಾವುದೇ ಷರತ್ತಿನ ಉಲ್ಲಂಘನೆಗಾಗಿ ಆ ಫಿಲಂ ಕ್ಲಬ್ಬು/ಸೊಸೈಟಿಯು ಜವಾಬ್ದಾರಿಯಾಗಿದ್ದರೆ 500 ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು. ಪರಂತು, ಅಂಥ ಜುಲ್ಮಾನೆಯನ್ನು ಅಂಥ ಕ್ರಮದ ವಿರುದ್ಧ ಆ ಫಿಲಂ ಕ್ಲಬ್ಬು/ಸೊಸೈಟಿಯು ಮಾಡಿಕೊಳ್ಳಲು ಇಚ್ಛಿಸುವಂಥ ಯಾವುದೇ ಮನವಿಯನ್ನು ಸಲ್ಲಿಸಲು ಅವಕಾಶವನ್ನು ಕೊಟ್ಟ ಹೊರತು, ಕಮೀಷನರನಾಗಲಿ ಅಥವಾ ಸರ್ಕಾರವಾಗಲಿ ಅಂಥ ಜುಲ್ಮಾನೆಯನ್ನು ವಿಧಿಸತಕ್ಕದ್ದಲ್ಲ.

(3) ಈ ನಿಯಮದ (1)ನೇ ಉಪ–ನಿಯಮದ (viii)ನೇ ಖಂಡದಲ್ಲಿ ಉಲ್ಲೇಖಿಸಿದ ಮನ್ನಾ ಫೀಜನ್ನು ಲೆಕ್ಕಶೀರ್ಷಿಕೆ 045–ಜಿಟಿಡಿ–V ಇತರ ಬಾಬುಗಳು–0450406 (ಮನ್ನಣಾ ಫೀಜು) ಲೆಕ್ಕದ ಶೀರ್ಷಿಕೆಗೆ ಜಮಾ ಮಾಡುವುದರ ಮೂಲಕ ಸರ್ಕಾರಿ ಖಜಾನೆಗೆ ಸಂದಾಯ ಮಾಡತಕ್ಕದ್ದು ಮತ್ತು ಅದಕ್ಕಾಗಿ ಚಲನ್‌ನನ್ನು ಕಮೀಷನರನಿಗೆ ಮಾಡಿಕೊಳ್ಳಬೇಕಾದ ಮನ್ನಣಾ ಪತ್ರದ ನವೀಕರಣದ ಮಂಜೂರಾತಿಗಾಗಿನ ಅರ್ಜಿಗೆ ಲಗತ್ತಿಸತಕ್ಕದ್ದು.

(4) ಸಂದಾಯ ಮಾಡಿದ ಮನ್ನಣಾ ಫೀಜನ್ನು ಮನ್ನಣಾ ಪ್ರಮಾಣಪತ್ರದ ನವೀಕರಣದ ಮಂಜೂರಾತಿಗಾಗಿ ಫಿಲಂ ಕ್ಲಬ್ಬು/ಸೊಸೈಟಿಯ ಅರ್ಜಿಯನ್ನು ತಿರಸ್ಕರಿಸಿದರೆ ಮರುಪಾವತಿ ಮಾಡತಕ್ಕದ್ದು. ಈ ನಿಯಮದ (2)ನೇ ಉಪ–ನಿಯಮದ (iii)ನೇ ಖಂಡದಲ್ಲಿ ನಮೂದಿಸಿದ ಕಾರಣಗಳಿಗಾಗಿ ಮನ್ನಣಾ ಪ್ರಮಾಣ ಪತ್ರದ ರದ್ದತಿಯ ಸಂದರ್ಭದಲ್ಲಿ ಯಾವುದೇ ಮರುಪಾವತಿಗೆ ಅವಕಾಶವಿರತಕ್ಕದ್ದಲ್ಲ.

(5) ರಾಜ್ಯಸರ್ಕಾರದಿಂದ, 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 10(1)ನೇ ಪ್ರಕರಣದ ಮೇರೆಗೆ ಅಧಿಕೃತನಾದ ಯಾವನೇ ಅಧಿಕಾರಿಯು, ಈ ನಿಯಮದ (1)ನೇ ಉಪ–ನಿಯಮದ ಮೇರೆಗೆ ನಿಯಮಿಸಿದ ಷರತ್ತುಗಳನ್ನು ಪಾಲಿಸಲಾಗುತ್ತಿದೆಯೇ ಹೇಗೆ ಎಂಬುದನ್ನು ತಾನೇ ತಾನು ಮನದಟ್ಟು

ಮಾಡಿಕೊಳ್ಳುವ ಉದ್ದೇಶಕ್ಕಾಗಿ ಯಾವುದೇ ಫಿಲಂ ಕ್ಲಬ್ಬು/ಸೊಸೈಟಿಯು ನಡೆಸುತ್ತಿರುವ ಚಲನಚಿತ್ರ ಪ್ರದರ್ಶನವು ನಡೆಯುತ್ತಿರುವ ಮನೋರಂಜನಾ ಸ್ಥಳಕ್ಕೆ ಪ್ರವೇಶಿಸಬಹುದು ಮತ್ತು ಈ ಸಂಬಂಧದಲ್ಲಿ ತಾನು ಸೂಕ್ತವೆಂದು ಭಾವಿಸುವಂತಹ ವಿಚಾರಣೆಗಳನ್ನು ಮಾಡಬಹುದು.

(6) ಫಿಲಂ ಕ್ಲಬ್ಬು/ಸೊಸೈಟಿಗೆ ಮನೋರಂಜನಾ ತೆರಿಗೆಯ ಸಂದಾಯದಿಂದ ವಿನಾಯತಿಯ ರಿಯಾಯತಿಯು, ವಾಣಿಜ್ಯ ತೆರಿಗೆಗಳ ಕಮೀಷನರನು ಕೊಟ್ಟ ಮನ್ನಣಾ ಪ್ರಮಾಣಪತ್ರದಲ್ಲಿ ಒಳಗೊಂಡ ಅವಧಿಯಲ್ಲಿ ಮಾತ್ರ ಲಭ್ಯವಿರುವುದು.

46. (1) ಅಧಿನಿಯಮದ 8ನೇ ಪ್ರಕರಣದ 1ನೇ ಉಪಪ್ರಕರಣದ ಮೇರೆಗೆ ಮರು ಪಾವತಿಯನ್ನು ಕ್ಲೇಮು ಮಾಡಲು ಇಚ್ಛಿಸುವ ಯಾವನೇ ವ್ಯಕ್ತಿಯು, ಮನೋರಂಜನೆಯು ಪ್ರಾರಂಭವಾಗುವುದಕ್ಕಿಂತ ಮುಂಚೆ ಮನೋರಂಜನಾ ತೆರಿಗೆ ಅಧಿಕಾರಿಗೆ ತನ್ನ ಉದ್ದೇಶದ ಸೂಚನೆಯನ್ನು ಕೊಡತಕ್ಕದ್ದು ಮತ್ತು ಮನೋರಂಜನೆಯ ದಿನಾಂಕದಿಂದ ಹದಿನೈದು ದಿವಸಗಳೊಳಗೆ ಮರು ಪಾವತಿಗಾಗಿ ಅರ್ಜಿಯನ್ನು ಸದರಿ ಪ್ರಕರಣದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ತನ್ನ ಅಧಿಕಾರಗಳನ್ನು ಸರ್ಕಾರವು ಪ್ರತ್ಯಾಯೋಜಿಸಬಹುದಾದ ಅಧಿಕಾರಿಗೆ ಸಲ್ಲಿಸತಕ್ಕದ್ದು. ಅಂಥ ಅವಧಿಯೊಳಗೆ ಸಲ್ಲಿಸಿಲ್ಲದಂಥ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

(1–ಕ) ಈ ಅಧಿನಿಯಮದ 8ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮರುಪಾವತಿಯನ್ನು ಕ್ಲೇಮು ಮಾಡಲು ಇಚ್ಛಿಸುವ ಯಾವನೇ ವ್ಯಕ್ತಿಯು, ಮನೋರಂಜನಾ ದಿನಾಂಕದಿಂದ ಒಂದು ವಾರದೊಳಗೆ ಸದರಿ ಪ್ರಕರಣದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ತನ್ನ ಅಧಿಕಾರಗಳನ್ನು ಸರ್ಕಾರವು ಪ್ರತ್ಯಾಯೋಜಿಸಬಹುದಾದ ಅಧಿಕಾರಿಗೆ ಮರು ಪಾವತಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆ ಅರ್ಜಿಯೊಂದಿಗೆ ವಿದ್ಯುಚ್ಛಕ್ತಿ ವಿಫಲತೆಗೆ ಸಂಬಂಧಿಸಿದಂತೆ ಅಧಿಕಾರ ವ್ಯಾಪ್ತಿಯುಳ್ಳ ಪೊಲೀಸ್ ಠಾಣಾಧಿಕಾರಿಯು ನೀಡಿದ ಪ್ರಮಾಣಪತ್ರವನ್ನು ಮತ್ತು ಪೂರ್ಣಗೊಳಿಸಲಾಗದಂಥ ಪ್ರದರ್ಶನಕ್ಕೆ ಪ್ರವೇಶ ಪಡೆದಿರುವ ವ್ಯಕ್ತಿಗಳಿಗೆ, ಪ್ರವೇಶಕ್ಕಾಗಿನ ಸಂದಾಯಗಳನ್ನು ಹಿಂತಿರುಗಿಸಿರುವುದಕ್ಕೆ ಅಧಿಕಾರ ವ್ಯಾಪ್ತಿಯುಳ್ಳ ಪೊಲೀಸ್ ಠಾಣೆಯ ಠಾಣಾಧಿಕಾರಿಯು ನೀಡಿದ ಪ್ರಮಾಣಪತ್ರ ಇರತಕ್ಕದ್ದು.

(2) ಹಿಂದೆ ಹೇಳಿದ ಅಧಿಕಾರಿಯು, ತಾನು ಸೂಕ್ತವೆಂದು ಯೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ, ಮರುಪಾವತಿಯನ್ನು ಕ್ಲೇಮು ಮಾಡುವ ಅರ್ಜಿಯ ಬಗ್ಗೆ ಆದೇಶಗಳನ್ನು ಮಾಡತಕ್ಕದ್ದು.

## ಭಾಗ –VIII

### ಸಂಕೀರ್ಣ

47. ಈ ಅಧಿನಿಯಮದ ಮೇರೆಗೆ ತೆರಿಗೆಗೆ ಗುರಿಯಾಗುವಂಥ ಮನೋರಂಜನೆಯ ಉದ್ದೇಶಗಳಿಗಾಗಿ ಚಿತ್ರಮಂದಿರ, ಸಭಾಂಗಣ ಅಥವಾ ಇತರ ಆವರಣಗಳನ್ನು ಬಾಡಿಗೆಗೆ ಕೊಡುವ ಪ್ರತಿಯೊಬ್ಬ ಒಡೆಯ ಅಥವಾ ಅವುಗಳ ಪ್ರಭಾರದಲ್ಲಿರುವ ಇತರ ವ್ಯಕ್ತಿಯು, ಅಂಥ ಮನೋರಂಜನೆಯ ಬಗ್ಗೆ ನೋಟೀಸನ್ನು, ಮನೋರಂಜನಾ ತೆರಿಗೆ ಅಧಿಕಾರಿಗೆ ಗ್ರಾಮದ ಮುಖ್ಯಸ್ಥ ಹಾಗೂ ಆ ಸ್ಥಳದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೂ ಸಹ ಅದನ್ನು ನೀಡತಕ್ಕದ್ದು. ಅಂಥ ನೋಟೀಸನ್ನು ಮನೋರಂಜನೆಗೆ ಕೊನೇ ಪಕ್ಷ ಮೂರು ದಿವಸಗಳ ಮುಂಚೆ ಕೊಡತಕ್ಕದ್ದು ಮತ್ತು ಅದು ಮನೋರಂಜನೆಯ ಸ್ವರೂಪ, ಮಾಲೀಕನ ಹೆಸರು ಮತ್ತು ವಿಳಾಸ ಮತ್ತು ಮನೋರಂಜನೆಯು ನಡೆಯುವಂಥ ದಿನಾಂಕ ಮತ್ತು ಅಂಥ ಕಾಲವನ್ನು ನಿರ್ದಿಷ್ಟಪಡಿಸತಕ್ಕದ್ದು.

47–ಕ:–ಈ ನಿಯಮಗಳ ಮೇರೆಗೆ ಭದ್ರತೆಯನ್ನು ಒದಗಿಸಲು ಅಗತ್ಯಪಡಿಸಲಾದ ವ್ಯಕ್ತಿಯು, ಪ್ರಾಧಿಕಾರಿಯು ನಿರ್ದೇಶಿಸಬಹುದಾದಂತೆ ವೈಯಕ್ತಿಕ ಭದ್ರತೆ ಅಥವಾ ಸ್ವತ್ತಿನ ಭದ್ರತೆ ಅಥವಾ ಬ್ಯಾಂಕು ಖಾತರಿಯನ್ನು ಒದಗಿಸತಕ್ಕದ್ದು. ಭದ್ರತಾ ಬಂಧ ಪತ್ರವು ನಮೂನೆ XIII ರಲ್ಲಿರತಕ್ಕದ್ದು.

## ಭಾಗ–IX

48. (1) (ಕ) ಈ ನಿಯಮಗಳ ಮೇರೆಗೆ ಮನೋರಂಜನಾ ತೆರಿಗೆ ಅಧಿಕಾರಿಯು ಮಾಡಿದ ಆದೇಶದಿಂದ ಭಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ, ಸಂಬಂಧಪಟ್ಟ ಪ್ರದೇಶದ ವಾಣಿಜ್ಯ ತೆರಿಗೆ ಅಧಿಕಾರಿಗೆ ಅಪೀಲನ್ನು ಮಾಡಿಕೊಳ್ಳಬಹುದು.

(ಖ) (ಕ) ಖಂಡದ ಮೇರೆಗೆ ಅಥವಾ ಈ ನಿಯಮಗಳ 42ನೇ ನಿಯಮದ ಮೇರೆಗೆ ವಾಣಿಜ್ಯ ತೆರಿಗೆ ಅಧಿಕಾರಿಯು ಮಾಡಿದ ಆದೇಶದಿಂದ ಭಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶವನ್ನು ಮಾಡಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ, ಸಂಬಂಧಪಟ್ಟ ವಿಭಾಗದ ಡೆಪ್ಯೂಟಿಕಮೀಷನರನಿಗೆ ಅಪೀಲನ್ನು ಮಾಡಿಕೊಳ್ಳಬಹುದು.

(2) (1)ನೇ ಉಪ–ನಿಯಮದ ಮೇರೆಗೆ ಮನವಿ ಮೇಲೆ ಮಾಡಿದ ಪ್ರತಿಯೊಂದು ಆದೇಶವು, 49ನೇ ನಿಯಮದ ಮೇರೆಗೆ ಉಪಬಂಧಗಳಿಗೊಳಪಟ್ಟು ಅಂತಿಮವಾಗಿರತಕ್ಕದ್ದು.

49. ಕಮೀಷನರನು___

(1) 5 ವರ್ಷಗಳೊಳಗೆ ಯಾವುದೇ ಕಾಲದಲ್ಲಿ ತಾನಾಗಿಯೇ; ಅಥವಾ

(2) 48ನೇ ನಿಯಮದ (1)ನೇ ಉಪ–ನಿಯಮದ (ಖ) ಖಂಡದ ಮೇರೆಗಿನ ಅಪೀಲಿನಲ್ಲಿ, ಡೆಪ್ಯುಟಿ ಕಮೀಷನರನು, ಮಾಡಿದ ಯಾವುದೇ ಆದೇಶಕ್ಕೆ ಸಂಬಂಧಿಸಿದಂತೆ ಅಂಥ ಆದೇಶವನ್ನು ತಿಳಿಸಿದ ದಿನಾಂಕದಿಂದ ಅರವತ್ತು ದಿವಸಗಳೊಳಗೆ ಮಾಡಿಕೊಂಡ ಅರ್ಜಿಯ ಮೇಲೆ;

ಅಂಥ, ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಅಥವಾ ಅಂಥ ವ್ಯವಹರಣೆಗಳ ಕ್ರಮಬದ್ಧತೆ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅಧಿನಿಯಮದ ಅಥವಾ ಈ ನಿಯಮಗಳ ಮೇರೆಗೆ ಯಾವನೇ ಅಧಿಕಾರಿಯು ಮಾಡಿದ ಯಾವುದೇ ಆದೇಶಕ್ಕೆ ಅಥವಾ ದಾಖಲು ಮಾಡಿರುವ ಯಾವುದೇ ವ್ಯವಹರಣೆಗಳಿಗೆ ಸಂಬಂಧಪಟ್ಟ ಯಾವುದೇ ದಾಖಲೆಯನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ತಾನು ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು:

ಪರಂತು, ಯಾವುದೇ ಆದೇಶವನ್ನು ಭಾಧಿತನಾದ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಡದೆಯೆ ಯಾವನೇ ವ್ಯಕ್ತಿಯ ವಿರುದ್ಧ ಮಾಡತಕ್ಕದ್ದಲ್ಲ.

50. ಸಂಬಂಧಪಟ್ಟ ವಿಭಾಗದ, ಡೆಪ್ಯುಟಿ ಕಮೀಷನರನು ಮತ್ತು ಕಮೀಷನರನು ಸರ್ಕಾರದ ನಿಯಂತ್ರಣಕ್ಕೊಳಪಟ್ಟು, ಅಧಿನಿಯಮದ ಆಡಳಿತವನ್ನು ಅಧೀಕ್ಷಣೆ ಮಾಡಲು ಮತ್ತು ಅದರ ಮೇರೆಗಿನ ತೆರಿಗೆಯನ್ನು ಸಂಗ್ರಹಿಸುವ ಅಧಿಕಾರವನ್ನು ಹೊಂದಿರತಕ್ಕುದು.

51. (1)ಅಧಿನಿಯಮದ 10ನೇ ಪ್ರಕರಣದ ಮೇರೆಗೆ ಮನೋರಂಜನೆಯು ಯಾವುದೇ ಸ್ಥಳವನ್ನು ಪ್ರವೇಶಿಸಲು ಅಧಿಕೃತನಾದ ಯಾವನೇ ಅಧಿಕಾರಿ ಅಥವಾ ಅಧಿನಿಯಮ ಅಥವಾ ಯಾವುದೇ ಇತರ ಕಾನೂನಿನ ಮೂಲಕ ಅಥವಾ ಮೇರೆಗೆ ಅವನಿಗೆ ವಿಧಿಸಿದ ಕರ್ತವ್ಯಕ್ಕೆ ಅನುಸರಣೆಯಲ್ಲಿ ಯಾವುದೇ ಮನೋರಂಜನೆಯ ಸ್ಥಳವನ್ನು ಪ್ರವೇಶಿಸುವ ಯಾವನೇ ಇತರ ಅಧಿಕಾರಿಯು, ಪ್ರವೇಶಿಸುವುದಕ್ಕೆ ಮುಂಚೆ ಸಂದಾಯವಿಲ್ಲದೆ

ಪ್ರವೇಶಿಸಲು ಅವನನ್ನು ಹಕ್ಕುಳ್ಳವನನ್ನಾಗಿಸುವ ಪಾಸನ್ನು ಮಾಲೀಕನಿಂದ ಕೇಳತಕ್ಕದ್ದು. ಮಾಲೀಕನು ತಗಾದೆಯ ಮೇಲೆ ಅಂಥ ಅಧಿಕಾರಿಗೆ ಸಂದಾಯವಿಲ್ಲದೆ ಪ್ರವೇಶಿಸಲು ಅವನನ್ನು ಹಕ್ಕುಳ್ಳವನನ್ನಾಗಿಸುವ ಮತ್ತು "ಉಚಿತ" ಎಂದು ಸ್ಪಷ್ಟವಾಗಿ ಗುರುತು ಮಾಡಿರುವ ಪಾಸನ್ನು ಒದಗಿಸತಕ್ಕದ್ದು.

ಪರಂತು, ತಗಾದೆಯನ್ನು ಪಾಲಿಸಲು ಮಾಲೀಕನ ವಿಫಲತೆಯು, ಯಾವುದೇ ಸಂದಾಯವನ್ನು ಮಾಡದೆ ಮನೋರಂಜನೆಯ ಸ್ಥಳವನ್ನು ಪ್ರವೇಶಿಸಲು ಮತ್ತು ಅವನ ಕರ್ತವ್ಯವನ್ನು ನಿರ್ವಹಿಸಲು ಅಂಥ ಅಧಿಕಾರಿಯನ್ನು ಪ್ರತಿಬಂಧಿಸತಕ್ಕದ್ದಲ್ಲ.

52. ಸಂಬಂಧಪಟ್ಟ ಪ್ರದೇಶದ ಮನರಂಜನಾ ತೆರಿಗೆ ಅಧಿಕಾರಿಯು ಅಥವಾ 10ನೇ ಪ್ರಕರಣದ ಮೇರೆಗೆ ಅಧಿಕೃತನಾದ, ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಯ ದರ್ಜೆಗಿಂತ ಕಡಿಮೆಯಿಲ್ಲದ ಅಧಿಕಾರಿಯು ಈ ಅಧಿನಿಯಮದ 13ನೇ ಪ್ರಕರಣದ ಉದ್ದೇಶಗಳಿಗಾಗಿ ನಿಯಮಿಸಿದ ಪ್ರಾಧಿಕಾರಿಯಾಗಿರತಕ್ಕದ್ದು.

53. ....... ***

54. ಈ ಕೆಳಕಂಡ ನಿಯಮಗಳಲ್ಲಿ ಯಾವುದೇ ನಿಯಮವನ್ನು ಅಥವಾ IV ಅಥವಾ VI ನೇ (ಅಥವಾ VI –ಖ) ನಮೂನೆಯಲ್ಲಿರುವ ಅನುಮತಿ ಪತ್ರದ ಅಥವಾ VIII ಅಥವಾ IX ನೇ ನಮೂನೆಯಲ್ಲಿನ ಯಾವುದೇ ಪ್ರಮಾಣ ಪತ್ರದ ಯಾವುದೇ ಷರತ್ತನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು, ಮ್ಯಾಜಿಸ್ಟ್ರೇಟನಿಂದ ಅಪರಾಧ ನಿರ್ಣಯದ ಮೇಲೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದು.

ನಿಯಮಗಳು (...) 20, 21, 23, 24, 25, 26, 27, 28, 29 (29–ಕ, 29–ಖ, 29ಗ 29–ಘ, 29–ಜ, 31, 33, 34, 35, 36, 37, 38, 41 (41–ಕ, 41–ಖ, 41–ಗ) 45 ಮತ್ತು 47.

55. [.......]

56. ಈ ನಿಯಮಗಳ ಮೇರೆಗೆ, ಚೆಕ್ಕಿನ ಮೂಲಕ ಸಂದಾಯ ಮಾಡಿರುವಲ್ಲಿ, ಆ ಚೆಕ್ಕನ್ನು ಕರ್ನಾಟಕ ಆರ್ಥಿಕ ಸಂಹಿತೆಯ ಮೇರೆಗೆ, ಸರ್ಕಾರಿ ಖಜಾನೆ ಮೂಲಕ ಸ್ವೀಕರಿಸಬಹುದಾಗಿರತಕ್ಕದ್ದು,

57. ಈ ನಿಯಮಗಳ ಮೇರೆಗೆ ಕೊಟ್ಟ ಅನುಮತಿ ಪತ್ರ ಅಥವಾ ಪ್ರಮಾಣ ಪತ್ರವು ಕಳೆದುಹೋಗಿರುವಲ್ಲಿ ಅಥವಾ ಆಕಸ್ಮಿಕವಾಗಿ ನಾಶವಾಗಿರುವಲ್ಲಿ ಸಂದರ್ಭಾನುಸಾರ, ಅನುಮತಿ ಪತ್ರ ಅಥವಾ ಪ್ರಮಾಣ ಪತ್ರದ ದ್ವಿಪ್ರತಿಯನ್ನು ಒಂದು ರೂಪಾಯಿ ಫೀಜನ್ನು ಸಂದಾಯ ಮಾಡಿದ ಮೇಲೆ ಕೊಡಬಹುದು ಮತ್ತು ಅದಕ್ಕೆ "ದ್ವಿಪ್ರತಿ" ಎಂದು ಮೇಲ್ಬರಹ ಮಾಡತಕ್ಕದ್ದು.

58. [.......]

[ಅನುಸೂಚಿ...]

[ನಮೂನೆ I...]

**(ನಮೂನೆ II)**

**(21, 27 ಮತ್ತು 29–ಜ ನಿಯಮಗಳನ್ನು ನೋಡಿ)**

| | |
|---|---|
| ಸಂಖ್ಯೆ : (ಮುದ್ರಿತ ಕ್ರಮಸಂಖ್ಯೆ)<br>ಚಿತ್ರಮಂದಿರದ ಹೆಸರು:<br>ಬೆಳಗಿನ / ಮಧ್ಯಾಹ್ನದ / ಮ್ಯಾಟನಿ / ಮೊದಲ / ಎರಡನೇ ಪ್ರದರ್ಶನ | ದಿನಾಂಕಿತ ಸಹಿಯೊಂದಿಗೆ ಮನೋರಂಜನಾ ತೆರಿಗೆ<br>ಅಧಿಕಾರಿಯ ಮೊಹರು<br>ಚಿತ್ರದ ಹೆಸರು<br>ಭಾಷೆ |

**ದೈನಂದಿನ ಸಂಗ್ರಹಣಾ ವರದಿ**

| ವರ್ಗ | ಪ್ರವೇಶದ ದರ | ಮಾರಾಟದ ಟಿಕೆಟುಗಳು | | | ಒಟ್ಟು | ನೀಡಿರುವ ಗೌರವಾರ್ಥ ಟಿಕೆಟುಗಳು | | | ಒಟ್ಟು | ಮಾರಾಟದ ಟಿಕೆಟುಗಳ ಮೇಲೆ ಮನೋರಂಜನಾ ತೆರಿಗೆ |
|---|---|---|---|---|---|---|---|---|---|---|
| | | ಯಿಂದ | ಕ್ರಮಸಂಖ್ಯೆ | ವರೆಗೆ | | ಯಿಂದ | ಕ್ರಮಸಂಖ್ಯೆ | ವರೆಗೆ | | |
| 1 | 2 | 3 | | 4 | 5 | 6 | | 7 | 8 | 9 |

**(ನಮೂನೆ–IIಕ)**

| ಚಿತ್ರ ಮಂದಿರದ ಹೆಸರು________________ ಸಂಕೇತ________________ | | | | | | ಕೋರಿಕೆ ಪತ್ರದ ದಿನಾಂಕ ವರ್ಗ | | | |
|---|---|---|---|---|---|---|---|---|---|
| ದಿನ | ಪ್ರದರ್ಶನ | ಟಿಕೆಟ್ಟುಗಳ ಸಂಖ್ಯೆ | | | | ಗೌರವಾರ್ಥ ಪಾಸುಗಳು | | ಟಿಕೆಟ್ಟುಗಳ ಒಟ್ಟು ಸಂಖ್ಯೆ | ಪೆಟ್ಟಿಗೆಗಳ ಒಟ್ಟು ಸಂಖ್ಯೆ |
| | | 1ನೇ ಕಟ್ಟು | | 1ನೇ ಕಟ್ಟು | | | | | |
| | | ಯಿಂದ–––ವರೆಗೆ | | ಯಿಂದ–––ವರೆಗೆ | | ಯಿಂದ–––ವರೆಗೆ | | | |
| 1 | 2 | 3 | 4 | 5 | 6 | 7 | 8 | 9 | 10 |

| ಟಿಕೆಟ್‌ಗಳ ಮೇಲಿನ ಮನೋರಂಜನಾ ತೆರಿಗೆ | ಟಿಕೆಟುಗಳ ಮೇಲಿನ ಅಧಿಭಾರ | ಪಾಸುಗಳ ಮೇಲಿನ ಮನೋರಂಜನಾ ತೆರಿಗೆ | ಪಾಸುಗಳ ಮೇಲಿನ ಅಧಿಭಾರ | ಒಟ್ಟು ಮನರಂಜನಾ ತೆರಿಗೆ | ಒಟ್ಟು ಅಧಿಭಾರ | ಷರಾ |
|---|---|---|---|---|---|---|
| 11 | 12 | 13 | 14 | 15 | 16 | 17 |

**(ನಮೂನೆ–II--ಖ)**

**(29–ಜ ನಿಯಮವನ್ನು ನೋಡಿ)**

ಚಿತ್ರ ಮಂದಿರದ ಹೆಸರು:

..............................................ಯಿಂದ.........................................ವರೆಗಿನ ವಾರದ ವಿವರ ಪಟ್ಟಿಕೆ

| ವರ್ಗ | ಪ್ರವೇಶ ದರ | ಮಾರಾಟವಾದ ಟಿಕೆಟುಗಳು ಕ್ರಮಸಂಖ್ಯೆ ಯಿಂದ------ವರೆಗೆ | | ಒಟ್ಟು | ನೀಡಿರುವ ಗೌರವಾರ್ಥ ಟಿಕೆಟುಗಳು ಕ್ರಮಸಂಖ್ಯೆ ಯಿಂದ------ವರೆಗೆ | | ಒಟ್ಟು |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |

| ಮಾರಾಟ ಮಾಡಿದ ಟಿಕೆಟುಗಳ ಮೇಲಿನ ಮನೋರಂಜನಾ ತೆರಿಗೆ | ಮಾರಾಟ ಮಾಡಿದ ಟಿಕೆಟುಗಳ ಮೇಲಿನ ಅಧಿಭಾರ | ನೀಡಿರುವ ಗೌರವಾರ್ಥ ಟಿಕೆಟುಗಳ ಮೇಲಿನ ಮನೋರಂಜನಾ ತೆರಿಗೆ | ನೀಡಿರುವ ಗೌರವಾರ್ಥ ಟಿಕೆಟುಗಳ ಮೇಲಿನ ಅಧಿಭಾರ | ಒಟ್ಟು ಮನೋರಂಜನಾ ತೆರಿಗೆ | ಒಟ್ಟ ಅಧಿಭಾರ | ವಾರದ ಅವಧಿಯಲ್ಲಿ ನಡೆಸಿದ ಪ್ರದರ್ಶನಗಳ ಸಂಖ್ಯೆ | ಷರಾ |
|---|---|---|---|---|---|---|---|
| 9 | 10 | 11 | 12 | 13 | 14 | 15 | 16 |

ಸಾರಾಂಶ :

1. ಒಟ್ಟು ಮನೋರಂಜನಾ ತೆರಿಗೆ ರೂ.
2. ಒಟ್ಟು ಅಧಿಭಾರ ರೂ.
3. ಪ್ರತಿ ಪ್ರದರ್ಶನಕ್ಕೆ____ರೂಪಾಯಿಗಳ ದರದಲ್ಲಿ ಚಲನಚಿತ್ರ ಪ್ರದರ್ಶನದ ಮೇಲಿನ ತೆರಿಗೆ ರೂ.

ಒಟ್ಟು ರೂ.

ಸಂದಾಯದ ವಿವರಗಳು

ಸ್ಥಳ :

ದಿನಾಂಕ

ಮಾಲೀಕನ ರುಜು.

:

**ನಮೂನೆ–III**

**(17ನೇ ನಿಯಮವನ್ನು ನೋಡಿ)**

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 5ನೇ ಪ್ರಕರಣದ ಮೇರೆಗಿನ ವಿವರ ಪಟ್ಟಿಕೆಗಳ ಆಧಾರದ ಮೇಲೆ ಚಲನಚಿತ್ರ ಪ್ರದರ್ಶನದ ಮೇಲಿನ ಮನೋರಂಜನಾ ತೆರಿಗೆ ಮತ್ತು ಅಧಿಭಾರ (ಹಾಗೂ ಹೆಚ್ಚಿನ ತೆರಿಗೆ)ಯನ್ನು ಸಂದಾಯ ಮಾಡಲು ಅನುಮತಿಗಾಗಿ__________ಅವರಿಗೆ ಅರ್ಜಿ.

ಅರ್ಜಿದಾರನ (ಮಾಲೀಕನ) ಹೆಸರು

ನಿವಾಸದ ವಿಳಾಸ

ಮನೋರಂಜನೆಗಳ ಬಗೆ

ಅವುಗಳನ್ನು ನಡೆಸುವ ಸ್ಥಳ

ವಾರದಲ್ಲಿ ಎಷ್ಟು ಬಾರಿ ಮತ್ತು ಯಾವ ದಿವಸಗಳಂದು

ಪ್ರವೇಶ ದರಗಳು

ಮಾನ್ಯರೇ,

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 5ನೇ ಪ್ರಕರಣದ ಮೇರೆಗಿನ ವಿವರಪಟ್ಟಿಕೆಗಳ ಆಧಾರದ ಮೇಲೆ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಅನುಮತಿಯನ್ನು ನೀಡಲು ನಾನು ಅರ್ಜಿ ಸಲ್ಲಿಸುತ್ತಿದ್ದೇನೆ.

ನನ್ನಿಂದ ಸಲ್ಲಬೇಕಾದ ಮನೋರಂಜನಾ ತೆರಿಗೆ ಮತ್ತು ಅಧಿಭಾರದ ಸಂದಾಯಕ್ಕಾಗಿ ತಗಾದೆ ಮಾಡಿರುವ ಭದ್ರತೆಯನ್ನು ಒದಗಿಸಲು ಮತ್ತು ಗೊತ್ತುಪಡಿಸಬಹುದಾದಂಥ ನಮೂನೆಗಳಲ್ಲಿ ಮತ್ತು ಕಾಲದಲ್ಲಿ ಟಿಕೆಟ್ಟು ಮೌಲ್ಯದ ಪ್ರತಿವರ್ಗದ ಮೇರೆಗೆ ಮನೋರಂಜನೆಗಳ ಪ್ರವೇಶಕ್ಕಾಗಿನ ಸಂದಾಯಗಳ ನಿಜವಾದ ವಿವರಪಟಿಕೆಗಳನ್ನು ಒದಗಿಸಲು ನಾನು ಒಪ್ಪಿಕೊಳ್ಳುತ್ತೇನೆ.

ಮುಂದಿನ ಮನೋರಂಜನೆಯು ಪ್ರಾರಂಭವಾಗುವುದಕ್ಕೆ ಮುಂಚೆ ವಿವರಪಟ್ಟಿಕೆಗಳ ಜೊತೆಗೆ ಪ್ರತಿ ಮನೋರಂಜನೆಗೆ ಸಂಬಂಧಿಸಿದಂತೆ, ಸಲ್ಲಬೇಕಾದ ತೆರಿಗೆಗಳನ್ನು ಸಂದಾಯ ಮಾಡಲು ನಾನು ಒಪ್ಪಿಕೊಳ್ಳುತ್ತೇನೆ ಮತ್ತು ಸಲ್ಲಬೇಕೆಂದು ಕಂಡುಬಂದ ಯಾವುದೇ ಹೆಚ್ಚಳವನ್ನು ಅದನ್ನು ತಗಾದೆ ಮಾಡಿದ ತರುವಾಯ ಏಳು ದಿನಗಳೊಳಗೆ ಸಂದಾಯ ಮಾಡುತ್ತೇನೆ.

ಅನುಮತಿ ಪತ್ರದ ಎಲ್ಲ ಷರತ್ತುಗಳನ್ನು ನಾನು ಒಪ್ಪಿದ್ದೇನೆ ಮತ್ತು ಅವುಗಳನ್ನು ಅನುಸರಿಸುತ್ತೇನೆ.

ನಿಜವಾದ ವಿವರಪಟ್ಟಿಕೆಗಳನ್ನು ಸಲ್ಲಿಸಲು ನಾನು ತಪ್ಪಿದರೆ, ಒದಗಿಸಿರುವ ಭದ್ರತೆಯನ್ನು ಮುಟ್ಟುಗೋಲು ಮಾಡಿಕೊಳ್ಳಲು ಇದರ ಜೊತೆಗೆ ನನ್ನಿಂದ ಬಾಕಿಯಾಗುವ ತೆರಿಗೆಗಳನ್ನು ವಸೂಲು ಮಾಡಲು ಮನೋರಂಜನಾ ತೆರಿಗೆ ಅಧಿಕಾರಿಗೆ ಅವಕಾಶವಿರತಕ್ಕದ್ದು.

ಸ್ಥಳ : ತಮ್ಮ ವಿಶ್ವಾಸಿ,

ದಿನಾಂಕ :

## ನಮೂನೆ–IV

**(18, 21 ಮತ್ತು 23ನೇ ನಿಯಮಗಳನ್ನು ನೋಡಿ)**

ವಿವರಪಟ್ಟಿಕೆಗಳ ಆಧಾರದ ಮೇಲೆ ಮನೋರಂಜನಾ ತೆರಿಗೆ ಮತ್ತು ಅಧಿಭಾರವನ್ನು ಸಂದಾಯ ಮಾಡಲು ಅನುಮತಿ ಪತ್ರ.

ಈ ಕೆಳಕಂಡ ಮನೋರಂಜನೆಗೆ ಸಂಬಂಧಿಸಿದಂತೆ ದಿನಾಕ...........................ದಂದಿನ ..........................ಮಾಲೀಕನ ಅರ್ಜಿ...............................ಮಾಲೀಕನು ಒಪ್ಪಿಸಬೇಕಾದ ವಿವರಪಟ್ಟಿಕೆಗಳ ಆಧಾರದ ಮೇಲೆ ಮೇಲ್ಕಂಡ ಮನೋರಂಜನೆಗಳ ಮೇಲೆ ಸಲ್ಲಬೇಕಾದ (ಚಲನಚಿತ್ರ ಪ್ರದರ್ಶನಗಳ ಮೇಲಿನ ಮನೋರಂಜನಾ ತೆರಿಗೆ ಮತ್ತು ಅಧಿಭಾರ ಮತ್ತು ಹೆಚ್ಚಿನ ತೆರಿಗೆಯನ್ನು) ಸಮುದಾಯ ಮಾಡಲು...............................ಮಾಲೀಕನಿಗೆ ಅನುಮತಿ ನೀಡಲಾಗಿದೆ. ಈ ಅನುಮತಿಯು, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿದೆ.

(1) ಈ ಅನುಮತಿಯನ್ನು ಯಾವುದೇ ಕಾರಣವನ್ನು ಕೊಡದೆ ಯಾವುದೇ ಕಾಲದಲ್ಲಿ ರದ್ದುಪಡಿಸಬಹುದು, ಮತ್ತು ಅಂಥ ರದ್ದಿಯಾತಿಯಿಂದಾಗಿ ಮಾಲೀಕನಿಗೆ ಉಂಟಾದ ಯಾವುದೇ ನಷ್ಟದ ಬಗ್ಗೆ ಸರ್ಕಾರವು ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

(2) ಇದು, 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ ಉಪಬಂಧಗಳು, ಅದರ ಮೇರೆಗೆ ರಚಿಸಿರುವ ನಿಯಮಗಳು ಮತ್ತು ಈ ಅನುಮತಿಪತ್ರದ ಷರತ್ತುಗಳು ಮತ್ತು ಕಾಲಕಾಲಕ್ಕೆ ನಿರ್ದಿಷ್ಟಗೊಳಿಸಬಹುದಾದಂಥ ಷರತ್ತುಗಳನ್ನು ಪಾಲಿಸುವುದಕ್ಕೆ ಒಳಪಟ್ಟಿದೆ.

(3) 1959ರ ಕರ್ನಾಟಕ ಮನೋರಂಜನಾ ತೆರಿಗೆ ನಿಯಮಗಳಿಗೆ ಅನುಬಂಧಿಸಿದ ನಮೂನೆ IIರಲ್ಲಿ ಸರಿಯಾದ ಪೂರ್ಣವಾದ ಲೆಕ್ಕವನ್ನು ಇಡತಕ್ಕದ್ದು, ಮತ್ತು ಅದು, ನೀಡಿರುವ ಗೌರವಾರ್ಥ ಟಿಕೆಟುಗಳು, ಅಂಥ ಟಿಕೆಟುಗಳಿಗಾಗಿ ಸ್ವೀಕರಿಸಿದ ಮೊಬಲಗುಗಳು ವರ್ಗದ ಮತ್ತು ಅದರ ಮೇಲೆ ಸಲ್ಲಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ಮನೋರಂಜನಾ ತೆರಿಗೆ ಮತ್ತು ಅಧಿಭಾರ ಮತ್ತು ಹೆಚ್ಚಿನ ತೆರಿಗೆಯನ್ನು ಒಳಗೊಂಡು ಅಂಥ ಪ್ರದರ್ಶನಕ್ಕಾಗಿ ಕೊಟ್ಟ ಮತ್ತು ಮಾರಾಟ ಮಾಡಿದ ಪ್ರತಿಯೊಂದು ವರ್ಗದ ಟಿಕೇಟುಗಳ ಸಂಖ್ಯೆಯನ್ನು ತೋರಿಸತಕ್ಕದ್ದು. ಈ ಲೆಕ್ಕ ಮತ್ತು ದಾಸ್ತಾನಿನಲ್ಲಿ ಉಳಿದಿರುವ ಟಿಕೇಟುಗಳನ್ನು, ಸರಿ ನೋಡುವುದಕ್ಕಾಗಿ ಕೇಳಿದಾಗ ಸಂಬಂಧಪಟ್ಟ ಇತರ ದಾಖಲೆಗಳೊಂದಿಗೆ ಪರಿಶೀಲನಾಧಿಕಾರಿಗಳಿಗೆ ತೋರಿಸತಕ್ಕದ್ದು. ಈ ಅನುಮತಿ ಪತ್ರದಲ್ಲಿ ಒಳಪಡುವ ಯಾವುದೇ ಪ್ರದರ್ಶನವು ನಡೆಯುವಾಗ ಪ್ರೇಕ್ಷಕರ ಅಥವಾ ಶ್ರೋತೃಗಳ ಸಂಖ್ಯೆಯನ್ನು ಎಣಿಸುವ ಮೂಲಕ ದಾಖಲೆಗಳ ಸರಿತನವನ್ನು ಪರೀಕ್ಷಿಸಲು ಪರಿಶೀಲನಾಧಿಕಾರಿಗಳಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.

(4) 1959ರ ಕರ್ನಾಟಕ ಮನೋರಂಜನಾ ತೆರಿಗೆ ನಿಯಮಗಳಿಗೆ ಅನುಬಂಧಿಸಿದ ನಮೂನೆ–IIರಲ್ಲಿ ನಿಯಮಿಸಿದ ವಿವರಗಳಿಗೆ ಸಂಬಂಧಿಸಿದಂತೆ, ಸೋಮವಾರದಿಂದ ಭಾನುವಾರದವರೆಗಿನ (ಎರಡೂ ದಿನಗಳೂ ಸೇರಿದಂತೆ) ವಾರದ ಅವಧಿಯಲ್ಲಿನ ಎಲ್ಲ ಪ್ರದರ್ಶನಗಳಿಗಾಗಿ ಜುಮ್ಲಾವನ್ನು ಕೊಡುವ ವಿವರಪಟ್ಟಿಕೆಯನ್ನು ಕೊನೇಪಕ್ಷ ಮುಂದಿನ ಕೆಲಸ ದಿನದ ನಿಕಟೋತ್ತರದ ಮಂಗಳವಾರದಂದು ಮನೋರಂಜನಾ ತೆರಿಗೆ ಅಧಿಕಾರಿಯ ಕಛೇರಿಗೆ ತಲುಪುವ ಹಾಗೆ ಕಳುಹಿಸತಕ್ಕದ್ದು. ಚಲನಚಿತ್ರ ಪ್ರದರ್ಶನಗಳ ಮೇಲಿನ ಮನೋರಂಜನಾ ತೆರಿಗೆ ಮತ್ತು ಅಧಿಭಾರ ಮತ್ತು ಹೆಚ್ಚಿನ ತೆರಿಗೆಯನ್ನು ಸಂದಾಯ ಮಾಡಿದ ಮೊಬಲಗಿಗಾಗಿ ಖಜಾನೆ ರಸೀದಿ ಅಥವಾ

ಬಾಕಿಯಾಗುವ ತೆರಿಗೆಯ ಮೊಬಲಗಿಗಾಗಿ ಮನೋರಂಜನಾ ತೆರಿಗೆ ಅಧಿಕಾರಿಯ ಹೆಸರಿಗೆ ಬರೆದ ಕ್ರಾಸ್ ಮಾಡಿದ ಚೆಕ್ಕನ್ನು ವಿವರಪಟ್ಟಿಕೆಗೆ ಲಗತ್ತಿಸತಕ್ಕದ್ದು.

(5) ವಿವರಪಟ್ಟಿಕೆಯೊಂದಿಗೆ ಯಾವ ಮೊಬಲಗಿನ ಸಂದಾಯಕ್ಕಾಗಿ ರಸೀದಿಯನ್ನು ಕಳಿಸಲಾಗಿದೆಯೋ ಆ ಮೊಬಲಗಿಗೆ ಮೇಲ್ಪಟ್ಟು ಬಾಕಿಯಿರುವುದಾಗಿ ಕಂಡುಬಂದ ಚಲನಚಿತ್ರ ಪ್ರದರ್ಶನಗಳ ಮೇಲಿನ ಯಾವುದೇ ಮನೋರಂಜನಾ ತೆರಿಗೆ ಮತ್ತು ಅಧಿಭಾರ ಮತ್ತು ಹೆಚ್ಚಿನ ತೆರಿಗೆಯನ್ನು ಅದನ್ನು ವಿಧಿಸಿದ ದಿನಾಂಕದಿಂದ ಏಳು ದಿನಗಳೊಳಗೆ ಸಂದಾಯ ಮಾಡತಕ್ಕದ್ದು.

(ಮನೋರಂಜನಾ ತೆರಿಗೆ ಅಧಿಕಾರಿಯ ರುಜು.)

**ನಮೂನೆ IVಕ–(20ನೇ ನಿಯಮಗಳನ್ನು ನೋಡಿ)**

| **ಪಕ್ಕಪ್ರತಿ** | **ದ್ವಿಪ್ರತಿ** | **ಮೂಲಪ್ರತಿ** |
|---|---|---|
| ಚಿತ್ರಮಂದಿರದ ಹೆಸರು ಮತ್ತು ಸ್ಥಳ ಸರಣಿಗಳ ಸಂಖ್ಯೆ_______ಟಿಕೆಟು ಸಂಖ್ಯೆ_______ವರ್ಗ_______ | ಚಿತ್ರಮಂದಿರದ ಹೆಸರು ಮತ್ತು ಸ್ಥಳ ಸರಣಿಗಳ ಮತ್ತು ಟಿಕೆಟು ಸಂಖ್ಯೆ ವರ್ಗ_______ | ಚಿತ್ರಮಂದಿರದ ಹೆಸರು ಮತ್ತು ಸ್ಥಳ ಸರಣಿಗಳ ಮತ್ತು ಟಿಕೆಟು ಸಂಖ್ಯೆ ವರ್ಗ_______ |
| ಪ್ರದರ್ಶನದ ದಿನಾಂಕ_______ | ಪ್ರದರ್ಶನದ ದಿನಾಂಕ: | ಪ್ರದರ್ಶನದ ದಿನಾಂಕ: |
| ಬೆಳಗಿನ: ಮಧ್ಯಾಹ್ನ: ಮ್ಯಾಟಿನಿ: | ಬೆಳಗಿನ: ಮಧ್ಯಾಹ್ನ: ಮ್ಯಾಟಿನಿ: | ಬೆಳಗಿನ: ಮಧ್ಯಾಹ್ನ: ಮ್ಯಾಟಿನಿ: |
| ಮೊದಲನೇ: ಎರಡನೇ ಪ್ರದರ್ಶನ | ಮೊದಲನೇ: ಎರಡನೇ ಪ್ರದರ್ಶನ | ಮೊದಲನೇ: ಎರಡನೇ ಪ್ರದರ್ಶನ |
| | ಪ್ರವೇಶ ದರ ರೂ. | ಪ್ರವೇಶ ದರ ರೂ. |
| | ಮನೋರಂಜನಾ ತೆರಿಗೆ ರೂ. | ಮನೋರಂಜನಾ ತೆರಿಗೆ ರೂ. |
| | ಅಧಿಭಾರ <u>ರೂ.</u> | ಅಧಿಭಾರ <u>ರೂ.</u> |
| | ಪ್ರವೇಶ ಬೆಲೆ ರೂ. | ಪ್ರವೇಶ ಬೆಲೆ ರೂ. |
| ಮಾಲೀಕನ ರುಜು | ಮಾಲೀಕನ ರುಜು | ಮಾಲೀಕನ ರುಜು |
| | ಟಿಪ್ಪಣಿ: ಪ್ರವೇಶ ದ್ವಾರದಲ್ಲಿ ಸಂಗ್ರಹಿಸಬೇಕಾದುದು. | ಟಿಪ್ಪಣಿ: ಪ್ರದರ್ಶನವು ಮುಕ್ತಾಯವಾಗುವವರೆಗೂ ಪೋಷಕನು ಇಟ್ಟುಕೊಳ್ಳಬೇಕಾದುದು. |

**ನಮೂನೆ V**

**(25ನೇ ನಿಯಮಗಳನ್ನು ನೋಡಿ)**

________________ದಂದು ಮುಕ್ತಾಯದ ಅವಧಿಗಾಗಿ ಮಾರಾಟ ಮಾಡಿದ ಸೀಸನ್ ಟಿಕೆಟುಗಳ ವಿವರ ಪಟ್ಟಿಕೆ.

| ಟಿಕೆಟಿನ ವರ್ಗ | ಮಾರಾಟವಾದ ಟಿಕೆಟುಗಳ ಸಂಖ್ಯೆ | ಯಾವ ಅವಧಿಗಾಗಿ ಲಭ್ಯವಿದೆಯೋ ಆ ಅವಧಿ | ವಸೂಲಾದ ಒಟ್ಟು ಮೊತ್ತ | ಬಾಕಿಯಿರುವ ತೆರಿಗೆಯ ಮೊಬಲಗು | | ಷರಾ |
|---|---|---|---|---|---|---|
| | | | | ಮನೋರಂಜನಾ ತೆರಿಗೆ | ಅಧಿಭಾರ | |
| 1 | 2 | 3 | 4 | 5(ಕ) | 5(ಖ) | 6 |

## ನಮೂನೆ VI

**(30ನೇ ಮತ್ತು 54 (1)ನೇ ನಿಯಮವನ್ನು ನೋಡಿ)**

**ಯಾಂತ್ರಿಕ ಸಾಧನದ ಮೂಲಕ ದಾಖಲಾದಂತೆ ವಿವರ ಪಟ್ಟಿಕೆಗಳ ಆಧಾರದ ಮೇಲೆ ತೆರಿಗೆಯ ಸಂದಾಯಕ್ಕಾಗಿ ಅನುಮತಿ ಪತ್ರ**

ಓದಿಕೊಳ್ಳುವುದು—

ಈ ಕೆಳಕಂಡ ಮನೋರಂಜನೆಗಳಿಗೆ ಸಂಬಂಧಿಸಿದಂತೆ, ದಿನಾಂಕ... ದಂದು ಇವರಿಂದ ಬಂದ ಅರ್ಜಿ.

ಮನೋರಂಜನೆಯ ಸ್ಥಳದಲ್ಲಿ ಸ್ಥಾಪಿಸಿರುವ ಯಾಂತ್ರಿಕ ಸಾಧನದ ಮೂಲಕ ದಾಖಲಾದ ವಿವರ ಪಟ್ಟಿಕೆಗಳ ಆಧಾರದ ಮೇಲೆ ಮೇಲ್ಕಂಡ ಮನೋರಂಜನೆಗಳ ಮೇಲೆ ಬಾಕಿಯಾಗುವ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಮಾಲೀಕನಿಗೆ ಅನುಮತಿ ನೀಡಲಾಗಿದೆ.

(1) ಈ ಅನುಮತಿಯನ್ನು ಯಾವುದೇ ಕಾರಣವನ್ನು ಕೊಡದೆ ಯಾವುದೇ ಕಾಲದಲ್ಲಿ ರದ್ದುಪಡಿಸಬಹುದು ಮತ್ತು ಅಂಥ ರದ್ದಿಯಾತಿಯಿಂದಾಗಿ ಮಾಲೀಕನಿಗೆ ಉಂಟಾದ ಯಾವುದೇ ನಷ್ಟದ ಬಗ್ಗೆ ಸರ್ಕಾರವು ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.

(2) ಇದು 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ ಉಪಬಂಧಗಳು ಅದರ ಮೇರೆಗೆ ರಚಿಸಿರುವ ನಿಯಮಗಳು ಮತ್ತು ಈ ಅನುಮತಿ ಪತ್ರದ ಷರತ್ತುಗಳು, ಮತ್ತು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಇತರ ಷರತ್ತುಗಳನ್ನು ಪಾಲಿಸುವುದು ಒಳಪಟ್ಟಿದೆ.

(3) ಸರಿಯಾದ ಮತ್ತು ಪೂರ್ಣವಾದ ಲೆಕ್ಕವನ್ನು, 1959ರ ಕರ್ನಾಟಕ ಮನೋರಂಜನಾ ತೆರಿಗೆಯ ನಿಯಮಗಳಿಗೆ ಅನುಬಂಧಿಸಿದ ನಮೂನೆ VII ರಲ್ಲಿ ಇರತಕ್ಕದ್ದು, ಮತ್ತು ಅದು ಪ್ರತಿ ವರ್ಗಕ್ಕೆ ಪ್ರವೇಶ ಪಡೆದ ವ್ಯಕ್ತಿಗಳ ಸಂಖ್ಯೆ ಸ್ವೀಕರಿಸಿದ ಮೊಬಲಗು ಮತ್ತು ಅದರ ಮೇಲೆ ಬಾಕಿಯಿರುವ ಮನೋರಂಜನಾ ತೆರಿಗೆಯ ಒಟ್ಟು ಮೊಬಲಗನ್ನು ತೋರಿಸತಕ್ಕದ್ದು. ಈ ಲೆಕ್ಕವನ್ನು ಸರಿ ನೋಡುವುದಕ್ಕಾಗಿ ಕೇಳಿದಾಗ ಸಂಬಂಧಪಟ್ಟ ಇತರ ದಾಖಲೆಗಳೊಂದಿಗೆ ಪರಿಶೀಲನಾಧಿಕಾರಿಗಳಿಗೆ ತೋರಿಸತಕ್ಕದ್ದು. ಈ ಅನುಮತಿ ಪತ್ರದಲ್ಲಿ ಒಳಪಡುವ ಯಾವುದೇ ಪ್ರದರ್ಶನವು ನಡೆಯುವಾಗ ಪ್ರೇಕ್ಷಕರ ಅಥವಾ ಶ್ರೋತೃಗಳ ಸಂಖ್ಯೆಯನ್ನು ಎಣಿಕೆ ಮಾಡುವುದರ ಮೂಲಕ ದಾಖಲೆಗಳ ಸರಿತನವನ್ನು ಪರೀಕ್ಷಿಸಲು ಪರಿಶೀಲನಾಧಿಕಾರಿಗಳಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು.

(4) ಸೋಮವಾರದಿಂದ ಭಾನುವಾರದವರೆಗಿನ ಪ್ರತಿದಿವಸ (ಎರಡೂ ದಿನಗಳೂ ಸೇರಿ) ವಾರದಲ್ಲಿನ ಎಲ್ಲ ಪ್ರದರ್ಶನಗಳಿಗೆ ಸಂಬಂಧಿಸಿದಂತೆ ಪ್ರವೇಶಕ್ಕಾಗಿ ಮಾಡಿದ ಸಂದಾಯವನ್ನು ತೋರಿಸುವ 1959ರ ಕರ್ನಾಟಕ ಮನೋರಂಜನಾ ತೆರಿಗೆ ನಿಯಮಗಳಿಗೆ ಅನುಬಂಧಿಸಿರುವ ನಮೂನೆ VIIರಲ್ಲಿನ ವಿವರ ಪಟ್ಟಿಕೆಯನ್ನು ಕೊನೇಪಕ್ಷ ನಿಕಟೋತ್ತರದ ಬರುವ ಕೆಲಸದ ದಿವಸ ಈ ಕೆಳಗೆ ರುಜು ಮಾಡಿರುವವರ ಕಚೇರಿಗೆ ತಲುಪುವ ಹಾಗೆ ಕಳುಹಿಸತಕ್ಕದ್ದು. ಸಂದಾಯ ಮಾಡಿದ ತೆರಿಗೆಯ ಮೊಬಲಿಗಾಗಿನ ಖಜಾನೆ ರಸೀದಿ ಅಥವಾ ಬಾಕಿಯಾಗುವ ಮನೋರಂಜನಾ ತೆರಿಗೆಯ ಮೊಬಲಿಗಾಗಿ ಮನೋರಂಜನಾ ತೆರಿಗೆ ಅಧಿಕಾರಿಯ ಹೆಸರಿಗೆ ಬರೆದ ಕ್ರಾಸ್ ಮಾಡಿದ ಚೆಕ್ಕನ್ನು ವಿವರ ಪಟ್ಟಿಕೆಗೆ ಲಗತ್ತಿಸತಕ್ಕದ್ದು. ಉಚಿತ ಪಾಸುಗಳ ಮೂಲಕ ಅಥವಾ ರಿಯಾಯಿತಿ ದರಗಳಲ್ಲಿ ಪ್ರವೇಶ ಪಡೆದ ವ್ಯಕ್ತಿಗಳ ಸಂಖ್ಯೆಯನ್ನು ಮತ್ತು ಅದರ ಮೇಲೆ ಸಂದಾಯ ಮಾಡಿದ ತೆರಿಗೆಯನ್ನು ಪ್ರತಿಯೊಂದು ಪ್ರದರ್ಶನಕ್ಕಾಗಿ ಪ್ರತ್ಯೇಕವಾಗಿ ವಿವರ ಪಟ್ಟಿಕೆಯಲ್ಲಿ ತಪ್ಪದೆ ನಮೂದಿಸತಕ್ಕದ್ದು.

(5) ಯಾವ ಮೊಬಲಗಿನ ಸಂದಾಯಕ್ಕಾಗಿ ವಿವರ ಪಟ್ಟಿಕೆಯೊಂದಿಗೆ ರಸೀದಿಯನ್ನು ಕಳುಹಿಸಲಾಗಿದೆಯೋ ಆ ಮೊಬಲಗಿಗೆ ಬಾಕಿಯಾಗಿರುವುದಾಗಿ ಕಂಡು ಬಂದ ಯಾವುದೇ ತೆರಿಗೆಯನ್ನು ಅದನ್ನು ವಿಧಿಸಿದಂಥ ದಿನಾಂಕದಿಂದ ಏಳು ದಿವಸಗಳೊಳಗೆ ಸಂದಾಯ ಮಾಡತಕ್ಕದ್ದು.

(ಅಧಿಕಾರಿಯ ರುಜು)

**(ನಮೂನೆ VI-ಕ)**

**(41 ಕ ನಿಯಮವನ್ನು ನೋಡಿ)**

**ಚಲನಚಿತ್ರ ಪ್ರದರ್ಶನದ ಮೇಲೆ ತೆರಿಗೆಯನ್ನು ಸಂದಾಯ ಮಾಡಲು ಅನುಮತಿ ಪತ್ರದ ಮಂಜೂರಾತಿಗೆ ಅರ್ಜಿ**

ಮನೋರಂಜಾ ತೆರಿಗೆ ಅಧಿಕಾರಿಯವರಿಗೆ,

ಮಾನ್ಯರೇ,

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 4–ಕ ಪ್ರಕರಣದ ಮೇರೆಗೆ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆ (ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ ಹೆಚ್ಚಿನ ತೆರಿಗೆಯನ್ನು) ಸಂದಾಯ ಮಾಡಲು ಅನುಮತಿ ಪತ್ರದ ಮಂಜೂರಾತಿಗಾಗಿ ನಾನು ಅರ್ಜಿ ಸಲ್ಲಿಸುತ್ತಿದ್ದೇನೆ. ಪ್ರದರ್ಶನಗಳನ್ನು ನಡೆಸುವಂಥ ಸ್ಥಳ ಮತ್ತು ಚಿತ್ರಮಂದಿರದಲ್ಲಿನ, ಸ್ಥಳಾವಕಾಶ ಇತ್ಯಾದಿಗಳ ವಿವರಗಳನ್ನು ಈ ಕೆಳಗೆ ಒದಗಿಸಲಾಗಿದೆ.

1. ಅರ್ಜಿದಾರನ ಹೆಸರು (ಮಾಲೀಕ)
2. ನಿವಾಸದ ವಿಳಾಸ
3. ಚಿತ್ರಮಂದಿರವಿರುವ ಸ್ಥಳ (ಗ್ರಾಮ)
4. ಇತ್ತೀಚಿನ ಜನಗಣತಿ ಪ್ರಕಾರ ಜನಸಂಖ್ಯೆ
5. ಚಿತ್ರ ಮಂದಿರ ಸ್ವರೂಪ — ಖಾಯಂ/ಅರೆ ಖಾಯಂ/ಟೂರಿಂಗ್ (ಟೆಂಟ್)
6. ಚಿತ್ರ ಮಂದಿರದಲ್ಲಿ ಪ್ರತಿ ವರ್ಗಕ್ಕಾಗಿನ ಪ್ರವೇಶ ದರಗಳೊಂದಿಗೆ ಒದಗಿಸಿರುವ ಸ್ಥಳಾವಕಾಶ — ವರ್ಗ/ಪ್ರವೇಶ ದರ/ಸೀಟುಗಳ ಸಂಖ್ಯೆ.
7. ಪ್ರತಿದಿನ ಪ್ರದರ್ಶಿಸಲು ಉದ್ದೇಶಿಸಿರುವ ಪ್ರದರ್ಶನಗಳ ಸಂಖ್ಯೆ.

ನನ್ನಿಂದ ಸಲ್ಲಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆಯ ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ ಹೆಚ್ಚಿನ ತೆರಿಗೆಯ ಸಂದಾಯಕ್ಕಾಗಿ ತಗಾದೆ ಮಾಡಿರುವ ಭದ್ರತೆಯನ್ನು ಒದಗಿಸಲು ಮತ್ತು ನಿಯಮಗಳಲ್ಲಿ ನಿಯಮಿಸಲಾದಂತೆ ವಿವರಪಟ್ಟಿಕೆಗಳನ್ನು ಸಲ್ಲಿಸಲು ನಾನು ಒಪ್ಪಿದ್ದೇನೆ.

ಕಳುಹಿಸಬೇಕಾದ ವಿವರಪಟ್ಟಿಕೆಯನ್ನು ಸಲ್ಲಿಸುವ ಮುಂಚೆ ಪ್ರತಿ ಪ್ರದರ್ಶನಕ್ಕೆ ಸಂಬಂಧಿಸಿದಂತೆ ಚಲನಚಿತ್ರ ಪ್ರದರ್ಶನಗಳ ಮೇಲಿನ ಬಾಕಿ ಇರುವ ತೆರಿಗೆ ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ ಹೆಚ್ಚಿನ

ತೆರಿಗೆಯನ್ನು ಸಂದಾಯ ಮಾಡಲು ನಾನು ಒಪ್ಪಿದ್ದೇನೆ ಮತ್ತು ಬಾಕಿಯಿರುವುದಾಗಿ ಕಂಡುಬಂದ ಯಾವುದೇ ಹೆಚ್ಚಳವನ್ನು ಅದನ್ನು ತಗಾದೆ ಮಾಡಿದ ತರುವಾಯ ಏಳು ದಿವಸಗಳೊಳಗೆ ಸಂದಾಯ ಮಾಡುತ್ತೇನೆ.

ಈ ಅನುಮತಿ ಪತ್ರದ ಎಲ್ಲ ಷರತ್ತುಗಳನ್ನು ನಾನು ಒಪ್ಪಿದ್ದೇನೆ ಮತ್ತು ಅವುಗಳನ್ನು ಅನುಸರಿಸುತ್ತೇನೆ. ನಿಜವಾದ ಮತ್ತು ಸರಿಯಾದ ವಿವರಪಟ್ಟಿಗಳನ್ನು ಒಪ್ಪಿಸಲು ನಾನು ವಿಫಲನಾದರೆ, ಒದಗಿಸಿರುವ ಭದ್ರತೆಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಮತ್ತು ನನ್ನಿಂದ ಬಾಕಿಯಾಗುವ ಚಲನಚಿತ್ರ ಪ್ರದರ್ಶನದ ಮೇಲಿನ ತೆರಿಗೆಯನ್ನು ವಸೂಲು ಮಾಡಲು ಸಹ ಮನೋರಂಜನಾ ತೆರಿಗೆ ಅಧಿಕಾರಿಗೆ ಅವಕಾಶವಿದೆ.

ತಮ್ಮ ವಿಶ್ವಾಸಿ,

ಸ್ಥಳ :

ದಿನಾಂಕ :

**(ನಮೂನೆ VI-ಖ)**

**(41ರ. 41ಖ(1) ನಿಯಮವನ್ನು ನೋಡಿ)**

**4ಕ ಪ್ರಕರಣದ ಮೇರೆಗೆ ಚಲನಚಿತ್ರ ಪ್ರದರ್ಶನದ ಮೇಲೆ ತೆರಿಗೆಯನ್ನು ಸಂದಾಯ ಮಾಡಲು ಅನುಮತಿ ಪತ್ರ.**

ಓದಿಕೊಳ್ಳುವುದು:–

ದಿನಾಂಕ______________________________ದಂದಿನ______________________ ಇವರ (ಮಾಲೀಕರು) ಅರ್ಜಿ ಮಾಲೀಕನು ಅವನು ಪ್ರದರ್ಶಿಸಿದ ಚಲನಚಿತ್ರ ಪ್ರದರ್ಶನಗಳಿಗೆ ಸಂಬಂಧಿಸಿದಂತೆ 1968ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ IV–ಕ ಪ್ರಕರಣದ ಮೇರೆಗೆ, ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆಯನ್ನು ಸಂದಾಯ ಮಾಡಲು ಅವನಿಗೆ ಈ ಮೂಲಕ ಅನುಮತಿ ನೀಡಲಾಗಿದೆ. ಈ ಅನುಮತಿಯು ಈ ಮುಂದಿನ ಷರತ್ತುಗಳಿಗೆ ಒಳಪಟ್ಟಿದೆ.

1. ಈ ಅನುಮತಿಯನ್ನು ಯಾವುದೇ ಕಾರಣವನ್ನು ಕೊಡದೆಯೇ ಯಾವುದೇ ಕಾಲದಲ್ಲಿ ರದ್ದುಪಡಿಸಬಹುದು ಮತ್ತು ರದ್ದಿಯಾತಿಯಿಂದಾಗಿ ಮಾಲೀಕನಿಗೆ ಉಂಟಾದ ಯಾವುದೇ ನಷ್ಟದ ಬಗ್ಗೆ ಸರ್ಕಾರವು ಯಾವುದೇ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದಲ್ಲ.
2. ಇದು, 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ ಉಪಬಂಧಗಳು, ಅದರ ಮೇರೆಗೆ ರಚಿಸಿದ ನಿಯಮಗಳು ಮತ್ತು ಈ ಅನುಮತಿ ಪತ್ರದ ಷರತ್ತುಗಳು ಮತ್ತು ಕಾಲಕಾಲಕ್ಕೆ ನಿರ್ದಿಷ್ಟ ಪಡಿಸಬಹುದಾದಂಥ ಇತರ ಷರತ್ತುಗಳನ್ನೂ ಪಾಲಿಸುವುದಕ್ಕೆ ಒಳಪಟ್ಟಿದೆ.
3. ಈ ಅನುಮತಿ ಪತ್ರವನ್ನು ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು. ಮಾಲೀಕನು ಎದ್ದು ಕಾಣುವ ಸ್ಥಳಗಳಲ್ಲಿ ಎಂದರೆ, ಆವರಣದ ಮುಖ್ಯ ಪ್ರವೇಶ ದ್ವಾರದಲ್ಲಿ ಮತ್ತು ಸಭಾಂಗಣದೊಳಗೆ ಪ್ರವೇಶಕ್ಕಾಗಿನ ಪ್ರತಿಯೊಂದು ಸೀಟುಗಳಲ್ಲಿ ಸ್ಥಳಾವಕಾಶದ ವರ್ಗಗಳ ಬಗೆಗಿನ ವಿವರಗಳು, ಅವನು ಒದಗಿಸಿದ ಅಂಥ ಪ್ರತಿಯೊಂದು ಅಂಥ ಸೀಟುಗಳ ಸಂಖ್ಯೆ ಮತ್ತು ಅಂಥ ವರ್ಗಗಳಿಗೆ ಪ್ರವೇಶದ ದರಗಳನ್ನು ಪ್ರದರ್ಶಿಸತಕ್ಕದ್ದು ಅಥವಾ ಪ್ರದರ್ಶಿಸುವಂತೆ ಮಾಡತಕ್ಕದ್ದು.

4. ಮಾಲೀಕನು ಕೆಳಗೆ ರುಜು ಮಾಡಿರುವವನ ಪೂರ್ವ ಅನುಮತಿಯೊಂದಿಗಲ್ಲದೆ ಪ್ರವೇಶ ದರಗಳನ್ನಾಗಲಿ ಯಾವುದೇ ವರ್ಗ ಅಥವಾ ಯಾವುದೇ ವರ್ಗಗಳಲ್ಲಿನ ಸೀಟುಗಳ ಸಂಖ್ಯೆಯನ್ನಾಗಲಿ ವ್ಯತ್ಯಾಸಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಾಡುಗೊಳಿಸತಕ್ಕದ್ದಲ್ಲ.

5. ಮಾಲೀಕನು ಸೀಟುಗಳ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ವ್ಯಕ್ತಿಗಳಿಗೆ ಸಭಾಂಗಣದಲ್ಲಿನ ಯಾವುದೇ ವರ್ಗಕ್ಕೆ ಪ್ರವೇಶ ಕೊಡತಕ್ಕದ್ದಲ್ಲ ಅಥವಾ ಕೊಡುವಂತೆ ಮಾಡತಕ್ಕದ್ದಲ್ಲ.

6. ಅನುಮತಿ ಪತ್ರದ ಧಾರಕನು ಸಂದಾಯಮಾಡಬೇಕಾದ ಪ್ರತಿ ಪ್ರದರ್ಶನದ ಒಟ್ಟು ಸಂಗ್ರಹಣ ಸಾಮರ್ಥ್ಯ ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆಯ ಮೊಬಲಗು ಇವುಗಳನ್ನು ಕೆಳಗೆ ತೋರಿಸಲಾಗಿದೆ.

| ವರ್ಗ | ಪ್ರವೇಶ ದರ | ಸೀಟುಗಳ ಸಂಖ್ಯೆ | ವರ್ಗದಲ್ಲಿನ ಎಲ್ಲ ಸೀಟುಗಳ ಒಟ್ಟು ಮೌಲ್ಯ |
|---|---|---|---|
| 1.<br>2.<br>3.<br>4. | ಒಟ್ಟು (ಒಟ್ಟು ಸಂಗ್ರಹಣಾ ಸಾಮರ್ಥ್ಯ) | | |

ಪ್ರತಿ ಪ್ರದರ್ಶನಕ್ಕೆ ಸಂದಾಯ ಮಾಡಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆಯ ಮೊಬಲಗು______ರೂಪಾಯಿಗಳು (ಅಕ್ಷರಗಳಲ್ಲಿ)_______

7. ಮಾಲೀಕನು, 41–ಗ ನಿಯಮದಲ್ಲಿ ಉಪಬಂಧಿಸಿರುವಂತೆ ಅವನಿಂದ ಸಂದಾಯವಾಗಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆಯು ಪೂರ್ಣ ಮೊಬಲಗಿಗೆ ಖಜಾನೆ ರಸೀದಿ ಸಮೇತ X–ಕ ನಮೂನೆಗಳಲ್ಲಿ ವಿವರಪಟ್ಟಿಕೆಯನ್ನು ಸಲ್ಲಿಸತಕ್ಕದ್ದು.

8. ಈ ಅನುಮತಿ ಪತ್ರವು,________ದಿಂದ ಸಿಂಧುವಾಗಿರತಕ್ಕದ್ದು,

ಮನೋರಂಜನಾ ತೆರಿಗೆ ಅಧಿಕಾರಿ.

ಸ್ಥಳ :

ದಿನಾಂಕ :

**(ನಮೂನೆ VI-ಗ)**

**(41–ಕ ನಿಯಮವನ್ನು ನೋಡಿ)**

**ಪ್ರತಿ ವರ್ಷ ರಾಜಿ ಯೋಜನೆಯ ಅಡಿಯಲ್ಲಿ ಬರುವ ಚಿತ್ರಮಂದಿರದ ಮಾಲೀಕನು ಚಲಾಯಿಸಬೇಕಾದ ಆಯ್ಕೆಯ ನಮೂನೆ.**

ಮನೋರಂಜನಾ ತೆರಿಗೆ ಅಧಿಕಾರಿಗೆ,

1964ರ ಕಾರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮದ (1964ರ ಕರ್ನಾಟದ ಅಧಿನಿಯಮ 23) ಉಪಬಂಧಗಳ ಮೇರೆಗೆ, ನಾನು ನಡೆಸುವುದಕ್ಕಾಗಿ ಅನುಮತಿಸಿರುವಂಥ ಪ್ರತಿ ದಿವಸದ ಪ್ರದರ್ಶನಗಳ

ಗರಿಷ್ಠ ಸಂಖ್ಯೆಯ ಮೇಲೆ, ವರ್ಷದ ಅವಧಿಯಲ್ಲಿ ಪ್ರತಿ ಪ್ರದರ್ಶನದ ಒಟ್ಟು ಸಂಗ್ರಹಣ ಸಾಮರ್ಥ್ಯದ ಶೇಕಡಾ ಇಪ್ಪತ್ತರಷ್ಟು ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಈ ಮೂಲಕವಾಗಿ ನಾನು ಆಯ್ಕೆ ಮಾಡಿಕೊಳ್ಳುತ್ತೇನೆ.

ಒಮ್ಮೆ ಚಲಾಯಿಸಿದ ಮೇಲ್ಕಂಡ ಆಯ್ಕೆಯ ರದ್ದಿಯಾತಿ ಅಥವಾ ಮಾರ್ಪಾಡಿಗೆ ಆ ವರ್ಷದ ಅವಧಿಯಲ್ಲಿ ಅನುಮತಿಸುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ.

ಮಾಲೀಕ ಅಥವಾ/ಕ್ರಮಬದ್ಧ/ಅಧಿಕೃತ ಪ್ರತಿನಿಧಿಯ ರುಜು.

ಸ್ಥಳ:

ದಿನಾಂಕ:

## ನಮೂನೆ–VII

**(33ನೇ ನಿಯಮವನ್ನು ನೋಡಿ)**

ಯಾಂತ್ರಿಕ ಸಾಧನದ ಮೂಲಕ ಪ್ರವೇಶ ಪಡೆದ ವ್ಯಕ್ತಿಗಳ ಸಂಖ್ಯೆಯ ರಿಜಿಸ್ಟರು

ಮನೋರಂಜನೆಯ ಸ್ಥಳ:

ಮನೋರಂಜನೆ

ದಿನಾಂಕ:

| ಪ್ರವೇಶ ದರ | ಸಂದಾಯದ ಮೇಲೆ ಪ್ರವೇಶ ಪಡೆದ ವ್ಯಕ್ತಿಗಳ ಸಂಖ್ಯೆ | ಗೌರವಾರ್ಥ ಟಿಕೆಟ್‌ಗಳ ಮೇಲೆ ಪ್ರವೇಶ ಪಡೆದ ವ್ಯಕ್ತಿಗಳ ಸಂಖ್ಯೆ | ಒಟ್ಟು ಸ್ವೀಕೃತಿಗಳು | ಸಂಗ್ರಹ ಮಾಡಿದ ತೆರಿಗೆಯ ಮೊಬಲಗು | | ಷರಾ |
|---|---|---|---|---|---|---|
| | | | | ಮನೋರಂಜನಾ ತೆರಿಗೆ | ಅಧಿಕಾರ | |
| 1 | 2 | 3 | 4 | 5(ಕ) | 5(ಖ) | 6 |
| | | | | ಒಟ್ಟು | | |

(ರುಜು ಮಾಡಿದೆ)________________________

ಮಾಲೀಕ

## ನಮೂನೆ-VIII

### (43 ಮತ್ತು 45ನೇ ನಿಯಮಗಳನ್ನು ನೋಡಿ)

### ಮನೋರಂಜನಾ ತೆರಿಗೆಯಿಂದ ವಿನಾಯತಿಯ ಬಗ್ಗೆ ಪ್ರಮಾಣ ಪತ್ರ

ಕೆಳಗೆ ನಿರ್ದಿಷ್ಟಪಡಿಸಿದ ಮನೋರಂಜನೆಯನ್ನು ಮನೋರಂಜನಾ ತೆರಿಗೆಯಿಲ್ಲದೆ ಕೊಡಲು ಅನುಮತಿ ನೀಡಲಾಗಿದೆಯೆಂದು, ಪ್ರಮಾಣೀಕರಿಸಿದೆ. ಆದರೆ ಬಂದ ಪೂರ್ತಿ ಹಣವನ್ನು ಕೆಳಗೆ ನಿರ್ದಿಷ್ಟಪಡಿಸಿದ ಲೋಕೋಪಕಾರಿ ಧಾರ್ಮಿಕ ಅಥವಾ ಧರ್ಮಾರ್ಥ ಉದ್ದೇಶಗಳಿಗಾಗಿ ವಿನಿಯೋಗಿಸಬೇಕು.

ವಿವರಣೆ:-

ದಿನಾಂಕ:

ಸ್ಥಳ:

ಉತ್ಪತ್ತಿಗಳನ್ನು ಉಪಯೋಗಿಸಿಕೊಳ್ಳಬೇಕಾದಂಥ ಉದ್ದೇಶ:

ಈ ಪ್ರಮಾಣ ಪತ್ರವನ್ನು, ಈ ಮುಂದಿನ ಷರತ್ತುಗಳಿಗೊಳಪಟ್ಟು ಕೊಡಲಾಗಿದೆ.

1. ಮನೋರಂಜನೆಯಿಂದ ಬಂದ ಪೂರ್ತಿ ಹಣವನ್ನು ವೆಚ್ಚಗಳಿಗಾಗಿ ಯಾವುದೇ ಕಡಿತವಿಲ್ಲದೆ______ಇದಕ್ಕೆ ಸಂದಾಯಮಾಡತಕ್ಕದ್ದು.

2. ಬಂದ ಸಮಗ್ರ ಹಣದ ಪೂರ್ಣ ಮತ್ತು ಸರಿಯಾದ ಲೆಕ್ಕವನ್ನು, ಒಟ್ಟು ಉತ್ಪತ್ತಿಗಳೊಂದಿಗೆ (1)ನೇ ಷರತ್ತಿನಲ್ಲಿ ನಿರ್ದಿಷ್ಟಪಡಿಸಿರುವ ಸಂಸ್ಥೆ ಅಥವಾ ವ್ಯಕ್ತಿಗೆ ಮಾಲೀಕನು ಒಪ್ಪಿಸತಕ್ಕದ್ದು ಮತ್ತು ಆ ಬಗ್ಗೆ ಆ ಸಂಸ್ಥೆ ಅಥವಾ ವ್ಯಕ್ತಿಯಿಂದ ಪಡೆದಿರುವ ಸ್ವೀಕೃತಿಯನ್ನು ಮನೋರಂಜನೆಯ ದಿನಾಂಕದ ನಂತರ ಒಂದು ತಿಂಗಳೊಳಗೆ ಪ್ರಮಾಣ ಪತ್ರವನ್ನು ಕೊಡುವ ಅಧಿಕಾರಿಯ ಮುಂದೆ ದಾಖಲ್ಮಾಡತಕ್ಕದ್ದು.

3. ಮಾಲೀಕನು ಸರಿಯಾದ ಲೆಕ್ಕಗಳನ್ನು ಇಡತಕ್ಕದ್ದು ಮತ್ತು ಪ್ರಮಾಣಪತ್ರವನ್ನು ಕೊಡುವ ಅಧಿಕಾರಿಗೆ, ಅವನು ನಿಯಮಿಸಿದಂಥ ವಿವರ ಪಟ್ಟಿಕೆಗಳನ್ನು ಒಪ್ಪಿಸತಕ್ಕದ್ದು.

4. ಪ್ರಮಾಣಪತ್ರವನ್ನು ಕೊಡುವ ಅಧಿಕಾರಿಗೆ (1)ನೇ ಷರತ್ತಿನಲ್ಲಿ ನಿರ್ದಿಷ್ಟಪಡಿಸಿರುವ ಸಂಸ್ಥೆ ಅಥವಾ ವ್ಯಕ್ತಿಗೆ ವೆಚ್ಚಗಳಿಗಾಗಿ ಯಾವುದೇ ಕಡಿತವಿಲ್ಲದೆ ಬಂದ ಪೂರ್ತಿ ಹಣವನ್ನು ಸಂದಾಯಮಾಡಲಾಗಿದೆಯೆಂದು ಮನದಟ್ಟಾದರೆ, ಮಾಲೀಕನು ಸರಿಯಾದ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

5. ಈ ಪ್ರಮಾಣವನ್ನು, ಮೇಲೆ ನಿರ್ದಿಷ್ಟಪಡಿಸಿದುದಕ್ಕಲ್ಲದೆ ಬೇರೆ ಯಾವುದೇ ಮನೋರಂಜನೆಗೆ ಉಪಯೋಗಿಸಕೂಡದು ಮತ್ತು ಇದನ್ನು ಸಾರ್ವಜನಿಕರು ಪ್ರವೇಶಪಡೆಯುವ ಕಾಲದಲ್ಲಿ ಮತ್ತು ಮನೋರಂಜನೆ ನಡೆಯುತ್ತಿರುವಾಗ ಮನೋರಂಜನೆ ಸ್ಥಳದ ಸಾರ್ವಜನಿಕ ಪ್ರವೇಶದ್ವಾರದಲ್ಲಿ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸಬೇಕು. ಪ್ರಮಾಣಪತ್ರವನ್ನು ನೀಡುವ ಅಧಿಕಾರಿಯ ಚಿಕ್ಕ ರುಜುವಿನೊಂದಿಗೆ ಅಲ್ಲದೆ ಪ್ರಮಾಣಪತ್ರದಲ್ಲಿ ಯಾವುದೇ ಬಗೆಯ ತಿದ್ದುಪಾಟು ಅಥವಾ ಅಳಿಸುವಿಕೆಯನ್ನು ಮಾಡಬಾರದು.

6. ಮೇಲೆ ನಿರ್ದಿಷ್ಟಪಡಿಸಿರುವ ದಿನಾಂಕದಂದು ಮತ್ತು ಸ್ಥಳದಲ್ಲಿ ಮನೋರಂಜನೆಯನ್ನು ಕೊಡದಿದ್ದರೆ, ಮಾಲೀಕನು, ಇದನ್ನು ನಡೆಸಲು ಸರಿಪಡಿಸಿದ ದಿನಾಂಕದ ತರುವಾಯ ಒಂದು ವಾರದೊಳಗೆ ಪ್ರಮಾಣಪತ್ರ ನೀಡುವ ಅಧಿಕಾರಿಗೆ ಆ ಬಗ್ಗೆ ಬರಹದಲ್ಲಿ ನೋಟೀಸನ್ನು ಕೊಡತಕ್ಕದ್ದು.

7. ಯಾವ ಉದ್ದೇಶಗಳಿಗಾಗಿ ಮನೋರಂಜನೆಯು ನಡೆಸಲು ಉದ್ದೇಶಿತವಾಗಿತ್ತೋ ಆ ಉದ್ದೇಶಗಳಿಗೆ ಸಮಗ್ರ ಒಟ್ಟು ಉತ್ಪತ್ತಿಗಳನ್ನು ವಿನಿಯೋಗಿಸುವುದಕ್ಕಾಗಿ ಭದ್ರತೆಯೆಂದು__________ಹೆಸರಿನ ಮಾಲೀಕನು ಮಾಡಿದ_______ ರೂಪಾಯಿಗಳ ಠೇವಣಿಯನ್ನು ಅವುಗಳನ್ನು ಹಾಗೆ ವಿನಿಯೋಗಿಸಲಾಗಿದೆ ಎಂಬುದಕ್ಕೆ ತೃಪ್ತಿಕರ ರುಜುವಾತನ್ನು ಹಾಜರ್ಪಡಿಸಿದ ಮೇಲೆ ಹಿಂತಿರುಗಿಸಲಾಗುವುದು.

(ಪ್ರಮಾಣಪತ್ರ ಕೊಡುವ ಅಧಿಕಾರಿಯ ರುಜು)

## ನಮೂನೆ- IX

**(43 ಮತ್ತು 45ನೇ ನಿಯಮಗಳನ್ನು ನೋಡಿ)**

**ಮನೋರಂಜನಾ ತೆರಿಗೆಯಿಂದ ವಿನಾಯಿತಿಯ ಬಗ್ಗೆ ಪ್ರಮಾಣ ಪತ್ರ.**

ವಿಶೇಷವಾಗಿ ಕೆಳಗೆ ನಿರ್ದಿಷ್ಟಪಡಿಸಿದ__

ಈ ಮನೋರಂಜನೆಯು,__

(ಕ) ಪೂರ್ತಿಯಾಗಿ ಶೈಕ್ಷಣಿಕ ಸ್ವರೂಪದ್ದಾಗಿದೆ;

(ಖ) ವಾಣಿಜ್ಯ ತೆರಿಗೆಗಳ ಕಮೀಷನರನು ಮನ್ನಣೆ ನೀಡಿದ ಶೈಕ್ಷಣಿಕ ಸಂಸ್ಥೆ ಕ್ರೀಡಾ ಸಂಘವು ನಡೆಸುವ ಆಟ ಅಥವಾ ಕ್ರೀಡೆಯಾಗಿದೆ ಮತ್ತು ಯಾವುದೇ ಲಾಭವನ್ನು ಪಡೆಯದೆ ಅದನ್ನು ನಡೆಸಲಾಗುತ್ತಿದೆ;

(ಗ) ಲಾಭಕ್ಕಾಗಿ ನಡೆಸದ ಅಥವಾ ಸ್ಥಾಪಿಸಿರದ ಸಂಸ್ಥೆಯಿಂದ ಭಾಗಶಃ ಶೈಕ್ಷಣಿಕ, ಸಾಂಸ್ಕೃತಿಕ ಅಥವಾ ವೈಜ್ಞಾನಿಕವಾದ ಉದ್ದೇಶಗಳಿಗಾಗಿ ಒದಗಿಸಲಾಗಿದೆ;

(ಘ) ಲಾಭಕ್ಕಾಗಿ ನಡೆಸಿದ ಸಂಸ್ಥೆಯಿಂದ ಒದಗಿಸಲಾಗಿದೆ ಮತ್ತು 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ

7 (1) (ಐ) ಪ್ರಕರಣದ ವ್ಯಾಪ್ತಿಯೊಳಗೆ ಬರುತ್ತದೆ ಎಂದು ಪ್ರಮಾಣೀಕರಿಸಿದೆ. (ಅನ್ವಯವಾಗದಿರುವಂಥ ಮೇಲಿನ ಬಾಬುಗಳನ್ನು ಹೊಡೆದು ಹಾಕಿ) ಮತ್ತು ಆದ್ದರಿಂದ ಮನೋರಂಜನಾ ತೆರಿಗೆಯನ್ನು ವಿಧಿಸುವುದರಿಂದ ವಿನಾಯಿತಿ ಕೊಡಲಾಗಿದೆ.

ವಿವರ:

ದಿನಾಂಕ:

ಸ್ಥಳ:

ಈ ಪ್ರಮಾಣ ಪತ್ರವು ಕೆಳಕಂಡ ಷರತ್ತುಗಳಿಗೊಳಪಟ್ಟಿದೆ:–

(1) ಮಾಲೀಕನು, ಪ್ರಮಾಣ ಪತ್ರವನ್ನು ಕೊಡುವ ಅಧಿಕಾರಿಗೆ ಅವನು ನಿಯಮಿಸಿದಂಥ ಲೆಕ್ಕಪತ್ರಗಳನ್ನು ಇಡತಕ್ಕದ್ದು ಮತ್ತು ಅಂಥ ವಿವರಪಟ್ಟಿಕೆಗಳನ್ನು ಅವನಿಗೆ ಒಪ್ಪಿಸತಕ್ಕದ್ದು.

(2) ಈ ಪ್ರಮಾಣಪತ್ರವು ಯಾವ ಷರತ್ತುಗಳ ಮೇಲೆ ವಿನಾಯಿತಿಯನ್ನು ಕೊಡಲಾಗಿದೆಯೋ ಆ ಷರತ್ತುಗಳನ್ನು ಈಡೇರಿಸಿಲ್ಲವೆಂಬುದಾಗಿ ಕಂಡುಬಂದರೆ, ರದ್ದಿಯಾತಿಗೆ ಗುರಿಯಾಗತಕ್ಕದ್ದು. ಅಂಥ ಸಂದರ್ಭಗಳಲ್ಲಿ ನಡೆಸಿರಬಹುದಾದಂಥ ಯಾವುದೇ ಅಂಥ ಮನೋರಂಜನೆಯ ಉತ್ಪತ್ತಿಗಳ ಮೇಲೆ ಮನೋರಂಜನಾ ತೆರಿಗೆಯನ್ನು ವಿಧಿಸಲಾಗುವುದು.

(3) ಈ ಪ್ರಮಾಣ ಪತ್ರವನ್ನು ಮೇಲೆ ನಿರ್ದಿಷ್ಟಪಡಿಸಿರುವ ಮನೋರಂಜನೆಗಲ್ಲದೆ ಬೇರೆ ಯಾವುದೇ ಮನೋರಂಜನೆಗೆ ಉಪಯೋಗಿಸಕೂಡದು ಮತ್ತು ಇದನ್ನು ಸಾರ್ವಜನಿಕರು ಪ್ರವೇಶಪಡೆಯುವ ಕಾಲದಲ್ಲಿ ಮತ್ತು ಮನೋರಂಜನೆ ನಡೆಯುತ್ತಿರುವಾಗ ಮನೋರಂಜನೆಯ ಸ್ಥಳಕ್ಕೆ ಸಾರ್ವಜನಿಕ ಪ್ರವೇಶ ದ್ವಾರದಲ್ಲಿ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸಬೇಕು. ಪ್ರಮಾಣ ಪತ್ರವನ್ನು ನೀಡುವ ಅಧಿಕಾರಿಯ ಚಿಕ್ಕ ರುಜುವಿನೊಂದಿಗೆ ಅಲ್ಲದೆ, ಪ್ರಮಾಣ ಪತ್ರದಲ್ಲಿ ಯಾವುದೇ ಬಗೆಯ ತಿದ್ದುಪಾಟು ಅಥವಾ ಅಳಿಸುವಿಕೆಯನ್ನು ಮಾಡಬಾರದು.

(ಪ್ರಮಾಣ ಪತ್ರವನ್ನು ಕೊಡುವ ಅಧಿಕಾರಿಯ ರುಜು)

**ನಮೂನೆ– Xಕ**

**(41–ಗ (1)ನೇ ನಿಯಮವನ್ನು ನೋಡಿ)**

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 4ಕ ಪ್ರಕರಣದ ಮೇರೆಗೆ ಚಲನಚಿತ್ರ ಪ್ರದರ್ಶನಗಳ ಮೇಲೆ ತೆರಿಗೆಯನ್ನು ಸಂದಾಯ ಮಾಡುವ ಮಾಲೀಕರು ಒಪ್ಪಿಸಬೇಕಾದ ವಿವರ ಪಟ್ಟಿಕೆಯ ನಮೂನೆ.

ಮನೋರಂಜನಾ ತೆರಿಗೆ ಅಧಿಕಾರಿಗೆ.

ಮಾನ್ಯರೇ,

__________(ಚಿತ್ರಮಂದಿರದ ಮಾಲೀಕನಾದ__________ನಾನು__________ರಂದು ಮುಕ್ತಾಯವಾದ ಪಾಕ್ಷಿಕ ಅವಧಿಯಲ್ಲಿ, ನಾನು ಪ್ರದರ್ಶಿಸಿದ ಚಲನಚಿತ್ರ ಪ್ರದರ್ಶನಗಳ ಸಂಖ್ಯೆಯನ್ನು ತೋರಿಸುವ ವಿವರಣಾ ಪತ್ರವನ್ನು ಈ ಕೆಳಗೆ ಒಪ್ಪಿಸುತ್ತಿದ್ದೇನೆ.

ನನ್ನ ಚಿತ್ರಮಂದಿರದ ಒಟ್ಟು ಹಣ ಸಂಗ್ರಹಣಾ ಸಾಮರ್ಥ್ಯ ಮತ್ತು ಪ್ರತಿ ಪ್ರದರ್ಶನಕ್ಕೆ ನಾನು ಸಂದಾಯ ಮಾಡಬೇಕಾದ ಚಲನಚಿತ್ರ ಪ್ರದರ್ಶನದ ಮೇಲಿನ ತೆರಿಗೆಯ ಮೊಬಲಗು__________ಹೀಗೆದೆ.

**ವಿವರಣ ಪತ್ರ**

| ದಿನಾಂಕ | ಪ್ರದರ್ಶಿಸಲಾದ ಚಲನಚಿತ್ರ ಪ್ರದರ್ಶನಗಳ ಸಂಖ್ಯೆ | 2ನೇ ಸಂಖ್ಯೆ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಪ್ರದರ್ಶನಗಳ ಸಂಖ್ಯೆಯ ಮೇಲೆ 4–ಕ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆ | 2ನೇ ಸಂಖ್ಯೆ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಪ್ರದರ್ಶನಗಳ ಸಂಖ್ಯೆಯ ಮೇಲೆ ಪ್ರಕರಣದ 4–ಕ ಮೇರೆಗೆ ಸಂದಾಯ ಮಾಡಬೇಕಾದ ಚಲನಚಿತ್ರ ಪ್ರದರ್ಶನಗಳ ಮೇಲಿನ ಹೆಚ್ಚಿನ ತೆರಿಗೆ | ಚಲನಚಿತ್ರದ ಹೆಸರು ಮತ್ತು ಭಾಷೆ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| | | | | | |

**ಘೋಷಣೆ**

ಮೇಲಿನ ವಿವರಣ ಪತ್ರದಲ್ಲಿ ಒದಗಿಸಿರುವ ಮಾಹಿತಿಯು, ನಾನು ತಿಳಿದಿರುವಷ್ಟರ ಮಟ್ಟಿಗೆ ಮತ್ತು ನಂಬುವಷ್ಟರ ಮಟ್ಟಿಗೆ ನಿಜವಾಗಿದೆಯೆಂದು ಮತ್ತು ಪೂರ್ಣವಾಗಿದೆಯೆಂದು ಮತ್ತು ಇದು____________ಯಿಂದ___________ವರೆಗಿನ ಅವಧಿಗೆ ಸಂಬಂಧಪಟ್ಟಿದೆಯೆಂದು ನಾನು ಘೋಷಿಸುತ್ತೇನೆ.

ಸ್ಥಳ:

ದಿನಾಂಕ: ಮಾಲೀಕನ

ರುಜು.

**[ನಮೂನೆ– X ***]**

**ನಮೂನೆ–XI**

**1959ರ ಕರ್ನಾಟಕ ಮನೋರಂಜನಾ ತೆರಿಗೆ ನಿಯಮಗಳ ಮೇರೆಗಿನ ತಗಾದೆ ನೋಟೀಸು 41ರ (3) ನಿಯಮವನ್ನು ನೋಡಿ**

ಮಾಲೀಕನಿಗೆ,

..................................

ದಿನಾಂಕ.................................ದಿಂದ ದಿನಾಂಕ................................ರ ವರೆಗಿನ ವಾರಕ್ಕಾಗಿ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 4ನೇ ಪ್ರಕರಣ ಮತ್ತು ಪ್ರಕರಣ 4–ಕ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯ ಮೊಬಲಗೆಂದು...........................ರೂಪಾಯಿಗಳನ್ನು ಪದಗಳಲ್ಲಿ ಮಾತ್ರ ನಿರ್ಧರಿಸಲಾಗಿದೆಯೆಂದು ಮತ್ತು ಆ ತಿಂಗಳ ತೆರಿಗೆಯಾಗಿ............................................ರೂಪಾಯಿಗಳನ್ನು .............................ಪದಗಳಲ್ಲಿ...........................ಮೊತ್ತವನ್ನು (ಹೆಚ್ಚಿನ), ನೀವು ಸಂದಾಯ ಮಾಡಬೇಕೆಂದು ನಿಮಗೆ ಈ ಮೂಲಕ ನೋಟೀಸು ಕೊಡಲಾಗಿದೆ.

ಈ ಮೊಬಲಗನ್ನು, ಈ ಕೆಳಗೆ ರುಜು ಮಾಡಿರುವವರ ಹೆಸರಿಗೆ ಕ್ರಾಸು ಮಾಡಿದ ಚೆಕ್ಕಿನ ಮೂಲಕ ಅಥವಾ........................ದಲ್ಲಿನ ಸರ್ಕಾರಿ ಖಜಾನೆಗೆ ಜಮೆ ಮಾಡುವ ಮೂಲಕ ಈ ನೋಟೀಸಿನ ಜಾರಿಯ ದಿನಾಂಕದಿಂದ ಏಳು ದಿವಸಗಳೊಳಗಾಗಿ ಸಂದಾಯ ಮಾಡತಕ್ಕದ್ದು. ಅದಕ್ಕೆ ತಪ್ಪಿದರೆ ಸದರಿ ಮೊಬಲಗು ಮತ್ತು ದಂಡವನ್ನು ಭೂಕಂದಾಯದ ಬಾಕಿಯಾಗಿದ್ದರೆ, ಹೇಗೋ ಹಾಗೆ ನನ್ನಿಂದ ವಸೂಲಿ ಮಾಡಲಾಗುವುದು.

ಸ್ಥಳ: ಮನೋರಂಜನಾ ತೆರಿಗೆ ಅಧಿಕಾರಿ

ದಿನಾಂಕ:

**ಟಿಪ್ಪಣಿ:–** ಸಂದಾಯವನ್ನು ಕ್ರಾಸು ಮಾಡಿದ ಚೆಕ್ಕಿನ ಮೂಲಕ ಮಾಡಿದ್ದರೆ, ಆ ಚೆಕ್ಕು ಕರ್ನಾಟಕ ಖಜಾನೆ ಸಂಹಿತೆಯ ಮೇರೆಗೆ ಸಂಬಂಧಪಟ್ಟ ಸರ್ಕಾರಿ ಖಜಾನೆಯು ಅಂಗೀಕರಿಸುವಂಥದ್ದಾಗಿರಬೇಕು.

## ನಮೂನೆ–XII

## ಅಂತಿಮ ನಿರ್ಧರಣೆ ಮತ್ತು ತಗಾದೆ ನೋಟೀಸು

[29–ಜ(3)ನೇ ನಿಯಮವನ್ನು ನೋಡಿ]

ಗೆ,

..........................

..........................

(ಮಾಲೀಕ ಅಥವಾ ಕ್ರಮಬದ್ಧವಾಗಿ ಅಧಿಕೃತನಾದ ಪ್ರತಿನಿಧಿ)

.....................ದಿಂದ........................ವರೆಗಿನ ಅವಧಿಗಾಗಿ.........................ರೂಪಾಯಿಗಳ ತೆರಿಗೆ ಮತ್ತು................. ರೂಪಾಯಿಗಳ ಅಧಿಭಾರ ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ...................ರೂಪಾಯಿಗಳ (ಮತ್ತು ಹೆಚ್ಚುವರಿ ತೆರಿಗೆ) (ರೂಪಾಯಿಗಳನ್ನು......................ಪದಗಳಲ್ಲಿ) 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ ಮೇರೆಗೆ ಅಂತಿಮವಾಗಿ ನಿಮ್ಮ ಬಗ್ಗೆ ನಿರ್ಧಾರಣೆ ಮಾಡಲಾಗಿದೆಯೆಂದು ಮತ್ತು ಮೇಲಿನ ಅವಧಿಗೆ ಸಂಬಂಧಿಸಿದಂತೆ ತೆರಿಗೆ ಮತ್ತು ಅಧಿಕರ (ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲೆ ಹೆಚ್ಚಿನ ತೆರಿಗೆಯ) ಅಧಿಕಾರದ ಬಗ್ಗೆ ನೀನು ಈಗಾಗಲೇ ಮಾಡಿರುವ ಸಂದಾಯದ ಒಟ್ಟು ಮೊಬಲಗನ್ನು ಕಳೆದ ತರುವಾಯ ತರಿಗೆಯಾಗಿ.........................ರೂಪಾಯಿಗಳನ್ನು ಮತ್ತು ಅಧಿಭಾರವಾಗಿ....................ರೂಪಾಯಿಗಳನ್ನು ಮತ್ತು ಚಲನಚಿತ್ರ ಪ್ರದರ್ಶನಗಳ ಮೇಲಿನ ಹೆಚ್ಚಿನ ತೆರಿಗೆಯಾಗಿ...................... ರೂಪಾಯಿಗಳನ್ನು ಮಾತ್ರ ಮತ್ತಷ್ಟು ಮೊತ್ತವನ್ನು ಸಂದಾಯ ಮಾಡಬೇಕೆಂಬ ಈ ನೋಟೀಸನ್ನು ದಯವಿಟ್ಟು ತೆಗೆದುಕೊಳ್ಳಿ. ಈ ಬಾಕಿ ಮೊಬಲಗನ್ನು ಈ ನೋಟೀಸು ಜಾರಿಯಾದ ದಿನಾಂಕದಿಂದ ಒಂದು ವಾರದೊಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಮನಿಯಾರ್ಡರು ಮೂಲಕ ಅಥವಾ

ಈ ಕೆಳಗೆ ರುಜುಮಾಡಿರುವವರ ಹೆಸರಿಗೆ ಕ್ರಾಸು ಮಾಡಿದ ಚೆಕ್ಕಿನ ಮೂಲಕ ಅಥವಾ..................ನ ಸರ್ಕಾರಿ ಖಜಾನೆಗೆ ಜಮೆ ಮಾಡುವುದರ ಮೂಲಕ ಅಥವಾ....................ನ ಮನೋರಂಜನಾ ತೆರಿಗೆ ಅಧಿಕಾರಿಗೆ ಕ್ರಾಸು ಮಾಡಿದ ಅಂಚೆ ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸತಕ್ಕುದು. ತಪ್ಪಿದಲ್ಲಿ, ಸದರಿ ಮೊಬಲಗುಗಳನ್ನು ಈ ಅಧಿನಿಯಮದ ಮೇರೆಗೆ ಉಪಬಂಧಿಸಿದ ಸಂಗ್ರಹಣೆಯ ಯಾವುದೇ ವಿಭಾಗಕ್ಕೆ ಬಾಧಕವಾಗದಂತೆ ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡಲಾಗುವುದು.

ಮನೋರಂಜನಾಧಿಕಾರಿ,

...................................

**ಟಿಪ್ಪಣಿ:–** ಸಂದಾಯವು ಚೆಕ್ಕಿನ ಮೂಲಕ ಆಗಿರುವಲ್ಲಿ, ಆ ಚೆಕ್ಕು ಕರ್ನಾಟಕ ಆರ್ಥಿಕ ಸಂಹಿತೆಯ ಮೇರೆಗೆ ಸಂಬಂಧಿಸಿದ ಸರ್ಕಾರಿ ಖಜಾನೆಯು ಸ್ವೀಕರಿಸುವಂಥದ್ದಾಗಿರಬೇಕು.

## ನಮೂನೆ XIII

**(47–ಕ ನಿಯಮ ನೋಡಿ)**

**ಅನುಮತಿ ಪತ್ರದ ಮಂಜೂರಾತಿಗಾಗಿ ಭದ್ರತಾ ಪತ್ರ**

____________ಮನೋರಂಜನಾ ತೆರಿಗೆ ಅಧಿಕಾರಿಯ ಮುಂದೆ ಮಾಲೀಕನು ಕರ್ನಾಟಕ ರಾಜ್ಯಪಾಲರ ಮತ್ತು ಅವನ ಪದದಲ್ಲಿನ ಉತ್ತರಾಧಿಕಾರಿಗಳ ಮತ್ತು ಅವನಿಂದ ಹಸ್ತಾಂತರ ಪಡೆದವರ ಹೆಸರಿಗೆ ಬರೆದುಕೊಟ್ಟ ಭದ್ರತಾ ಪತ್ರ;

____________ದ (ಚಿತ್ರಮಂದಿರದ ಹೆಸರು) ಮಾಲೀಕನಾದ ಶ್ರೀ_______________ನು ಮೇಲೆ ಹೇಳಿದ ಮನೋರಂಜನೆ ಸ್ಥಳದಲ್ಲಿ ನಡೆಸಿದ ಮನೋರಂಜನೆಗಳಿಗೆ ಸಂಬಂಧಿಸಿದಂತೆ ವಿವರ ಪಟ್ಟಿಕೆಗಳ ಮೇಲೆ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಅನುಮತಿಯ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿರುವುದರಿಂದ ಮತ್ತು 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಭದ್ರತೆಯನ್ನು ಒದಗಿಸಲು ಒಪ್ಪಿಕೊಂಡಿರುವುದರಿಂದ;

____________ದ (ಚಿತ್ರಮಂದಿರದ ಹೆಸರು) ಮಾಲೀಕನಾದ ಶ್ರೀ_____________ನು ಮೇಲೆ ಹೇಳಿದ ಮನೋರಂಜನೆ ಸ್ಥಳದಲ್ಲಿ ನಡೆಸಿದ ಮನೋರಂಜನೆಗಳಿಗೆ ಸಂಬಂಧಿಸಿದಂತೆ ವಿವರ ಪಟ್ಟಿಕೆಗಳ ಮೇಲೆ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಅನುಮತಿಯ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿರುವುದರಿಂದ ಮತ್ತು 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಭದ್ರತೆಯನ್ನು ಒದಗಿಸಲು ಒಪ್ಪಿಕೊಂಡಿರುವುದರಿಂದ;

____________ರೂಪಾಯಿಗಳ ಮೊತ್ತದ ಭದ್ರತೆಯನ್ನು ಒದಗಿಸಲು ಸದರಿ ಅರ್ಜಿದಾರನನ್ನು ಕೇಳಲಾಗಿದ್ದು ಅದು ಪರಿಶೀಲನೆಯಲ್ಲಿರುವುದರಿಂದ, ಸದರಿ ಅರ್ಜಿದಾರನನ್ನು __________ರೂಪಾಯಿಗಳ ಮೊತ್ತದ ಭದ್ರತೆಯನ್ನು ಒದಗಿಸುವಂತೆ ಕೋರಲಾಗಿರುವುದರಿಂದ ಮತ್ತು ಅದಕ್ಕೆ ಪ್ರತಿಫಲವಾಗಿ ನಾನು/ನಾವು____________ಈ ಮೂಲಕ ವೈಯಕ್ತಿಕವಾಗಿ ನಾನೇ/ನಾವೇ ನನ್ನ/ನಮ್ಮ ವಾರಸುದಾರರು ಉತ್ತರಾಧಿಕಾರಿಗಳು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳು_____________ ರೂಪಾಯಿಗಳ ಮೊತ್ತವನ್ನು ಕರ್ನಾಟಕ ಸರ್ಕಾರಕ್ಕೆ ಸಂದಾಯ ಮಾಡಲು ಜವಾಬ್ದಾರನಾಗಿರುತ್ತೇನೆ/ವೆ ಮತ್ತು ಬದ್ಧನಾಗಿದ್ದೇನೆ/ವೆ ಮತ್ತು ಕರ್ನಾಟಕ ಸರ್ಕಾರಕ್ಕೆ____________ರೂಪಾಯಿಗಳ ಮೊತ್ತದ ಸಂದಾಯಕ್ಕಾಗಿ ಇದಕ್ಕೆ ಅನುಬಂಧಿಸಿದ ಅನುಸೂಚಿಯಲ್ಲಿ ಸ್ವತ್ತುಗಳನ್ನು ಅಡಮಾನ ಮಾಡುತ್ತೇನೆ/ವೆ/ ಋಣಭಾರ ಹೊರಿಸುತ್ತೇನೆ/ವೆ ಮತ್ತು ಮೇಲೆ ಹೇಳಿದ ಮನೋರಂಜನೆಯ ಸ್ಥಳಕ್ಕೆ ಸಂಬಂಧಿಸಿದಂತೆ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ ಮೇರೆಗೆ ಮನೋರಂಜನಾ ತೆರಿಗೆ ಅಧಿಕಾರಿ ಅಥವಾ ಇತರ ಯಾವುದೇ ಸಕ್ಷಮ ಪ್ರಾಧಿಕಾರಿಯು ನಿರ್ಧರಿಸಿದ ಮನೋರಂಜನಾ ತೆರಿಗೆ, ಅಧಿಭಾರ, ಹೆಚ್ಚಿನ ತೆರಿಗೆ, ರಾಜಿ ಫೀಜು, ದಂಡ ಅಥವಾ ಇತರ ಯಾವುದೇ ಮೊಬಲಗಿನ ಸಂದಾಯದ ಬಗ್ಗೆ ಎಲ್ಲ ನಿರ್ದೇಶನಗಳನ್ನು ಹಿಂದೆ ಹೇಳಿದ ಅರ್ಜಿದಾರನು ಪಾಲಿಸಿದರೆ ಈ ಬಂಧ ಪತ್ರವು ಶೂನ್ಯವಾಗತಕ್ಕದ್ದು ಮತ್ತು ಪರಿಣಾಮಕಾರಿಯಲ್ಲವೆಂದು ಅನ್ಯಥಾ ಅದು ಪೂರ್ಣ ಜಾರಿಯಲ್ಲಿ ಮತ್ತು ಪರಿಣಾಮಕಾರಿಯಾಗಿರತಕ್ಕದ್ದೆಂದು ಒಡಂಬಡಿಕೆ ಮಾಡಿಕೊಳ್ಳುತ್ತೇನೆ/ತ್ತೇವೆ/ ಇದಕ್ಕೆ ಸಾಕ್ಷಿಯಾಗಿ–ಆದ ನಾನು/ನಾವು 19 ದಿವಸದಂದು ನನ್ನ/ನಮ್ಮ ರುಜು ಮತ್ತು ಮೊಹರನ್ನು ಇದಕ್ಕೆ ಹಾಕಿಸಿದ್ದೇವೆ/ನೆ.

ಸಾಕ್ಷಿದಾರರು

(1) ಅರ್ಜಿದಾರ

(2) ಜಾಮೀನುದಾರ

**ಅಧಿಸೂಚನೆ**

**ಸಂಖ್ಯೆ ಆರ್.ಡಿ. 95 ಇ.ಎನ್.ಎಕ್ಸ್. 58–2, ಬೆಂಗಳೂರು, ದಿನಾಂಕ 1ನೇ ಜನವರಿ 1959**

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ (1958ರ ಕರ್ನಾಟಕ ಅಧಿನಿಯಮ ಸಂಖ್ಯೆ 36) 16ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ಅನುಸೂಚಿಯ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಗಳನ್ನು, ಅದರ (3)ನೇ ಅಂಕಣದಲ್ಲಿರುವ ಸಂವಾದಿ ನಮೂದನೆಯಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಿಗಳಿಗೆ ಈ ಮೂಲಕ ಪ್ರತ್ಯಾಯೋಜಿಸುತ್ತದೆ.

**ಅನುಸೂಚಿ**

| ಕ್ರಮಸಂಖ್ಯೆ | ಅಧಿಕಾರಿಗಳು | ಯಾವ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿದೆಯೋ ಆ ಅಧಿಕಾರಿಗಳು |
|---|---|---|
| 1. | (* * *) | (* * *) |
| 2. | 8ನೇ ಪ್ರಕರಣದ ಮೇರೆಗಿನ ಅಧಿಕಾರ | ವಿಭಾಗದ ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರ್ |

**ಅಧಿಸೂಚನೆ ಸಂಖ್ಯೆ ಎಫ್.ಡಿ. 211 ಸಿ.ಇ.ಎಕ್ಸ್. 73, ದಿನಾಂಕ 29ನೇ ಸೆಪ್ಟಂಬರ್ 1976**

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ (1958ರ ಕರ್ನಾಟಕ ಅಧಿನಿಯಮ 30) 16ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, 10ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕಕ) ಖಂಡದ ಪರಂತುಕದ ಮೇರೆಗಿನ ತನ್ನ ಅಧಿಕಾರಗಳನ್ನು ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರ್‌ಗಳಿಗೆ ಅನುಕ್ರಮ ಅಧಿಕಾರ ವ್ಯಾಪ್ತಿಯೊಳಗೆ ಈ ಮೂಲಕ ಪ್ರತ್ಯಾಯೋಜಿಸುತ್ತದೆ.

**ಹಣಕಾಸು ಸಚಿವಾಲಯ**

**ಅಧಿಸೂಚನೆ ಸಂಖ್ಯೆ ಎಫ್‌ಡಿ 183 ಸಿಇಎಕ್ಸ್ 81 ಬೆಂಗಳೂರು, ದಿನಾಂಕ 20ನೇ ಜುಲೈ 1981**

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ (1958ರ ಕರ್ನಾಟಕ ಅಧಿನಿಯಮ, 30) 10ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕ) ಖಂಡವು ಅದಕ್ಕಾಗಿನ ಅಧಿಕಾರ ವ್ಯಾಪ್ತಿಯ ಪ್ರದೇಶಗಳನ್ನು ನಿರ್ದಿಷ್ಟಪಡಿಸಿ, ಸದರಿ ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಅಧಿಕಾರಗಳನ್ನು ಅಧಿಕೃತಗೊಳಿಸಲು ಸರ್ಕಾರಕ್ಕೆ ಅಧಿಕಾರಗಳನ್ನು ಪ್ರಧಾನ ಮಾಡುವುದರಿಂದ;

ಮತ್ತು ತೆರಿಗೆಯನ್ನು ತಪ್ಪಿಸಿಕೊಳ್ಳುವುದನ್ನು ತಡೆಯುವುದರ ಬಗ್ಗೆ ವಿಶೇಷ ಗಮನಕೊಟ್ಟು ಈ ಅಧಿನಿಯಮದ ಸರಿಯಾದ ಆಡಳಿತಕ್ಕೆ ಅನುಕೂಲ ಮಾಡಿಕೊಡಲು ಕಾಲಕಾಲಕ್ಕೆ ಸರ್ಕಾರವು ಅಧಿಸೂಚನೆಗಳನ್ನು ಹೊರಡಿಸಿರುವುದರಿಂದ;

ಮತ್ತು ಈ ಬಗ್ಗೆ ಕ್ರೋಢೀಕೃತ ಅಧಿಸೂಚನೆಯನ್ನು ಹೊರಡಿಸುವುದು ವಿಹಿತವಾಗಿರುವುದರಿಂದ ಕರ್ನಾಟಕ ಸರ್ಕಾರವು, 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ 10ನೇ ಪ್ರಕರಣದ (1)ನೇ ಉಪ-ಪ್ರಕರಣದ (ಕ) ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಗಿನ ಕೋಷ್ಟಕದ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಿಗಳು. ಅದರ ಮೂರನೇ ಅಂಕಣದಲ್ಲಿ ನಮೂದಿಸಿದ ಪ್ರದೇಶಗಳೊಳಗೆ ಸದರಿ ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಅಧಿಕೃತಗೊಳಿಸುತ್ತಾರೆ.

**ಕೋಷ್ಟಕ**

| ಕ್ರಮ ಸಂಖ್ಯೆ | ಅಧಿಕಾರಿಗಳು | ಪ್ರದೇಶಗಳು |
|---|---|---|
| 1 | 2 | 3 |
| 1 | ವಾಣಿಜ್ಯ ತೆರಿಗೆಗಳ ಕಮೀಷನರ್ | ಇಡೀ ಕರ್ನಾಟಕ ರಾಜ್ಯ |
| 2 | ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರ್ (ಗುಪ್ತ ವಾರ್ತೆ) ದಕ್ಷಿಣ ವಲಯ, ಬೆಂಗಳೂರು. | |
| 3 | ವಾಣಿಜ್ಯ ತೆರಿಗೆ ಅಧಿಕಾರಿಗಳು (ಗುಪ್ತ ವಾರ್ತೆ) ದಕ್ಷಿಣ ವಲಯ, ಬೆಂಗಳೂರು. | |
| 4 | ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು (ಗುಪ್ತ ವಾರ್ತೆ) ಈ ಪದವು ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು (ಸಂಚಾರಿ ದಳಗಳು) ಇದನ್ನು ಒಳಗೊಳ್ಳುವುದು. | |
| 5 | ವಾಣಿಜ್ಯ ತೆರಿಗೆ ಪರಿಶೀಲಕರು (ಸಂಚಾರಿ ದಳಗಳು) | |
| 6 | ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರ್ | 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗಿನ ಅವರ ಅನುಕ್ರಮ ಅಧಿಕಾರ ವ್ಯಾಪ್ತಿಗಳೊಳಗೆ |
| 7 | ವಾಣಿಜ್ಯ ತೆರಿಗೆಗಳ ಸಹಾಯಕ ಕಮೀಷನರ್ | |
| 8 | ಗುಪ್ತವಾರ್ತೆ ವಿಭಾಗದಲ್ಲಿನ ವಾಣಿಜ್ಯ ತೆರಿಗೆ ಅಧಿಕಾರಿಗಳು ಸೇರಿ ಆದರೆ ಕ್ರಮಸಂಖ್ಯೆ 3ರಲ್ಲಿ ನಿರ್ದಿಷ್ಟಪಡಿಸಿರುವಂಥವರನ್ನು ಹೊರತುಪಡಿಸಿ ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು | |
| 9 | ಗುಪ್ತವಾರ್ತೆ ವಿಭಾಗದಲ್ಲಿನ ವಾಣಿಜ್ಯ ತೆರಿಗೆ ಅಧಿಕಾರಿಗಳು ಸೇರಿ ಆದರೆ ಕ್ರಮಸಂಖ್ಯೆ 4ರಲ್ಲಿ ನಿರ್ದಿಷ್ಟಪಡಿಸಿರುವಂಥವರನ್ನು ಹೊರತುಪಡಿಸಿ, ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು. | |
| 10 | ಕೃಷಿ ಆದಾಯ ತೆರಿಗೆ ಅಧಿಕಾರಿಗಳು | |
| 11 | ಸಹಾಯಕ ಕೃಷಿ ಆದಾಯ ತೆರಿಗೆ ಅಧಿಕಾರಿಗಳು | |
| 12 | ವಾಣಿಜ್ಯ ತೆರಿಗೆ ಪರಿಶೀಲಕರು | |

| | | |
|---|---|---|
| 13 | ಸಬ್ ಇನ್‌ಸ್ಪೆಕ್ಟರ್ ದರ್ಜೆಗಿಂತ ಕಡಿಮೆಯಿಲ್ಲದ ಪೊಲೀಸ್ ಅಧಿಕಾರಿಗಳು | ಅವರ ಅನುಕ್ರಮ ವ್ಯಾಪ್ತಿಯೊಳಗೆ |
| 14 | ಕರ್ನಾಟಕ ರಾಜ್ಯ ಜಾಗೃತ ಆಯೋಗದ ತನಿಖಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಬ್ ಇನ್‌ಸ್ಪೆಕ್ಟರ್ ದರ್ಜೆಗೆ ಕಡಿಮೆಯಿಲ್ಲದ ಪೊಲೀಸ್ ಇಲಾಖೆಯ ಅಧಿಕಾರಿಗಳು. | |

**ಹಣಕಾಸು ಸಚಿವಾಲಯ**

**ಅಧಿಸೂಚನೆ ಸಂಖ್ಯೆ ಎಫ್‌ಡಿ 183 ಸಿಇಎಕ್ಸ್ 81, ಬೆಂಗಳೂರು, ದಿನಾಂಕ 3ನೇ ನವೆಂಬರ್ 1981**

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ (1958ರ ಕರ್ನಾಟಕ ಅಧಿನಿಯಮ 30 (10)ನೇ ಉಪಪ್ರಕರಣದ (ಕ) ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮತ್ತು ದಿನಾಂಕ 20ನೇ ಜುಲೈ 1981ರ ಅಧಿಸೂಚನೆ ಸಂಖ್ಯೆ ಎಫ್‌ಡಿ 183 ಸಿಇಎಕ್ಸ್ 81ನ್ನು ಭಾಗಶಃ ಮಾರ್ಪಾಟುಗೊಳಿಸಿ, ಕರ್ನಾಟಕ ಸರ್ಕಾರವು, ಈ ಕೆಳಕಂಡ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟ ಪಡಿಸಿದ ಅಧಿಕಾರಗಳನ್ನು ಅದರ (3)ನೇ ಅಂಕಣದಲ್ಲಿ ನಮೂದಿಸಿದ ಪ್ರದೇಶದೊಳಗೆ ಸದರಿ ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು, ಪ್ರದೇಶದೊಳಗೆ ಈ ಮೂಲಕ ಅಧಿಕೃತಗೊಳಿಸುತ್ತದೆ.

**ಕೋಷ್ಟಕ**

| ಕ್ರಮ ಸಂಖ್ಯೆ | ಅಧಿಕಾರಿಗಳು | ಪ್ರದೇಶಗಳು |
|---|---|---|
| 1 | 2 | 3 |
| 1 | ವಾಣಿಜ್ಯ ತೆರಿಗೆಗಳ ಕಮೀಷನರ್ | ಇಡೀ ಕರ್ನಾಟಕ ರಾಜ್ಯ |
| 2 | ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರ್ (ಗುಪ್ತ ವಾರ್ತೆ) ದಕ್ಷಿಣ ವಲಯ, ಬೆಂಗಳೂರು | |
| 3 | ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರ್ (ಗುಪ್ತ ವಾರ್ತೆ) ಉತ್ತರ ವಲಯ, ಬೆಳಗಾಂ | |
| 4 | ಎಲ್ಲ ವಾಣಿಜ್ಯ ತೆರಿಗೆ ಅಧಿಕಾರಿಗಳು (ಗುಪ್ತ ವಾರ್ತೆ) ದಕ್ಷಿಣ ವಲಯ, ಬೆಂಗಳೂರು | |
| 5 | ಎಲ್ಲ ವಾಣಿಜ್ಯ ತೆರಿಗೆ ಅಧಿಕಾರಿಗಳು (ಗುಪ್ತ ವಾರ್ತೆ) ಉತ್ತರ ವಲಯ, ಬೆಳಗಾಂ | |
| 6 | ದಕ್ಷಿಣ ವಲಯ, ಬೆಂಗಳೂರು ಅಥವಾ ಉತ್ತರ ವಲಯ, ಬೆಳಗಾಂ ಇಲ್ಲಿ ಕೆಲಸ ಮಾಡುತ್ತಿರುವ ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು (ಸಂಚಾರಿ ದಳ) ಒಳಗೊಂಡ ಎಲ್ಲ ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು (ಗುಪ್ತ ವಾರ್ತೆ) | |

| | | |
|---|---|---|
| 7 | ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರ್ (ಗುಪ್ತ ವಾರ್ತೆ)<br>ವಾಣಿಜ್ಯ ತೆರಿಗೆ ಅಧಿಕಾರಿಗಳು (ಗುಪ್ತ ವಾರ್ತೆ)<br>ವಾಣಿಜ್ಯ ತೆರಿಗೆ ಅಧಿಕಾರಿಗಳು (ಗುಪ್ತ ವಾರ್ತೆ);<br>ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು (ಸಂಚಾರಿ ದಳ)<br>ಕೆಲಸ ಮಾಡುತ್ತಿರುವ ಎಲ್ಲ ವಾಣಿಜ್ಯ ತೆರಿಗೆ ಪರಿವೀಕ್ಷಕರು | |
| 8 | ವಾಣಿಜ್ಯ ತೆರಿಗೆಗಳ ಎಲ್ಲ ಡೆಪ್ಯೂಟಿ ಕಮೀಷನರುಗಳು (ಆಡಳಿತ) | |
| 9 | ವಾಣಿಜ್ಯ ತೆರಿಗೆ ಎಲ್ಲ ಸಹಾಯಕ ಕಮೀಷನರುಗಳು | |
| 10 | ವಾಣಿಜ್ಯ ತೆರಿಗೆ ಅಧಿಕಾರಿಗಳು (ಗುಪ್ತ ವಾರ್ತೆ) ಒಳಗೊಂಡು ಅದರ ಮೇಲಿನ 4 ಮತ್ತು 5ನೇ ಕ್ರಮಸಂಖ್ಯೆಗಳಲ್ಲಿ ನಿರ್ದಿಷ್ಟಪಡಿಸಿರುವವರನ್ನು ಹೊರತುಪಡಿಸಿ, ಎಲ್ಲ ವಾಣಿಜ್ಯ ತೆರಿಗೆ ಅಧಿಕಾರಿಗಳು. | |
| 11 | ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು (ಗುಪ್ತವಾರ್ತೆ) ಆದರೆ ಮೇಲಿನ ಕ್ರಮಸಂಖ್ಯೆ 6ರಲ್ಲಿ ನಿರ್ದಿಷ್ಟಪಡಿಸಿರುವವರನ್ನು ಹೊರತುಪಡಿಸಿ ಎಲ್ಲ ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳು. | 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಮೇರೆಗಿನ ಅವರ ಅನುಕ್ರಮ ಅಧಿಕಾರ ವ್ಯಾಪ್ತಿಗಳೊಳಗೆ |
| 12 | ಮೇಲಿನ 8ರಿಂದ 11ರ ವರೆಗಿನ ಕ್ರಮಸಂಖ್ಯೆಗಳಲ್ಲಿ ನಿರ್ದಿಷ್ಟಪಡಿಸಿರುವ ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರುಗಳು (ಆಡಳಿತ) ವಾಣಿಜ್ಯ ತೆರಿಗೆಗಳ ಸಹಾಯಕ ಕಮೀಷನರುಗಳು, ವಾಣಿಜ್ಯ ತೆರಿಗೆ ಅಧಿಕಾರಿಗಳು ಮತ್ತು ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ಲಗತ್ತಾದ ಎಲ್ಲ ವಾಣಿಜ್ಯ ತೆರಿಗೆ ಪರಿಶೀಲಕರು. | |
| 13 | ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ (ಸಂಚಾರಿ ದಳ). ದಾವಣಗೆರೆ ಮತ್ತು ಅವನಿಗೆ ಲಗತ್ತಾದ ವಾಣಿಜ್ಯ ತೆರಿಗೆ ಪರಿಶೀಲಕರು. | ಬಳ್ಳಾರಿ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳು |
| 13–ಕ | ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ (ಸಂಚಾರಿ ದಳ) ಗುಲ್ಬರ್ಗಾ ಮತ್ತು ಅವನಿಗೆ ಲಗತ್ತಾದ ವಾಣಿಜ್ಯ ತೆರಿಗೆ ಪರಿಶೀಲಕರು. | ರಾಯಚೂರು, ಕಲ್ಬುರ್ಗಿ ಮತ್ತು ಬೀದರ್ ಜಿಲ್ಲೆಗಳು. |
| 13–ಖ | ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ (ಸಂಚಾರಿ ದಳ) ಮೈಸೂರು ಮತ್ತು ಅವನಿಗೆ ಲಗತ್ತಾದ ವಾಣಿಜ್ಯ ತೆರಿಗೆ ಪರಿಶೀಲಕರು. | ಮೈಸೂರು, ಮಂಡ್ಯ, ಹಾಸನ ಮತ್ತು ಚಿಕ್ಕಮಗಳೂರು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು. |

| | | |
|---|---|---|
| | **ಕಂದಾಯ ಅಧಿಕಾರಿಗಳು** | ಅವರ ಅನುಕ್ರಮ ಅಧಿಕಾರ ವ್ಯಾಪ್ತಿಯೊಳಗೆ. |
| 14 | ಜಿಲ್ಲೆಗಳ ಜಿಲ್ಲಾಧಿಕಾರಿಗಳು. | |
| 15 | ಕಂದಾಯ ಉಪ ವಿಭಾಗಗಳ ಅಸಿಸ್ಟೆಂಟ್ ಕಮೀಷನರುಗಳು. | |
| 16 | ಎಲ್ಲಾ ತಾಲ್ಲೂಕುಗಳ ತಹಸೀಲ್ದಾರರು. | |
| | **ನಿಗಮ ಮತ್ತು ಪೌರಸಭೆಗಳು** | ಅವರ ಅನುಕ್ರಮ ಅಧಿಕಾರ ವ್ಯಾಪ್ತಿಯೊಳಗೆ. |
| 17 | ಎಲ್ಲ ಪೌರಸಭಾ–ನಿಗಮಗಳ ಮತ್ತು ನಗರ ಪೌರ ಸಭೆಗಳ ಕಮೀಷನರು. | |
| 18 | ಪಟ್ಟಣ ಪೌರಸಭೆಗಳ ಚೀಫ್ ಆಫೀಸರುಗಳು. | |
| | **ಪೋಲೀಸರು ಇಲಾಖೆಯ ಅಧಿಕಾರಿಗಳು** | ಅವರ ಅನುಕ್ರಮ ಅಧಿಕಾರ ವ್ಯಾಪ್ತಿಯೊಳಗೆ. |
| 19 | ಸಬ್ ಇನ್ಸ್‌ಪೆಕ್ಟರುಗಳ ದರ್ಜೆಗಿಂತ ಕಡಿಮೆಯಲ್ಲದ ಪೊಲೀಸ್ ಅಧಿಕಾರಿಗಳು. | |
| 20 | ಕರ್ನಾಟಕ ರಾಜ್ಯ ಜಾಗೃತ ಆಯೋಗದ ತನಿಖಾ ವಿಭಾಗಕ್ಕೆ ಲಗತ್ತಾದ ಸಬ್ ಇನ್ಸ್‌ಪೆಕ್ಟರುಗಳ ದರ್ಜೆಗಿಂತ ಕಡಿಮೆಯಲ್ಲದ ಪೊಲೀಸ್ ಅಧಿಕಾರಿಗಳು. | |

**ಹಣಕಾಸು ಸಚಿವಾಲಯ**

**ಅಧಿಸೂಚನೆ ಸಂಖ್ಯೆ ಎಫ್‌ಡಿ 183 ಸಿಇಎಕ್ಸ್ 81, ಬೆಂಗಳೂರು, ದಿನಾಂಕ 23ನೇ ಡಿಸೆಂಬರ್ 1981.**

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ (1958ರ ಕರ್ನಾಟಕ ಅಧಿನಿಯಮ, 30) 10ನೇ ಪ್ರಕರಣದ (1)ನೇ ಉಪಪ್ರಕರಣದ (ಕ) ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ದಿನಾಂಕ 3ನೇ ನವೆಂಬರ್ 1981ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯ ಭಾಗ IV2–ಸಿ(ii)ರಲ್ಲಿ ಪ್ರಕಟಿಸಿದ ದಿನಾಂಕ 3ನೇ ನವೆಂಬರ್ 1981ರ ಅಧಿಸೂಚನೆ ಸಂಖ್ಯೆ ಎಫ್‌ಡಿ 183 ಸಿಇಎಕ್ಸ್ 81ಕ್ಕೆ ಈ ಕೆಳಕಂಡ ತಿದ್ದುಪಡಿಗಳನ್ನು ಈ ಮೂಲಕ ಮಾಡುತ್ತದೆ ಎಂದರೆ:–

ಸದರಿ ಅಧಿಸೂಚನೆ ಕೋಷ್ಟಕದಲ್ಲಿ ಕ್ರಮಸಂಖ್ಯೆ 13ರಲ್ಲಿನ ನಮೂದುಗಳ ತರುವಾಯ ಈ ಕೆಳಕಂಡವುಗಳನ್ನು ಸೇರಿಸತಕ್ಕದ್ದು. ಎಂದರೆ:–

| | | |
|---|---|---|
| 13–ಕ | ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ (ಸಂಚಾರಿ ದಳ) ಕಲ್ಬುರ್ಗಿ ಮತ್ತು ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ (ಸಂಚಾರಿ ದಳ) ಕಲ್ಬುರ್ಗಿ ಇವರಿಗೆ ಲಗತ್ತಿಸಿದ ವಾಣಿಜ್ಯ ತೆರಿಗೆ ಪರಿಶೀಲಕರು. | ಗುಲ್ಬರ್ಗಾ, ಬೀದರ್, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳು. |
| 13–ಖ | ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ (ಸಂಚಾರಿ ದಳ) ಮೈಸೂರು ಮತ್ತು ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ (ಸಂಚಾರಿ ದಳ) ಮೈಸೂರು ಇವರಿಗೆ ಲಗತ್ತಿಸಿದ ವಾಣಿಜ್ಯ ತೆರಿಗೆ ಪರಿಶೀಲಕರು. | ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳು. |

**ನಮೂನೆ–**

**(47–ರ ನಿಯಮ ನೋಡಿ)**

**ಅನುಮತಿ ಪತ್ರದ ಮಂಜೂರಾತಿಗಾಗಿ ಭದ್ರತಾ ಪತ್ರ**

____________ಮನೋರಂಜನಾ ತೆರಿಗೆ ಅಧಿಕಾರಿಯ ಮುಂದೆ ಮಾಲೀಕನು ಕರ್ನಾಟಕ ರಾಜ್ಯಪಾಲರ ಮತ್ತು ಅವನ ಪದದಲ್ಲಿನ ಉತ್ತರಾಧಿಕಾರಿಗಳ ಮತ್ತು ಅವನಿಂದ ಹಸ್ತಾಂತರ ಪಡೆದವರ ಹೆಸರಿಗೆ ಬರೆದು ಕೊಟ್ಟ ಭದ್ರತಾ ಪತ್ರ.

__________ದ (ಚಿತ್ರ ಮಂದಿರದ ಹೆಸರು) ಮಾಲೀಕನಾದ ಶ್ರೀ____________ನು ಮೇಲೆ ಹೇಳಿದ ಮನೋರಂಜನೆ ಸ್ಥಳದಲ್ಲಿ ನಡೆಸಿದ ಮನೋರಂಜನೆಗಳಿಗೆ ಸಂಬಂಧಿಸಿದಂತೆ ವಿವರ ಪಟ್ಟಿಕೆಗಳ ಮೇಲೆ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಅನುಮತಿಯ ಮಂಜೂರಾತಿಗಾಗಿ ಸಲ್ಲಿಸಿರುವುದರಿಂದ, ಮತ್ತು 1958ರ ಕರ್ನಾಟಕ ಮನೋರಂಜಾ ತೆರಿಗೆ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಭದ್ರತೆಯನ್ನು ಒದಗಿಸಲು ಒಪ್ಪಿಕೊಂಡಿರುವುದರಿಂದ;

ಸದರಿ ಅರ್ಜಿದಾರನನ್ನು___________ರೂಪಾಯಿಗಳ ಮೊತ್ತದ ಭದ್ರತೆಯನ್ನು ಒದಗಿಸುವಂತೆ ಕೋರಲಾಗಿರುವುದರಿಂದ, ಮತ್ತು ಅದಕ್ಕೆ ಪ್ರತಿಫಲವಾಗಿ ನಾನು/ನಾವು ____________ಈ ಮೂಲಕ ವೈಯಕ್ತಿಕವಾಗಿ ನಾನೇ/ನಾವೇ, ನನ್ನ/ನಮ್ಮ ವಾರಸುದಾರರು, ಉತ್ತರಾಧಿಕಾರಿಗಳು ಮತ್ತು ಕಾನೂನು ಸಮ್ಮತ ಪ್ರತಿನಿಧಿಗಳು__________ರೂಪಾಯಿಗಳ ಮೊತ್ತದ ಸಂದಾಯಕ್ಕಾಗಿ ಇದಕ್ಕೆ ಅನುಬಂಧಿಸಿದ ಅನುಸೂಚಿಯಲ್ಲಿ ಸ್ವತ್ತುಗಳನ್ನು ಅಡಮಾನ ಮಾಡುತ್ತೇನೆ/ವೆ, ಈ ಋಣಭಾರ ಹೊರಿಸುತ್ತೇನೆ. ಮತ್ತು ಮೇಲೆ ಹೇಳಿದ ಮನೋರಂಜನೆಯ ಸ್ಥಳಕ್ಕೆ ಸಂಬಂಧಿಸಿದಂತೆ 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ ಮೇರೆಗೆ ಮನೋರಂಜನಾ ತೆರಿಗೆ, ಅಧಿಕಾರಿ ಅಥವಾ ಇತರ ಯಾವುದೇ ಸಕ್ಷಮ ಪ್ರಾಧಿಕಾರಿಯು ನಿರ್ಧರಿಸಿದ ಮನೋರಂಜನಾ ತೆರಿಗೆ, ಅಧಿಭಾರ, ಹೆಚ್ಚಿನ ತೆರಿಗೆ ರಾಜಿ ಫೀಜು ಹಂಚುವುದಕ್ಕೆ ಅಥವಾ ಇತರ ಯಾವುದೇ ಮೂಲಧನ ಸಂದಾಯದ ಬಗ್ಗೆ ಎಲ್ಲ ನಿರ್ದೇಶನಗಳನ್ನು ಹಿಂದೆ ಹೇಳಿದ ಅರ್ಜಿದಾರನು ಪಾಲಿಸಿದರೆ ಈ ಬಂಧ ಪತ್ರವು ಶೂನ್ಯವಾಗತಕ್ಕದ್ದು ಮತ್ತು ಪರಿಣಾಮಕಾರಿಯಲ್ಲದುದು ಅನ್ಯಥಾ ಜಾರಿಯಲ್ಲಿ ಮತ್ತು ಪರಿಣಾಮಕಾರಿಯಾಗಿರತಕ್ಕದ್ದೆಂದು ಒಡಂಬಡಿಕೆ ಮಾಡಿಕೊಳ್ಳುತ್ತೇನೆ/ವೆ. ಇದಕ್ಕೆ ಸಾಕ್ಷಿಯಾಗಿ ಆದ ನಾನು/ನಾವು 19__________ದಿವಸದಂದು ನನ್ನ/ನಮ್ಮ ರುಜು ಮತ್ತು ಮೊಹರವನ್ನು ಇದಕ್ಕೆ ಹಾಕಿಸಿದ್ದೇವೆ/ನೆ.

ಅರ್ಜಿದಾರ

ಜಾಮೀನುದಾರ.

ಸಾಕ್ಷಿದಾರರು

(1)

(2)

**ಕರ್ನಾಟಕ ಅಧಿನಿಯಮ 1985ರ ಸಂಖ್ಯೆ 3**

**(1985ರ ಜನವರಿ 10ನೇ ದಿವಸದಂದು ಕರ್ನಾಟಕ ವಿಶೇಷ ರಾಜಪತ್ರದಲ್ಲಿ ಮೊದಲು ಪ್ರಕಟವಾಗಿದೆ.)**

**ಕರ್ನಾಟಕ ಮನೋರಂಜನಾ ತೆರಿಗೆ (ಎರಡನೇ ತಿದ್ದುಪಡಿ) ಅಧಿನಿಯಮ, 1983**

(1984ರ ಡಿಸೆಂಬರ್ ಇಪ್ಪತ್ತೆಂಟನೇ ದಿವಸದಂದು ರಾಷ್ಟ್ರಪತಿಯ ಅನುಮತಿ ಪಡೆಯಿತು.)

ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 ಇದನ್ನು ಮತ್ತುಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (ಕರ್ನಾಟಕ ಅಧಿನಿಯಮ 1958ರ ಸಂಖ್ಯೆ 30) ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಮೂವತ್ತನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡ ಅಧಿನಿಯಮಿತವಾಗತಕ್ಕದ್ದು;

1. **ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಮನೋರಂಜನಾ ತೆರಿಗೆ (ಎರಡನೇ ತಿದ್ದುಪಡಿ) ಅಧಿನಿಯಮ, 1983 ಎಂದು ಕರೆಯತಕ್ಕದ್ದು.

(2) 4,5 ಮತ್ತು 6ನೇ ಪ್ರಕರಣಗಳು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಉಳಿದ ಪ್ರಕರಣಗಳು ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ:–** ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ 1958 (ಕರ್ನಾಟಕ ಅಧಿನಿಯಮ 1958ರ ಸಂಖ್ಯೆ 30) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಿದೆ.)ರ 2ನೇ ಪ್ರಕರಣದಲ್ಲಿ–

(1) (ಗ) ಖಂಡದ ಬದಲು ಈ ಕೆಳಕಂಡ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು ಎಂದರೆ;

(ಗ) "ಅಸಿಸ್ಟೆಂಟ್ ಕಮೀಷನರ್" ಎಂದರೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ ಮೇರೆಗೆ ನೇಮಕಗೊಂಡ ವಾಣಿಜ್ಯ ತೆರಿಗೆಗಳ ಅಸಿಸ್ಟೆಂಟ್ ಕಮೀಷನರ್.

(2) (ಗಕ) ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು. ಎಂದರೆ;

(ಗಖ) "ಕಮೀಷನರ್" ಎಂದರೆ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ ಮೇರೆಗೆ ನೇಮಕಗೊಂಡ "ವಾಣಿಜ್ಯ ತೆರಿಗೆಗಳ ಕಮೀಷನರ್"

(3) (ಜ) ಖಂಡಕ್ಕೆ ಈ ಕೆಳಕಂಡ ವಿವರಣೆಯನ್ನು ಸೇರಿಸತಕ್ಕದ್ದು ಮತ್ತು 1982ರ ಜುಲೈ ಮೊದಲನೇ ದಿವಸದಂದು ಪರಿಣಾಮಳ್ಳಂತೆ ಅದನ್ನು ಸೇರಿಸಿರುವುದಾಗಿ ಭಾವಿಸತಕ್ಕದ್ದು ಎಂದರೆ:–

**ವಿವರಣೆ:–** "ಚಲನಚಿತ್ರ ಪ್ರದರ್ಶನ" ಎಂಬ ಪದವು "ವೀಡಿಯೋ ಪ್ರದರ್ಶನ"ವನ್ನು ಒಳಗೊಳ್ಳುತ್ತದೆ.

(4) (ಚ) ಖಂಡದ ತರುವಾಯ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು ಎಂದರೆ:–

(ಚಕ) "ಜಂಟಿ ಕಮೀಷನರ್" ಎಂದರೆ ಮಾರಾಟ ತೆರಿಗೆ ಅಧಿನಿಯಮ, 1957ರ ಮೇರೆಗೆ ನೇಮಕಗೊಂಡ ವಾಣಿಜ್ಯ ತೆರಿಗೆಗಳ ಜಂಟಿ ಕಮೀಷನರ್;

(5) (ಝ) ಖಂಡದಲ್ಲಿ (ii)ನೇ ಉಪಖಂಡದ ತರುವಾಯ ಈ ಕೆಳಕಂಡ ಉಪಖಂಡಗಳನ್ನು ಸೇರಿಸತಕ್ಕದ್ದು ಎಂದರೆ:–

(iii) ಮನೋರಂಜನೆಯ ಯಾವ ಸಾಮಾನ್ಯ ಅಥವಾ ಉತ್ತಮ ದೃಶ್ಯ ಅಥವಾ ಶ್ರವಣವನ್ನು ಯಾವ ಉಪಕರಣ ಅಥವಾ ಸಾಧನದ ಸಹಾಯವಿಲ್ಲದೇ ವ್ಯಕ್ತಿಯು ಪಡೆಯಲಾರನೋ ಆ ಸಾಮಾನ್ಯ ಅಥವಾ ಉತ್ತಮ ದೃಶ್ಯ ಅಥವಾ ಶ್ರವಣವನ್ನು ಪಡೆಯಲು ಅಂಥ ವ್ಯಕ್ತಿಯನ್ನು ಸಮರ್ಥಗೊಳಿಸುವಂಥ ಆ ಯಾವುದೇ ಉಪಕರಣ ಅಥವಾ ಸಾಧನದ ಕಡೆ ಅಥವಾ ಉಪಯೋಗಕ್ಕಾಗಿ ಮಾಡಿದ ಯಾವುದೇ ಸಂದಾಯ;

(iv) ಮನೋರಂಜನೆಗೆ ಪ್ರವೇಶ ಪಡೆಯಲು ಸಂದಾಯ ಯಾವುದಾದರೂ ಇದ್ದರೆ ಅದಕ್ಕೆ ಹೆಚ್ಚಿಗೆಯಾಗಿ ಮನೋರಂಜನೆಗೆ ಹಾಜರಾಗಲು ಅಥವಾ ಹಾಜರಿರುವುದನ್ನು ಮುಂದುವರೆಸುವುದಕ್ಕೆ ಷರತ್ತನ್ನಾಗಿಸಲು ವ್ಯಕ್ತಿಯನ್ನು ಅಗತ್ಯಪಡಿಸುವಂಥ ಮನೋರಂಜನೆಗೆ ಸಂಬಂಧಿಸಿದ ಇತರ ಯಾವುದಾದರೂ ಯಾವುದೇ ಉದ್ದೇಶಕ್ಕಾಗಿನ ಯಾವುದೇ ಸಂದಾಯ;

(v) ಡ್ರೈವ್–ಇನ್–ಥಿಯೇಟರ್ ಎಂಬ ಹೆಸರಿನ ಚಲನಚಿತ್ರದ ಸಭಾಂಗಣಕ್ಕೆ ಮೋಟಾರು ವಾಹನದ ಪ್ರವೇಶಕ್ಕಾಗಿನ ಯಾವುದೇ ಸಂದಾಯ.

(6) (ಝ) ಖಂಡದ ತರುವಾಯ ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

(ಝಕ) "ಮನೋರಂಜನಾ ಸ್ಥಳ" ಎಂದರೆ ಮನೋರಂಜನೆಯು ನಡೆಯುವ ಸ್ಥಳ ಮತ್ತು ಅದು ಟಿಕೆಟ್ಟು ಮಾರುವ ಕಛೇರಿ ಮತ್ತು ಮನೋರಂಜನೆಗೆ ಸಂಬಂಧಿಸಿದ ಲೆಕ್ಕ ಪತ್ರಗಳು ಮತ್ತು ಇತರೆ ದಸ್ತಾವೇಜುಗಳನ್ನು ಇಟ್ಟಿರುವಂಥ ಇತರ ಸ್ಥಳವನ್ನೂ ಒಳಗೊಳ್ಳುತ್ತದೆ.

**3. 3ಗ ಪ್ರಕರಣದ ತಿದ್ದುಪಡಿ:–** (1) ಮೂಲ ಅಧಿನಿಯಮದ 3ಗ ಪ್ರಕರಣವನ್ನು ಅದರ(1)ನೇ ಉಪ–ಪ್ರಕರಣವೆಂದು ಪುನರಂಕಿಸತಕ್ಕದ್ದು ಮತ್ತು ಹಾಗೆ ಪುನರಂಕಿಸಲಾದ (1)ನೇ ಉಪಪ್ರಕರಣದ ಪರಂತುಕದಲ್ಲಿ "ಅಂಥ ಚಿತ್ರವೂ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನೀಡಿದ ಪ್ರಶಸ್ತಿಯನ್ನು ಪಡೆದಿರುವಲ್ಲಿ" ಎಂಬ ಪದಗಳಿಗೆ ಬದಲಾಗಿ "ಅಂಥ ಚಲನಚಿತ್ರವೂ 1981ರ ಏಪ್ರಿಲ್ ಮೊದಲನೇ ದಿವಸದ ತರುವಾಯ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ಕೊಟ್ಟ ಅತ್ಯುತ್ತಮ ವಿಶೇಷ ಚಲನಚಿತ್ರ ಪ್ರಶಸ್ತಿ ಅಥವಾ ಯಾವುದೇ ರಾಜ್ಯ ಸರ್ಕಾರವು ಅಧಿಸೂಚಿಸಿದ ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದ ಪ್ರಶಸ್ತಿಯನ್ನು ಪಡೆದಿರುವಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) ಹಾಗೆ ಪುನರಂಕಿಸಲಾದ (1)ನೇ ಉಪ–ಪ್ರಕರಣದ ತರುವಾಯ ಆದರೆ ವಿವರಣೆಗೆ ಮುಂಚೆ ಈ ಕೆಳಕಂಡ ಉಪ–ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

(2) 3 ಮತ್ತು 3ಕ ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, 1981ರ ಏಪ್ರಿಲ್ ಮೊದಲ ದಿವಸದ ತರುವಾಯ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರವನ್ನು ಹೊರತುಪಡಿಸಿ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ಕೊಟ್ಟ ಪ್ರಶಸ್ತಿ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದ ಪ್ರಶಸ್ತಿಯನ್ನು ಪಡೆದಂಥ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆರು ತಿಂಗಳುಗಳ ಅವಧಿಯವರೆಗೆ ಯಾವುದೇ ಮನೋರಂಜನೆಗೆ ತೆರಿಗೆಯನ್ನು ಸಂದಾಯ ಮಾಡಬೇಕಾಗಿಲ್ಲ.

**4. 4ನೇ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿನ ಕೋಷ್ಟಕಕ್ಕೆ ಬದಲಾಗಿ ಈ ಕೆಳಕಂಡ ಕೋಷ್ಟಕವನ್ನು ಪ್ರತಿಯೋಜಿಸತಕ್ಕದ್ದು ಎಂದರೆ:–

**ಕೋಷ್ಟಕ**

| ಕ್ರಮ ಸಂಖ್ಯೆ | ಅತಿ ಹೆಚ್ಚಿನ ವರ್ಗದ ಆಸನ ಅಥವಾ ಸ್ಥಳಾವಕಾಶಕ್ಕೆ ಒಬ್ಬ ವ್ಯಕ್ತಿಯು ಪ್ರವೇಶಿಸುವುದಕ್ಕಾಗಿ ಸಂದಾಯ (ಮನೋರಂಜನಾ ತೆರಿಗೆ ಮತ್ತು ಅಧಿಭಾರವನ್ನು ಹೊರತುಪಡಿಸಿ) | ಪ್ರತಿ ಪ್ರದರ್ಶನಕ್ಕೆ ತೆರಿಗೆಯ ದರ |
|---|---|---|
| (ಕ) | ಒಂದು ರೂಪಾಯಿ ಮತ್ತು ಐವತ್ತು ಪೈಸೆಗಳನ್ನು ಮೀರದಿದ್ದರೆ | ಇಪ್ಪತ್ತು ರೂಪಾಯಿಗಳು |
| (ಖ) | ಒಂದು ರೂಪಾಯಿ ಮತ್ತು ಐವತ್ತು ಪೈಸೆಗಳನ್ನು ಮೀರಿದ್ದು ಆದರೆ ಎರಡು ರೂಪಾಯಿ ಮತ್ತು ಐವತ್ತು ಪೈಸೆಗಳನ್ನು ಮೀರದಿದ್ದರೆ | ಮೂವತ್ತು ರೂಪಾಯಿಗಳು |
| (ಗ) | ಎರಡು ರೂಪಾಯಿ ಮತ್ತು ಐವತ್ತು ಪೈಸೆಗಳನ್ನು ಮೀರಿದರೆ | ಐವತ್ತು ರೂಪಾಯಿಗಳು |

ಪರಂತು, 4ಕ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತೆರಿಗೆಯನ್ನು ಸಂದಾಯ ಮಾಡುವ ಚಲನಚಿತ್ರ ಮಂದಿರಗಳಿಗೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ತೆರಿಗೆಯನ್ನು ಈ ಕೆಳಕಂಡ ದರಗಳಲ್ಲಿ ಸಂದಾಯ ಮಾಡತಕ್ಕದ್ದು ಎಂದರೆ:–

| ಕ್ರಮ ಸಂಖ್ಯೆ | ಅತಿ ಹೆಚ್ಚಿನ ವರ್ಗದ ಆಸನ ಅಥವಾ ಸ್ಥಳಾವಕಾಶಕ್ಕೆ ಒಬ್ಬ ವ್ಯಕ್ತಿಯು ಪ್ರವೇಶಿಸುವುದಕ್ಕಾಗಿ ಒಟ್ಟು ಸಂದಾಯ | ಪ್ರತಿ ಪ್ರದರ್ಶನಕ್ಕೆ ತೆರಿಗೆ ದರ |
|---|---|---|
| (ಕ) | ಎರಡು ರೂಪಾಯಿ ಮತ್ತು ಐವತ್ತು ಪೈಸೆಗಳನ್ನು ಮೀರದಿದ್ದರೆ | ಇಪ್ಪತ್ತು ರೂಪಾಯಿಗಳು |
| (ಖ) | ಎರಡು ರೂಪಾಯಿ ಮತ್ತು ಐವತ್ತು ಪೈಸೆಗಳನ್ನು ಮೀರಿದ್ದು ಆದರೆ ಐದು ರೂಪಾಯಿಗಳನ್ನು ಮೀರದಿದ್ದರೆ | ಮೂವತ್ತು ರೂಪಾಯಿಗಳು |
| (ಗ) | ಐದು ರೂಪಾಯಿಗಳನ್ನು ಮೀರಿದರೆ | ಐವತ್ತು ರೂಪಾಯಿಗಳು |

**5. 4ಕ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 4ಕ ಪ್ರಕರಣದ (I)ನೇ ಉಪ–ಪ್ರಕರಣದಲ್ಲಿ (I)ಕೋಷ್ಟಕದಲ್ಲಿ (ಖ)ಕ್ರಮಸಂಖ್ಯೆ ಮತ್ತು ಅದಕ್ಕೆ ಸಂಬಂಧಪಟ್ಟ ನಮೂದುಗಳಿಗೆ ಬದಲಾಗಿ ಈ ಕೆಳಕಂಡ ಕ್ರಮಸಂಖ್ಯೆಗಳು ಮತ್ತು ನಮೂದುಗಳನ್ನು ಪ್ರತಿನಿಯೋಜಿಸತಕ್ಕದ್ದು ಎಂದರೆ:–

| | | |
|---|---|---|
| (ಖ) | ಹದಿನೈದು ಸಾವಿರಗಳನ್ನು ಮೀರಿದ್ದು ಆದರೆ ಇಪ್ಪತ್ತು ಸಾವಿರಗಳನ್ನು ಮೀರದಿದ್ದರೆ | ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಇಪ್ಪತ್ತು |
| (ಗ) | ಇಪ್ಪತ್ತು ಸಾವಿರಗಳನ್ನು ಮೀರಿದ್ದು ಆದರೆ ಇಪ್ಪತ್ತೈದು ಸಾವಿರಗಳನ್ನು ಮೀರದಿದ್ದರೆ | ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಇಪ್ಪತ್ತೈದು |
| (ಘ) | ಇಪ್ಪತ್ತೈದು ಸಾವಿರಗಳನ್ನು ಮೀರಿದ್ದು ಆದರೆ ಐವತ್ತು ಸಾವಿರಗಳನ್ನು ಮೀರದಿದ್ದರೆ | ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಮೂವತ್ತು |
| (ಙ) | ಐವತ್ತು ಸಾವಿರಗಳನ್ನು ಮಿರಿದ್ದು ಆದರೆ ಎಪ್ಪತ್ತೈದು ಸಾವಿರಗಳನ್ನು ಮೀರದಿದ್ದರೆ | ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಮೂವತ್ತೆರಡೂವರೆ |

| | | |
|---|---|---|
| (ಚ) | ಎಪ್ಪತ್ತೈದು ಸಾವಿರಗಳನ್ನು ಮೀರಿದ್ದು ಆದರೆ ಒಂದು ಲಕ್ಷವನ್ನು ಮೀರದಿದ್ದರೆ | ಒಟ್ಟು ಸಂಗ್ರಹಣೆಯ ಸಾಮರ್ಥ್ಯದ ಶೇಕಡಾ ಮೂವತ್ತೈದು |

(2) ಮೊದಲನೇ ಪರಂತುಕದಲ್ಲಿ–

(1) "ಕ್ರಮಸಂಖ್ಯೆ (ಖ)" ಎಂಬ ಅಕ್ಷರಗಳು ಮತ್ತು ಆವರಣಗಳಿಗೆ ಬದಲಾಗಿ "ಕ್ರಮಸಂಖ್ಯೆಗಳು (ಖ) (ಗ) ಮತ್ತು (ಚ)" ಎಂಬ ಅಕ್ಷರಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ii)ನೇ ಬಾಬನ್ನು ಲೋಪಿಸತಕ್ಕದ್ದು:

(3) ಎರಡನೇ ಪರಂತುಕದಲ್ಲಿ, "ಕೇಂದ್ರ ಸರ್ಕಾರ ಅಥವಾ ರಾಜ್ಯಸರ್ಕಾರವು ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಿತ್ರಗಳೆಂದು ಕೊಟ್ಟ ಪ್ರಶಸ್ತಿಯನ್ನು ಪಡೆದಿರುವಂಥ" ಎಂಬ ಪದಗಳಿಗೆ ಬದಲಾಗಿ "1981ರ ಏಪ್ರಿಲ್ ಮೊದಲನೇ ದಿವಸದ ತರುವಾಯ ಕೇಂದ್ರ ಸರ್ಕಾರ ಅಥವಾ ರಾಜ್ಯಸರ್ಕಾರವು ಕೊಟ್ಟ ಅತ್ಯುತ್ತಮ ವಿಶೇಷ ಚಲನಚಿತ್ರ ಪ್ರಶಸ್ತಿ ಅಥವಾ ರಾಜ್ಯಸರ್ಕಾರವು ಅಧಿಸೂಚಿಸಿದ ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದ ಪ್ರಶಸ್ತಿಯನ್ನು ಪಡೆದಂಥ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(4) ಮೂರನೇ ಪರಂತುಕದ ತರುವಾಯ ಮತ್ತು ವಿವರಣೆಗೆ ಮುಂಚೆ ಈ ಕೆಳಕಂಡ ಇನ್ನೂ ಹೆಚ್ಚಿನ ಪರಂತುಕವನ್ನು ಸೇರಿಸತಕ್ಕದ್ದು. ಎಂದರೆ:–

"ಇದು ಅಲ್ಲದೇ ಕನ್ನಡ, ಕೊಡವ, ಅಥವಾ ತುಳು ಚಲನಚಿತ್ರವನ್ನು ಹೊರತುಪಡಿಸಿ 1981ರ ಏಪ್ರಿಲ್ ಮೊದಲನೆಯ ದಿವಸದ ತರುವಾಯ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯಸರ್ಕಾರವು ಕೊಟ್ಟ ಪ್ರಶಸ್ತಿ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದ ಪ್ರಶಸ್ತಿಯನ್ನು ಪಡೆದಂಥ ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ರಾಜ್ಯಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಆರು ತಿಂಗಳುಗಳ ಅವಧಿಯವರೆಗೆ ಈ ಉಪ–ಪ್ರಕರಣದ ಮೇರೆಗೆ ಯಾವುದೇ ತೆರಿಗೆಯನ್ನು ಸಂದಾಯ ಮಾಡಬೇಕಾಗಿಲ್ಲ".

**6. 4ಖ. ಹೊಸ ಪ್ರಕರಣದ ಸೇರ್ಪಡೆ:–** ಮೂಲ ಅಧಿನಿಯಮದ 4ಕ ಪ್ರಕರಣದ ತರುವಾಯ ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:–

**"4ಖ. ವೀಡಿಯೋ ಪ್ರದರ್ಶನಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ:–** 3, 3ಕ, 4 ಅಥವಾ 4ಕ ಪ್ರಕರಣಗಳ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯ ಬದಲಾಗಿ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ವೀಡಿಯೋ ಪ್ರದರ್ಶನದ ಪ್ರತಿ ಸಂದರ್ಭದಲ್ಲಿ ಪ್ರತಿ ತಿಂಗಳಿಗೆ ನೂರು ರೂಪಾಯಿಗಳ ದರದಲ್ಲಿ ಮನೋರಂಜನಾ ತೆರಿಗೆಯನ್ನು ವಿಧಸತಕ್ಕದ್ದು ಮತ್ತು ರಾಜ್ಯಸರ್ಕಾರಕ್ಕೆ ಅದನ್ನು ಸಂದಾಯ ಮಾಡತಕ್ಕದ್ದು".

**7. 6ನೇ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 6ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ, "4ಕ ಪ್ರಕರಣದಲ್ಲಿ" ಎಂಬ ಪದ, ಅಂಕಿ ಮತ್ತು ಅಕ್ಷರಗಳಿಗೆ ಬದಲಾಗಿ "4ಕ ಅಥವಾ 4ಖ ಪ್ರಕರಣಗಳಲ್ಲಿ" ಎಂಬ ಪದ, ಅಂಕಿ ಮತ್ತು ಅಕ್ಷರಗಳನ್ನು ಮತ್ತು "ಸಂದಾಯದ ಮೇಲೆ ಅಥವಾ ಗೌರವಾರ್ಥ ಟಿಕೆಟ್ ಮೂಲಕ ಪ್ರವೇಶಪಡೆದ ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ" ಎಂಬ ಪದಗಳಿಗೆ ಬದಲಾಗಿ ಪ್ರವೇಶಕ್ಕಾಗಿನ ಪ್ರತಿಯೊಂದು ಸಂದಾಯ ಅಥವಾ ಗೌರವಾರ್ಥ ಟಿಕೆಟ್ ಮೂಲಕವಾದ ಪ್ರತಿಯೊಂದು ಪ್ರವೇಶಕ್ಕೆ ಸಂಬಂಧಿಸಿದಂತೆ ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 6ಗ ಹೊಸ ಪ್ರಕರಣದ ಸೇರ್ಪಡೆ:–** ಮೂಲ ಅಧಿನಿಯಮದ 6ಖ ಪ್ರಕರಣದ ತರುವಾಯ ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:–

**"6ಗ ತಪ್ಪುಗಳನ್ನು ಸರಿಪಡಿಸುವುದು:–** (1) ದಾಖಲೆಯಿಂದ ಸ್ಪಷ್ಟವಾಗಿರುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ 6ಕ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ನಿಯಮಿಸಲಾದ ಪ್ರಾಧಿಕಾರಿಯು ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರವು ಅದು ಮಾಡಿದ ಆದೇಶದ ದಿನಾಂಕದಿಂದ ಐದು ವರ್ಷಗಳೊಳಗೆ ಯಾವುದೇ ಕಾಲದಲ್ಲಿ ಅಂಥ ಆದೇಶವನ್ನು ತಿದ್ದುಪಡಿ ಮಾಡಬಹುದು":

ಪರಂತು, ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಅನ್ಯಥಾ ಮಾಲೀಕನ ಹೊಣೆಗಾರಿಕೆಯನ್ನು ಹೆಚ್ಚಿಸುವ ಪರಣಾಮವನ್ನು ಹೊಂದಿರುವಂಥ ತಿದ್ದುಪಡಿಯನ್ನು ಸಂದರ್ಭಾನುಸಾರ 6ಕ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿರುವ ಪ್ರಾಧಿಕಾರಿ, ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರವು ಮಾಲೀಕನಿಗೆ ಹಾಗೆ ಮಾಡುವ ಅದರ ಉದ್ದೇಶದ ಬಗ್ಗೆ ನೋಟೀಸನ್ನು ಕೊಟ್ಟ ಹೊರತು ಮತ್ತು ಆ ಮಾಲೀಕನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಹೊರುತು ಮಾಡತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಯಾವ ಮೂಲ ಆದೇಶದಲ್ಲಿನ ತಪ್ಪನ್ನು ಸರಿಪಡಿಸಲಾಯಿತೋ ಆ ಮೂಲ ಆದೇಶವನ್ನು ಯಾವ ಕಾನೂನಿನ ಉಪಬಂಧದ ಮೇರೆಗೆ ಮಾಡಲಾಗಿತ್ತೋ ಅದೇ ಉಪಬಂಧದ ಮೇರೆಗೆ ಮಾಡಿದ ಆದೇಶವೆಂಬುದಾಗಿ ಭಾವಿಸತಕ್ಕದ್ದು.

(3) ಅಂಥ ಸರಿಪಡಿಸುವಿಕೆಯು ನಿರ್ಧರಣೆ ಅಥವಾ ದಂಡನೆಯನ್ನು ಕಡಿಮೆ ಮಾಡುವ ಪರಿಣಾಮವನ್ನು ಹೊಂದಿರುವಲ್ಲಿ ಈ ಅಧಿನಿಯಮದ ಮೇರೆಗೆ ನಿರ್ಧಾರಣಾ ಪ್ರಾಧಿಕಾರವು ಮಾಲೀಕನಿಗೆ ಬಾಕಿಯಾಗಬಹುದಾದಂಥ ಯಾವುದೇ ಮರುಪಾವತಿಯನ್ನು ಮಾಡತಕ್ಕದ್ದು.

**9. 7ನೇ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 7ನೇ ಪ್ರಕರಣದಲ್ಲಿ (1) (1)ನೇ ಉಪ–ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡ ಉಪ–ಪ್ರಕರಣವನ್ನು ಪ್ರತಿಯೋಜಿಸತಕ್ಕುದು ಎಂದರೆ:–

(1) ರಾಜ್ಯ ಸರ್ಕಾರವು ಆದೇಶದ ಮೂಲಕ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು:–

(ಕ) ಯಾವ ಚಲನಚಿತ್ರವನ್ನು ರಾಜ್ಯ ಸರ್ಕಾರದಿಂದ ಮನ್ನಣೆ ಪಡೆದ ಸಂಸ್ಥೆಯು ಶೈಕ್ಷಣಿಕ ಚಲನಚಿತ್ರ ಅಥವಾ ಮಕ್ಕಳ ಚಲನಚಿತ್ರವೆಂದು ಪ್ರಮಾಣೀಕರಿಸಲಾಗಿದೆಯೋ ಆ ಚಲನಚಿತ್ರದ ಪ್ರದರ್ಶನಕ್ಕೆ ಪ್ರವೇಶಕ್ಕಾಗಿನ ಸಂದಾಯಗಳ ಮೇಲೆ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಯ ದರದಲ್ಲಿ ಆರು ತಿಂಗಳುಗಳನ್ನು ಮೀರದಂಥ ಅವಧಿಯವರೆಗೆ ವಿನಾಯಿತಿ ಅಥವಾ ಇಳಿತಾಯವನ್ನು ಕೊಡಬಹುದು; ಪರಂತು ಸರ್ಕಾರವು ಅಂಥ ವಿನಾಯಿತಿ ಅಥವಾ ಇಳಿತಾಯವನ್ನು ಒಂದು ಬಾರಿಗೆ ಆರು ತಿಂಗಳುಗಳನ್ನು ಮೀರದ ಇನ್ನೂ ಹೆಚ್ಚಿನ ಅವಧಿಗಳಿಗೆ ವಿಸ್ತರಿಸಬಹುದು; ಅಥವಾ

(ಖ) ಮನೋರಂಜನೆಯ ಇಡೀ ಉತ್ಪನ್ನಗಳನ್ನು ಅಂಥ ಒಟ್ಟು ಉತ್ಪನ್ನಗಳ ಶೇಕಡಾ ಎರಡರಷ್ಟನ್ನು ಮೀರದ ವಾಸ್ತವ ವೆಚ್ಚಗಳನ್ನು ಕಳೆದ ತರುವಾಯ ಲೋಕೋಪಕಾರಿ, ಧಾರ್ಮಿಕ ಅಥವಾ ಧರ್ಮಾರ್ಥ ಉದ್ದೇಶಗಳಿಗಾಗಿ ವಿನಿಯೋಗಿಸಲಾಗುತ್ತದೆ ಎಂದು ರಾಜ್ಯ ಸರ್ಕಾಕ್ಕೆ ಮನದಟ್ಟಾದರೆ ಚಲನಚಿತ್ರ ಪ್ರದರ್ಶನಕ್ಕೆ ಪ್ರವೇಶಕ್ಕಾಗಿನ ಸಂದಾಯಗಳ ಮೇಲೆ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಯ ದರದಲ್ಲಿ ವಿನಾಯಿತಿ ಅಥವಾ ಇಳಿತಾಯವನ್ನು ಕೊಡಬಹುದು.

(2) 4ನೇ ಉಪ–ಪ್ರಕರಣದ ತರುವಾಯ ಆದರೆ ವಿವರಣೆಗೆ ಮುಂಚೆ ಈ ಕೆಳಕಂಡ ಉಪ–ಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:–

**"**(5) ಮನೋರಂಜನೆಯು ನಿಯಮಿಸಿದ ಷರತ್ತುಗಳನ್ನು ಪೂರೈಸುವ ಮತ್ತು ಕಮೀಷನರನು ಮನ್ನಣೆ ಮಾಡಿದ ಅದರ ಸದಸ್ಯರ ಪ್ರಯೋಜನಕ್ಕಾಗಿ ಅನನ್ಯವಾಗಿ ಮತ್ತು ಯಾವುದೇ ಲಾಭವನ್ನು ಪಡೆದುಕೊಳ್ಳದೆ ಚಲನಚಿತ್ರದ ಕ್ಲಬ್ಬು ಅಥವಾ ಚಲನಚಿತ್ರ ಸಂಘವು ನಡೆಸುತ್ತಿರುವ ಚಲನಚಿತ್ರ ಪ್ರದರ್ಶನವಾಗಿದ್ದರೆ ಅಂಥ ಮನೋರಂಜನೆಯನ್ನು ಮನೋರಂಜನಾ ತೆರಿಗೆ ಸಂದಾಯದಿಂದ ವಿನಾಯಿತಿಗೊಳಿಸತಕ್ಕದ್ದು:

ಪರಂತು, ಆ ಚಲನಚಿತ್ರ ಕ್ಲಬ್ಬು ಅಥವಾ ಚಲನಚಿತ್ರ ಸಂಘವು ನಿಯಮಿದ ಯಾವುದೇ ಷರತ್ತನ್ನು ಭಂಗಗೊಳಿಸಿರುವುದಾಗಿ ಕಮೀಷನರರಿಗೆ ಕಂಡುಬಂದರೆ ಅಂಥ ಚಲನಚಿತ್ರ ಕ್ಲಬ್ಬು ಅಥವಾ ಚಲನಚಿತ್ರ ಸಂಘವು ಯಾವ ಪ್ರದರ್ಶನಗಳಿಗೆ ಸಂಬಂಧಿಸಿದಂತೆ ಅಂತಹ ಭಂಗವು ಸಂಭವಿಸಿದೆಯೋ ಆ ಪ್ರದರ್ಶನ ಅಥವಾ ಪ್ರದರ್ಶನಗಳಿಗಾಗಿ ಮನೋರಂಜನಾ ತೆರಿಗೆಯ ಸಂದಾಯಕ್ಕೆ ಗುರಿಯಾಗತಕ್ಕದ್ದು.

**10. 8ಖ, 8ಗ, 8ಘ ಮತ್ತು 8ಜ ಹೊಸ ಪ್ರಕರಣಗಳ ಸೇರ್ಪಡೆ:–** ಮೂಲ ಅಧಿನಿಯಮದ 8ಕ ಪರಕರಣದ ಈ ಕೆಳಕಂಡ ಪ್ರಕರಣವನ್ನು ಸೇರಿಸತಕ್ಕದ್ದು. ಎಂದರೆ:

**"8ಖ, ಅಪೀಲುಗಳು:–** (1) ನಿಯಮಿಸಲಾದ ಪ್ರಾಧಿಕಾರವು ತನಗೆ ಈ ಅಧಿನಿಯಮದ ಉಪಬಂಧಗಳ ಮೇರಗೆ ಮಾಡಿದ ಅವನನ್ನು ಬಾಧಿಸುವ ಆದೇಶಕ್ಕೆ ಆಕ್ಷೇಪಿಸುವ ಯಾವನೇ ವ್ಯಕ್ತಿಯು ಅಧಿಕಾರ ವ್ಯಾಪ್ತಿಯ ಅಸಿಸ್ಟೆಂಟ್ ಕಮೀಷನರಿಗೆ ಅಪೀಲು ಸಲ್ಲಿಸಬಹುದು.

(2) ಅಪೀಲನ್ನು ಅಂಥ ಆದೇಶವನ್ನು ತಿಳಿಸಿದ ದಿನಾಂಕದಿಂದ ಮೂಮತ್ತು ದಿವಸಗಳೊಳಗಾಗಿ ಸಲ್ಲಿಸತಕ್ಕದ್ದು:

ಪರಂತು, ಅಪೀಲು ಪ್ರಾಧಿಕಾರವು ಹಿಂದೆ ಹೇಳಿದ ಮೂವತ್ತು ದಿವಸಗಳ ಅವಧಿಯ ತರುವಾಯ ಸಲ್ಲಿಸಿದ ಅಪೀಲನ್ನು ಆ ಅವಧಿಯೊಳಗೆ ಸಲ್ಲಿಸದಿರುವುದಕ್ಕೆ ಅಪೀಲುದಾರನು ಸಾಕಷ್ಟು ಕಾರಣವನ್ನು ಹೊಂದಿದ್ದನೆಂದು ಅದಕ್ಕೆ ಮನದಟ್ಟಾದರೆ ಅದನ್ನು ಅಂಗೀಕರಸಬಹುದು.

(3) (ಕ) ಅಪೀಲಿನಲ್ಲಿ ವಿವಾದಿತವಲ್ಲದ ತೆರಿಗೆ ಮತ್ತು ದಂಡದ ಸಂದಾಯದ ತೃಪ್ತಿಕರ ರುಜುವಾತಿನ ಜೊತೆಗೆ ಇದ್ದ ಹೊರತು ಅಪೀಲು ಪ್ರಾಧಿಕಾರವು ಆದೇಶದ ವಿರುದ್ಧ ಯಾವುದೇ ಅಪೀಲನ್ನು ಪುರಸ್ಕರಿಸತಕ್ಕುದಲ್ಲ.

(ಖ) (1)ನೇ ಉಪ–ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಿದ್ದಾಗ್ಯೂ ಅಪೀಲನ್ನು ಯಾವ ಆದೇಶದ ವಿರುದ್ಧ ಸಲ್ಲಿಸಲಾಗಿದೆಯೋ ಆ ಆದೇಶಕ್ಕೆ ಅನುಸಾರವಾಗಿ ತೆರಿಗೆ ಅಥವಾ ಇತರ ಮೊಬಲಗನ್ನು ಸಂದಾಯ ಮಾಡತಕ್ಕದ್ದು:

ಪರಂತು, ಅಪೀಲು ಪ್ರಾಧಿಕಾರವು ಅದರ ವಿವೇಚನೆಯಲ್ಲಿ (ಖ) ಖಂಡದ ಮೇರೆಗೆ ಸಂದಾಯವಾಗಬೇದಾದ ತೆರಿಗೆ ಅಥವಾ ಇತರ ಮೊಬಲಗಿನ ಸಂದಾಯಕ್ಕೆ ಸಂಬಂಧಿಸಿದಂತೆ ನಿಯಮಿಸಬಹುದಾದಂತಹ ನಮೂನೆಯಲ್ಲಿ ಅಂತಹ ರೀತಿಯಲ್ಲಿ ಅಪೀಲುದಾರನು ಅದಕ್ಕೆ ಮನದಟ್ಟಾಗುವಂತೆ ಭದ್ರತೆಯನ್ನು ಒದಗಿಸಿದರೆ ಅದು ಸೂಕ್ತವೆಂದು ಯೋಚಿಸುವಂಥ ನಿರ್ದೇಶನಗಳನ್ನು ಕೊಡಬಹುದು.

(4) ಅಪೀಲು ನಿಗದಿಪಡಿಸಿದ ನಮೂನೆಯಲ್ಲಿರತಕ್ಕದ್ದು ಹಾಗೂ ನಿಯಮಿಸಲಾದ ರೀತಿಯಲ್ಲಿ ಅದನ್ನು ಸತ್ಯಾಪನೆ ಮಾಡತಕ್ಕದ್ದು.

(5) ಅಪೀಲನ್ನು ವಿಲೇ ಮಾಡುವಲ್ಲಿ ಅಪೀಲು ಪ್ರಾಧಿಕಾರವು ಅಪೀಲುದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ,–

(i) ಆ ಅದೇಶವನ್ನು ಸ್ಥಿರೀಕರಿಸಬಹುದು, ಕಡಿಮೆ ಮಾಡಬಹುದು, ಹೆಚ್ಚಿಸಬಹುದು ಅಥವಾ ರದ್ದುಗೊಳಿಸಬಹುದು;

(ii) ಆದೇಶವನ್ನು ತಳ್ಳಿಹಾಕಬಹುದು ಮತ್ತು ನಿಯಮಿಸಿದ ಪ್ರಾಧಿಕಾರವನ್ನು ನಿರ್ದೇಶಿಸಬಹುದಾದಂತಹ ವಿಚಾರಣೆಯ ತರುವಾಯ ಹೊಸ ಆದೇಶವನ್ನು ಮಾಡಲು ನಿರ್ದೇಶಿಸಬಹುದು; ಅಥವಾ

(iii) ಅದು ಸೂಕ್ತವೆಮದು ಭಾವಿಸುವಂಥ ಆದೇಶವನ್ನು ಮಾಡಬಹುದು.

(6) ಕರ್ನಾಟಕ ಮನೋರಂಜನಾ ತೆರಿಗೆ 1983ರ (ಎರಡನೇ ತಿದ್ದುಪಡಿ) ಅಧಿನಿಯಮದ ಪ್ರಾರಂಭದ ದಿನಾಂಕದಂದು ವಾಣಿಜ್ಯ ತೆರಿಗೆ ಅಧಿಕಾರಿಗಳು ಅಥವಾ ಡೆಪ್ಯೂಟಿ ಕಮೀಷನರ್ ಮುಂದೆ ಇತ್ಯರ್ಥದಲ್ಲಿರುವ ಅಪೀಲು ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರ ವ್ಯಾಪ್ತಿಯ ಅಸಿಸ್ಟೆಂಟ್ ಕಮೀಷನರಿಗೆ ವರ್ಗಾಯಿಸತಕ್ಕದ್ದು ಅವನು ಅಂಥ ಅಪೀಲುಗಳನ್ನು ಈ ಪ್ರಕರಣದ ಉಪಬಂಧಗಳ ಮೇರೆಗೆ ಸಲ್ಲಿಸಿದ್ದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ವಿಲೆ ಮಾಡತಕ್ಕದ್ದು.

**8.ಗ, ಅಸಿಸ್ಟೆಂಟ್ ಕಮೀಷನರುಗಳು ಪುನರೀಕ್ಷಣಾ ಅಧಿಕಾರಗಳು:–** (1) ಅಸಿಸ್ಟೆಂಟ್ ಕಮೀಷನರನು ಸ್ವಪ್ರೇರಣೆಯಿಂದ ನಿಯಮಿಸಿದ ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿದ ಯಾವುದೇ ಆದೇಶ ಅಥವಾ ದಾಖಲು ಮಾಡಿದ ವ್ಯವಹರಣೆಗಳ ಮತ್ತು ಯಾವುದರ ವಿರುದ್ಧ 8ಖ ಪ್ರಕರಣದ ಮೇರೆಗೆ ಯಾವುದೇ ಅಪೀಲನ್ನು ಸಲ್ಲಿಸಲಾಗಿಲ್ಲವೋ ಅದರ ದಾಖಲೆಗಳನ್ನು ರಾಜಸ್ವದ ಹಿತಾಸಕ್ತಿಗಳಿಗೆ ಅದು ಭಾದಕವಾಗುವಷ್ಟರ ಮಟ್ಟಿಗೆ ಅಂಥ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಅಥವಾ ಅಂಥ ವ್ಯವಹರಣೆಗಳ ಕ್ರಮಬದ್ಧತೆಯ ಬಗ್ಗೆ ತಾನೇ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅವನು ಅದಕ್ಕೆ ಸಂಬಂಧಿಸದಂತೆ ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ಆದೇಶಕ್ಕೆ ಸಂಬಂಧಪಟ್ಟಂತೆ (1)ನೇ ಉಪಪ್ರಕರಣದ ಮೇರೆಗಿನ ಅಧಿಕಾರವನ್ನು ಆ ಆದೇಶವನ್ನು ಮಾಡಿದಂತಹ ದಿನಾಂಕದಿಂದ ನಾಲ್ಕು ವರ್ಷಗಳ ಅವಧಿಯೊಳಗೆ ಮಾತ್ರ ಚಲಾಯಿಸಬಹುದಾಗಿರತಕ್ಕದ್ದು.

(3) ಪ್ರಸ್ತಾವಿತ ಹೆಚ್ಚಿಸುವಿಕೆಯ ವಿರುದ್ಧ ಕಾರಣವನ್ನು ತೋರಿಸಲು ತೆರಿಗೆದಾರನಿಗೆ ಅವಕಾಶವನ್ನು ಕೊಟ್ಟ ಹೊರತು ಯಾವುದೇ ನಿರ್ಧಾರಣೆಯನ್ನು ಹೆಚ್ಚಿಸಿ (1)ನೇ ಉಪ–ಪ್ರಕರಣದ ಮೇರೆಗೆ ಯಾವ ಆದೇಶವನ್ನು ಮಾಡತಕ್ಕದ್ದಲ್ಲ.

**8ಘ. ಕಮೀಷನರರು ಅಥವಾ ಜಂಟಿ ಕಮೀಷನರರಿಂದ ಪುನರೀಕ್ಷಣೆ:–** (1) ಕಮೀಷನರನು ಅಥವಾ ಜಂಟಿ ಕಮೀಷನರನು ತಾನಾಗಿಯೇ ಈ ಅಧಿನಿಯಮದ ಮೇರೆಗೆ ಯಾವನೇ ಅಧಿಕಾರಿಯು ಮಾಡಿದ ಯಾವುದೇ ಆದೇಶ ಅಥವಾ ದಾಖಲೆ ಮಾಡಿದ ವ್ಯವಹರಣೆಗಳಿಗೆ ಸಂಬಂಧಪಟ್ಟ ಯಾವುದೇ ದಾಖಲೆಯನ್ನು ರಾಜಸ್ವದ ಹಿತಾಸಕ್ತಿಗೆ ಅದು ಬಾಧಕವಾಗುವಷ್ಟರ ಮಟ್ಟಿಗೆ ಅಂಥ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯ ಅಥವಾ ಅಂಥ ವ್ಯವಹಾರಗಳಿಗೆ ಕ್ರಮಬದ್ಧತೆಯ ಬಗ್ಗೆ ತಾನೇ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಬಾಧಿತನಾದ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ಮತ್ತು ಅವನು ಅವಶ್ಯಕವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ಅಥವಾ ಮಾಡಿಸಿದ ತರುವಾಯ ನಿರ್ಧಾರಣೆಯನ್ನು ಹೆಚ್ಚಿಸುವ ಅಥವಾ ಮಾರ್ಪಾಟು ಮಾಡುವ ಅಥವಾ

ನಿರ್ಧಾರಣೆಯನ್ನು ರದ್ದುಗೊಳಿಸುವ ಮತ್ತು ಹೊಸ ನಿರ್ಧಾರಣೆಯನ್ನು ನಿರ್ದೇಶಿಸುವ ಆದೇಶವನ್ನು ಒಳಗೊಂಡು ಆ ಪ್ರಕರಣದ ಸಂದರ್ಭಗಳು ಸಮರ್ಥಿಸುವ ಹಾಗೆ ಅದರ ಮೇಲೆ ಅಂಥ ಆದೇಶವನ್ನು ಮಾಡಬಹುದು.

(2) (1)ನೆ ಉಪ-ಪ್ರಕರಣದ ಮೇರೆಗಿನ ಅಧಿಕಾರವನ್ನು ಪುನರೀಕ್ಷಣೆಯನ್ನು ಕೋರಿದ ಆದೇಶವನ್ನು ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗೆ ಮಾತ್ರ ಚಲಾಯಿಸಬಹುದಾಗಿರತಕ್ಕದ್ದು.

(3) ಕರ್ನಾಟಕ ಮನೋರಂಜನಾ ತೆರಿಗೆ (ಎರಡನೇ ತಿದ್ದುಪಡಿ) ಅಧಿನಿಯಮ, 1983ರ ಪ್ರಾರಂಭಕ್ಕೆ ಮುಂಚೆ ಮಾಲೀಕರು ಕಮೀಷನರನಿಗೆ ಸಲ್ಲಿಸಿದ ಪುನರಿಕ್ಷಣಾ ಅರ್ಜಿಗಳನ್ನು ಅವನು ಸದರಿ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಇದ್ದಂಥ ಉಪಬಂಧಗಳ ಮೇರೆಗೆ ತೀರ್ಮಾನಿಸತಕ್ಕದ್ದು.

**8ಜ. ಅಪೀಲು ನ್ಯಾಯಾಧೀಕರಣಕ್ಕೆ ಅಪೀಲು:-** (1) ಈ ಬಗ್ಗೆ ರಾಜ್ಯಸರ್ಕಾರವು ಶಕ್ಯಗೊಳಿಸಿದೆ ಯಾವನೇ ಅಧಿಕಾರಿ ಅಥವಾ 8ಎ ಪ್ರಕರಣ 8ಗ ಪ್ರಕರಣದ ಮೇರೆಗೆ ಅಸಿಸ್ಟೆಂಟ್ ಕಮೀಷನರನು ಮಾಡಿದ ಆದೇಶವನ್ನು ಆಕ್ಷೇಪಿಸುವ ಯಾವನೇ ಇತರ ವ್ಯಕ್ತಿಯು ಅವನಿಗೆ ಆ ಆದೇಶವನ್ನು ತಿಳಿಸಿದಂತಹ ದಿನಾಂಕದಿಂದ ಅರವತ್ತು ದಿವಸಗಳ ಅವಧಿಯೊಳಗೆ ಕರ್ನಾಟಕ ಅಪೀಲು ನ್ಯಾಯಾಧೀಕರಣ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ, 1976ರ 10)ರ ಮೇರೆಗೆ ರಚಿಸಿದ ಅಪೀಲು ನ್ಯಾಯಾಧೀಕರಣಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಅಪೀಲು ನ್ಯಾಯಾಧೀಕರಣವು ಈ ಅವಧಿಯೊಳಗೆ ಅಪೀಲನ್ನು ಸಲ್ಲಿಸದೇ ಇರುವುದಕ್ಕಾಗಿ ಅಪೀಲುದಾರನಿಗೆ ಸಾಕಷ್ಟು ಕಾರಣ ಇತ್ತೆಂದು ಅದಕ್ಕೆ ಮನದಟ್ಟಾದರೆ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಅರವತ್ತು ವಿವಸಗಳ ಅವಧಿಯ ತುರುವಾಯ ಸಲ್ಲಿಸಿದ ಅಪೀಲನ್ನು ಅಂಗೀಕರಿಸಬಹುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಅಧಿಕೃತನಾದ ಅಧಿಕಾರಿ ಅಥವಾ ಅಪೀಲನ್ನು ಯಾರ ವಿರುದ್ಧವಾಗಿ ಸಲ್ಲಿಸಲಾಗಿದೆಯೋ ಆ ವ್ಯಕ್ತಿಯು ಇನ್ನೊಬ್ಬ ಪಕ್ಷಕಾರನು (1)ನೇ ಉಪ-ಪ್ರಕರಣದ ಮೇರೆಗೆ ಅಸಿಸ್ಟೆಂಟ್ ಕಮೀಷನರನ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆ ಎಂಬ ಬಗೆಗಿನ ನೋಟೀಸನ್ನು ಸ್ವೀಕರಿಸಿದ ಮೇಲೆ ಅಂಥ ಆದೇಶ ಅಥವಾ ಅದರ ಯಾವುದೇ ಭಾಗದ ವಿರುದ್ಧ ಅವನು ಅಪೀಲನ್ನು ಸಲ್ಲಿಸದೆ ಇದ್ದಾಗ್ಯೂ ಆ ನೋಟೀಸನ್ನು ಸ್ವೀಕರಿಸಿದ ಮೂವತ್ತು ದಿವಸಗಳ ಒಳಗೆ ಅಸಿಸ್ಟೆಂಟ್ ಕಮೀಷನರನ ಆದೇಶದ ಯಾವುದೇ ಭಾಗದ ವಿರುದ್ಧ ನಿಯಮಿಸಿದ ರೀತಿಯಲ್ಲಿ ಸತ್ಯಾಪನೆ ಮಾಡಿದ ಎದುರು ಆಕ್ಷೇಪಣೆಗಳ ವಿವರಣಾ ಪತ್ರವನ್ನು ಸಲ್ಲಿಸಬಹುದು ಮತ್ತು ಅಂಥ ವಿವರಣಾ ಪತ್ರವನ್ನು ಅಪೀಲು ನ್ಯಾಯಾಧೀಕರಣವು(1)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಸಲ್ಲಿಸಲಾದ ಅಪೀಲು ಆಗಿದ್ದಿದ್ದರೆ ಹೇಗೋ ಹಾಗೆ ವಿಲೆ ಮಾಡತಕ್ಕದ್ದು.

(4) ಅಪೀಲು ಅಥವಾ ಎದುರು ಆಕ್ಷೇಪಣೆಗಳ ವಿವರಣಾ ಪತ್ರವು ನಿಯಮಿಸಿದ ನಮೂನೆಯಲ್ಲಿರತಕ್ಕದ್ದು. ಅದನ್ನು ನಿಯಮಿಸಿದ ರೀತಿಯಲ್ಲಿ ಸತ್ಯಾಪನೆ ಮಾಡತಕ್ಕದ್ದು ಮತ್ತು (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಶಕ್ತಗೊಳಿಸಿದ ಅಧಿಕಾರಿಯನ್ನು ಹೊರತುಪಡಿಸಿ ಇತರ ಯಾವನೇ ವ್ಯಕ್ತಿಯು ಸಲ್ಲಿಸಿದ ಅಪೀಲಿನ ಸಂದರ್ಭದಲ್ಲಿ ಅದರೊಂದಿಗೆ ಆಕ್ಷೇಪಿಸಿದ ನಿರ್ಧಾರಣೆಯ ಮೊಬಲಗಿನ ಶೇಕಡಾ ಎರಡಕ್ಕೆ ಸಮಾನವಾದ ಫೀಜು ಇರತಕ್ಕದ್ದು. ಪರಂತು, ಸಂದಾಯ ಮಾಡಬೇಕಾದ ಮೊತ್ತವು ಯಾವುದೇ ಸಂದರ್ಭದಲ್ಲಿ ಇಪ್ಪತ್ತು ರೂಪಾಯಿಗಳಿಗಿಂತ ಕಡಿಮೆ ಅಥವಾ ಇನ್ನೂರು ರೂಪಾಯಿಗಳಿಗಿಂತ ಹೆಚ್ಚು ಇರತಕ್ಕದ್ದುಲ್ಲ.

(5) ಅಪೀಲು ನ್ಯಾಯಾಧೀಕರಣವು ಅಪೀಲಿನ ಉಭಯ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ಅದು ಸೂಕ್ತವೆಂದು ಯೋಚಿಸುವಂಥ ಆದೇಶವನ್ನು ಅದರ ಮೇಲೆ ಮಾಡಬಹುದು:

ಪರಂತು, ಯಾವ ಕಾನೂನು ಪ್ರಶ್ನೆಯ ಮೇಲೆ ಅಪೀಲು ನ್ಯಾಯಾಧೀಕರಣವು ಇನ್ನೊಂದು ಅಪೀಲಿನಲ್ಲಿ ಅದರ ತೀರ್ಮಾನವನ್ನು ಈ ಹಿಂದೆಯೇ ಕೊಟ್ಟಿರುವುದೋ ಆ ಕಾನೂನು ಪ್ರಶ್ನೆಯನ್ನು ಅಪೀಲು ಒಳಗೊಂಡಿದ್ದರೆ ಮತ್ತು ಅಂಥ ತೀರ್ಮಾನದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಅರ್ಜಿಯ ಅಥವಾ ಅದರ ಮೇಲಿನ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಅಪೀಲು ಇತ್ಯರ್ಥದಲ್ಲಿದ್ದರೆ ಅಪೀಲು ನ್ಯಾಯಾಧೀಕರಣವು ಅದರ ಮುಂದೆ ಇರುವ ಅಪೀಲಿನ ಸುನಾವಣೆಯನ್ನು ಉಚ್ಚ ನ್ಯಾಯಾಲಯದಲ್ಲಿನ ಅಂಥ ಅರ್ಜಿ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿನ ಅಪೀಲು ವಿಲೆ ಆಗುವವರೆಗೆ ಮುಂದಕ್ಕೆ ಹಾಕಬಹುದು.

(6) (1)ನೇ ಉಪ-ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಿದ್ದಾಗ್ಯೂ, ಪ್ರಕರಣದಲ್ಲಿ ಮಾಡಿದ ನಿರ್ಧರಣೆಗೆ ಅನುಸಾರವಾಗಿ ತೆರಿಗೆ ಅಥವಾ ಇತರ ಮೊಬಲಗನ್ನು ಸಂದಾಯ ಮಾಡತಕ್ಕದ್ದು:

ಪರಂತು, ಅಪೀಲು ನ್ಯಾಯಾಧೀಕರಣವು ಅದರ ವಿವೇಚನೆಯಲ್ಲಿ ತೆರಿಗೆ ಅಥವಾ ಇತರ ಮೊಬಲಗಿನ ಸಂದಾಯದ ಬಗ್ಗೆ ಅದು ಸೂಕ್ತವೆಂದು ಯೋಚಿಸುವಂಥ ನಿರ್ದೇಶನಗಳನ್ನು ಅಪೀಲುದಾರನು ನೇಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಮತ್ತು ಅದಕ್ಕೆ ಸಮಾಧಾನವಾಗುವಂತೆ ಸಾಕಷ್ಟು ಭದ್ರತೆಯನ್ನು ಒದಗಿಸಿದರೆ ಕೊಡಬಹುದು:

ಮತ್ತು ಪರಂತು, ಅಪೀಲಿನ ಪರಿಣಾಮವಾಗಿ ಅಂಥ ನಿರ್ಧರಣೆಯಲ್ಲಿ ಯಾವುದೇ ಬದಲಾವಣೆಯು ಅವಶ್ಯವಾದರೆ ಅಪೀಲು ನ್ಯಾಯಾಧೀಕರಣವು ನಿಯಮಿಸಿದ ಪ್ರಾಧಿಕಾರವನ್ನು ನಿರ್ಧಾರಣೆಯನ್ನು ತಿದ್ದುಪಡಿ ಮಾಡಲು ಅಧಿಕೃತ ಗೊಳಿಸಬಹುದು. ಮತ್ತು ನಿಯಮಿಸಿದ ಪ್ರಾಧಿಕಾರವು ತದನುಸಾರವಾಗಿ ನಿರ್ಧಾರಣೆಯನ್ನು ತಿದ್ದುಪಡಿ ಮಾಡತಕ್ಕದ್ದು ಮತ್ತು ಆ ತರುವಾಯ ಮಾಲೀಕನು ಅತಿಯಾಗಿ ಪಾವತಿ ಮಾಡಿದ ಮೊಬಲಗನ್ನು ಸಂದರ್ಭಾನುಸಾರ ಅವನಿಗೆ ಬಡ್ಡಿಯಿಲ್ಲದೆ ಮರುಪಾವತಿ ಮಾಡತಕ್ಕದ್ದು ಅಥವಾ ಅವನಿಂದ ಬರಬೇಕಾದ ಹೆಚ್ಚಿನ ತೆರಿಗೆ ಮೊಬಲಗನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಸಂಗ್ರಹಿಸತಕ್ಕದ್ದು.

(7) (ಕ) ನ್ಯಾಯಾಧೀಕರಣವು ಅಪೀಲುದಾರ ಅಥವಾ ಪ್ರತಿ ಅರ್ಜಿದಾರನು ಸಲ್ಲಿಸಿದ ಅರ್ಜಿಯ ಮೇಲೆ ಅದು ಆ ಆದೇಶವನ್ನು ಮಾಡಿದಾಗ ಅದರ ಮುಂದೆ ಇಲ್ಲದೆ ಇದ್ದಂತಹ ಸಂಗತಿಗಳ ಆಧಾರದ ಮೇಲೆ (5)ನೇ ಉಪ-ಪ್ರಕರಣದ ಮೇರೆಗೆ ಅದು ಮಾಡಿದ ಯಾವುದೇ ಆದೇಶವನ್ನು ಪುನರವಲೋಕಿಸಬಹುದು:

ಪರಂತು, ಯಾವುದೇ ಅಂಥ ಅರ್ಜಿಯನ್ನು ಅದೇ ಆದೇಶಕ್ಕೆ ಸಂಬಂಧಿಸಿದಂತೆ ಒಂದಕ್ಕಿಂತ ಹೆಚ್ಚು ಸಲ ಸಲ್ಲಿಸತಕ್ಕದ್ದಲ್ಲ.

(ಖ) ಪುನರ್ ಅವಲೋಕನಕ್ಕಾಗಿನ ಅರ್ಜಿಯನ್ನು ನಿಯಮಿಸಿದ ರೀತಿಯಲ್ಲಿ ಆ ಅರ್ಜಿಯು ಯಾವ ಆದೇಶಕ್ಕೆ ಸಂಬಂಧಪಟ್ಟದೆಯೋ ಆ ಆದೇಶವನ್ನು ಅರ್ಜಿದಾರನಿಗೆ ತಿಳಿಸಿದ ದಿನಾಂಕದಿಂದ ಆರು ತಿಂಗಳೊಳಗೆ ಸಲ್ಲಿಸತಕ್ಕದ್ದು ಮತ್ತು ಅರ್ಜಿಯನ್ನು (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಶಕ್ತಗೊಳಿಸಿದ ಅಧಿಕಾರಿಯನ್ನು ಹೊರತುಪಡಿಸಿ ಇತರೆ ಯಾವನೇ ವ್ಯಕ್ತಿ ಸಲ್ಲಿಸಿರುವಲ್ಲಿ ಅದು ಆ ಅಪೀಲಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ್ದ ಫೀಜಿಗೆ ಸಮನಾದ ಫೀಜಿನೊಂದಿಗೆ ಇರತಕ್ಕದ್ದು:

ಪರಂತು ಪುನರ್ ಅವಲೋಕನಕ್ಕಾಗಿನ ಆ ಅರ್ಜಿಯು ಯಾವ ಆದೇಶಕ್ಕೆ ಸಂಬಂಧಪಟ್ಟಿದೆಯೋ ಆ ಆದೇಶವನ್ನು ಅರ್ಜಿದಾರನಿಗೆ ತಿಳಿಸಿದ ದಿನಾಂಕದಿಂದ ತೊಂಬತ್ತು ದಿವಸಗಳೊಳಗೆ ಸಲ್ಲಿಸಿದ್ದರೆ ಆ ಅರ್ಜಿಯು ಆ ಅಪೀಲಿಗೆ ಸಂಬಂಧಿಸಿದಂತೆ ಸಂದಾಯ ಮಾಡಿರುವಂಥ ಅರ್ಧದಷ್ಟು ಫೀಜಿನೊಂದಿಗೆ ಇರತಕ್ಕದ್ದು.

(8) ದಾಖಲೆಯಿಂದ ಸ್ಪಷ್ಟವಾಗುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ ಅಪೀಲು ನ್ಯಾಯಾಧೀಕರಣವು (5)ನೇ ಉಪ–ಪ್ರಕರಣದ ಅಥವಾ (7)ನೇ ಉಪ–ಪ್ರಕರಣದ ಮೇರೆಗೆ ಅದು ಮಾಡಿದ ಯಾವುದೇ ಆದೇಶದ ದಿನಾಂಕದಿಂದ ಐದು ವರ್ಷಗಳೊಳಗೆ ಯಾವುದೇ ಕಾಲದಲ್ಲಿ ಅಂಥ ಆದೇಶವನ್ನು ತಿದ್ದುಪಡಿ ಮಾಡಬಹುದು:

ಪರಂತು, ಈ ಉಪ–ಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು ಆ ಆದೇಶದಿಂದ ಬಾಧಿತರಾದ ಉಭಯ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಸವನ್ನು ಕೊಡದೆಯೇ ಮಾಡತಕ್ಕದ್ದಲ್ಲ.

(9) ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಲ್ಲಿ ಉಪಬಂಧಿಸಿರುವಂತೆ ಹೊರತು ಅಪೀಲು ನ್ಯಾಯಾಧೀಕರಣವು ಅಪೀಲು ಅಥವಾ ಪುನರ್‌ಅವಲೋಕನಕ್ಕೆ ಸಂಬಂಧಿಸಿದ ಯಾವನೇ ಪಕ್ಷಕಾರನಿಗೆ ಖರ್ಚುಗಳನ್ನು ಕೊಡಲು ಅಧಿಕಾರವನ್ನು ಹೊಂದಿರತಕ್ಕದ್ದಲ್ಲ.

(10) (5)ನೇ ಉಪ–ಪ್ರಕರಣ ಅಥವಾ (8) ನೇ ಉಪ–ಪ್ರಕರಣದ ಮೇರೆಗೆ ಅಪೀಲು ನ್ಯಾಯಾಧೀಕರಣವು ಮಾಡಿದ ಪ್ರತಿಯೊಂದು ಆದೇಶವನ್ನು ಅಪೀಲುದಾರ, ಪ್ರತಿ ಅರ್ಜಿದಾರ ಯಾವ ಪ್ರಾಧಿಕಾರದ ಆದೇಶದ ಮೇಲೆ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಪ್ರಾಧಿಕಾರ ಮತ್ತು ಕಮೀಷನರನಿಗೆ ತಿಳಿಸತಕ್ಕದ್ದು.

**11 ಹೊಸ 9ಕ, 9ಖ ಮತ್ತು 9ಗ ಪ್ರಕರಣಗಳ ಸೇರ್ಪಡೆ:–** ಮೂಲ ಅಧಿನಿಯಮದ 9ನೇ ಪ್ರಕರಣದ ತರುವಾಯ ಈ ಕೆಳಕಂಡ ಹೊಸ ಪ್ರಕರಣಗಳನ್ನು ಸೇರಿಸತಕ್ಕದ್ದು ಮತ್ತು ಅವುಗಳನ್ನು ಯಾವಾಗಲೂ ಸೇರಿಸಲಾಗಿತ್ತೆಂದು ಭಾವಿಸತಕ್ಕದ್ದು ಎಂದರೆ;

**9ಕ. ತೆರಿಗೆಯ ಕಾನೂನು ಬಾಹಿರ ಅಥವಾ ಹೆಚ್ಚಿನ ಸಂಗ್ರಹಣೆಯ ಮುಟ್ಟುಗೋಲು:–** 6ಕ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರಿಯು ಈ ಅಧಿನಿಯಮದ ಮೇರೆಗೆ ನಿಯಮಿಸಿದ ದರಗಳಿಗಿಂತ ಹೆಚ್ಚಿಗೆಯಾಗಿ ಮಾಲೀಕನು ಪ್ರೇಕ್ಷಕರಿಂದ ಮನೋರಂಜನಾ ತೆರಿಗೆಯ ರೂಪದಲ್ಲಿ ಅಥವಾ ಮನೋರಂಜನಾ ತೆರಿಗೆಯ ರೂಪದಲ್ಲಿ ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸಲಾಗಿದೆ ಎಂದು ಮನದಟ್ಟಾಗುವಲ್ಲಿ ಅವನು ಕಾನೂನು ಬಾಹಿರನಾಗಿ ಸಂಗ್ರಹಿಸಿದಂತಹ ಹೆಚ್ಚಿನ ಮೊಬಲಗನ್ನು ದಂಡನೆಯ ರೂಪದಲ್ಲಿ ಬರಹದಲ್ಲಿನ ಆದೇಶದ ಮೂಲಕ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು:

ಪರಂತು ಈ ಪ್ರಕರಣದ ಮೇರೆಗೆ ಕ್ರಮವನ್ನು ಕೈಗೊಳ್ಳುವುದಕ್ಕೆ ಮುಂಚೆ ಮಾಲೀಕನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಡತಕ್ಕದ್ದು.

**9ಖ. ಫರ್ಮುಗಳ ಹೊಣೆಗಾರಿಕೆ:–** (1)ಈ ಅಧಿನಿಯಮದ ಮೇರೆಗೆ ಯಾವುದೇ ಫರ್ಮು ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರುವಲ್ಲಿ ಆ ಫರ್ಮು, ಆ ಫರ್ಮಿನ ಪ್ರತಿಯೊಬ್ಬ ಪಾಲುದಾರನು ಅಂಥ ಸಂದಾಯಕ್ಕೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರನಾಗಿರತಕ್ಕದ್ದು.

(2) ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾದ ಫರ್ಮು ವಿಘಟಿತವಾದಾಗ ಮನೋರಂಜನಾ ತೆರಿಗೆಯ ನಿರ್ಧರಣೆಯನ್ನು ಆ ಫರ್ಮಿನ ಯಾವುದೇ ವಿಘಟನೆಯು ಆಗಿಲ್ಲದಿದ್ದರೆ ಹೇಗೋ ಹಾಗೆ ಮಾಡತಕ್ಕದ್ದು ಮತ್ತು ಆ ವಿಘಟನೆಯ ಕಾಲದಲ್ಲಿ ಫರ್ಮಿನ ಪಾಲುದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿ ಮತ್ತು ಮರಣ ಹೊಂದಿರುವ ವ್ಯಕ್ತಿಯ ಕನೂನುಸಮ್ಮತ ಪ್ರತಿನಿಧಿಯು ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರನಾಗಿರತಕ್ಕದ್ದು.

**9ಗ. ವ್ಯವಹಾರದ ವರ್ಗಾವಣೆಯ ತರುವಾಯ ಹೊಣೆಗಾರಿಕೆ:–** (1) ಈ ಅಧಿನಿಯಮದ ಮೇರೆಗೆ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಚಲನಚಿತ್ರಮಂದಿರದ ಅಥವಾ ಮನೋರಂಜನೆಯ ಇತರ ಸ್ಥಳದ ಮಾಲೀಕನ ಒಡೆತನವನ್ನು ವರ್ಗಾಯಿಸಿದಾಗ ವರ್ಗಾವಣೆಕಾರ ಮತ್ತು ವರ್ಗಾವಣೆಯನ್ನು ಪಡೆದವನು ಅಂತಹ ಚಲನಚಿತ್ರ ಮಂದಿರ ಅಥವಾ ಮನೋರಂಜನೆಯ ಸ್ಥಳಕ್ಕೆ ಸಂಬಂಧಿಸಿದಂತೆ ವರ್ಗಾವಣೆಯ ಕಾಲದಲ್ಲಿ ಸಂದಾಯವಾಗದೇ ಉಳಿದಿರುವಂತಹ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರನಾಗಿರತಕ್ಕದ್ದು ಮತ್ತು ವರ್ಗಾವಣೆ ಪಡೆದವನಿಂದ ವಸೂಲಿ ಮಾಡುವ ಉದ್ದೇಶಕ್ಕಾಗಿ ಅಂಥ ವರ್ಗಾವಣೆ ಪಡೆದವನನ್ನು ಈ ಅಧಿನಿಯನದ ಮೇರೆಗೆ ಬಾಕಿಯಿರುವ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಮಾಲೀಕನೆಂಬುದಾಗಿ ಭಾವಿಸತಕ್ಕದ್ದು.

(2) ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರುವ ಅವಿಭಕ್ತ ಹಿಂದೂ ಕುಟುಂಬ ಅಥವಾ ಅಳಿಯ ಸಂತಾನ ಕುಟುಂಬವು ವಿಭಜನೆಯಾದಾಗ ಮನೋರಂಜನಾ ತೆರಿಗೆಯ ನಿರ್ಧರಣೆಯನ್ನು ಕುಟುಂಬದ ಯಾವುದೇ ವಿಭಜನೆ ಆಗಿಲ್ಲದಿದ್ದರೆ ಹೇಗೋ ಹಾಗೆ ಮಾಡತಕ್ಕದ್ದು ಮತ್ತು ವಿಭಜನೆಗೆ ಮುಂಚೆ ಕುಟುಂಬದ ಸದಸ್ಯನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ನಿರ್ಧರಿಸಿದ ಅಥವಾ ವಿಧಿಸಿದ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಲು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರನಾಗಿರತಕ್ಕದ್ದು.

**ವಿವರಣೆ:–** ಈ ಪ್ರಕರಣ ಮತ್ತು 9ಕ ಮತ್ತು 9ಖ ಪ್ರಕರಣದ ಉದ್ದೇಶಗಳಿಗಾಗಿ "ಮನೋರಂಜನಾ ತೆರಿಗೆಯು" ಈ ಅಧಿನಿಯಮದ ಮೇರೆಗೆ ಬಾಕಿಯಿರುವ ಅಧಿಭಾರ ಚಲನಚಿತ್ರ ಪ್ರದರ್ಶನಗಳ ಮೇಲಿನ ತೆರಿಗೆ, ದಂಡ ಅಥವಾ ಇತರ ಮೊಬಲಗನ್ನು ಒಳಗೊಳ್ಳುತ್ತದೆ.

**12. 10ನೇ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿ (1)ನೇ ಉಪ–ಪ್ರಕರಣದಲ್ಲಿ,—

(ಕ) (ಕ) ಖಂಡದಲ್ಲಿ "ಪ್ರವೇಶಿಸಬಹುದು" ಎಂಬ ಪದದ ತರುವಾಯ "ಮತ್ತು ಅವಶ್ಯವಿದ್ದರೆ ಶೋಧಿಸಬಹುದು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಖ) (ಕ) ಖಂಡದ ಪರಂತುಕದಲ್ಲಿ "ಮೂವತ್ತು ದಿನಗಳಿಗಿಂತ" ಎಂಬ ಪದಗಳಿಗೆ ಬದಲಾಗಿ "ಅರವತ್ತು ದಿನಗಳಿಗಿಂತ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(2) (3)ನೇ ಉಪ–ಪ್ರಕರಣದಲ್ಲಿ "ಐದು ನೂರು ರೂಪಾಯಿಗಳಿಗೆ" ವಿಸ್ತರಿಸಬಹುದಾದ ಎಂಬ ಪದಗಳಿಗೆ ಬದಲಾಗಿ "ಐದು ನೂರು ರೂಪಾಯಿಗಳಿಗಿಂತ ಕಡಿಮೆಯಲ್ಲದಂಥ ಆದರೆ ಎರಡು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

**13. 18ನೇ ಪ್ರಕರಣದ ತಿದ್ದುಪಡಿ:–** ಮೂಲ ಅಧಿನಿಯಮದ 18ನೇ ಪ್ರಕರಣದಲ್ಲಿ 2ನೇ ಉಪ–ಪ್ರಕರಣದಲ್ಲಿ (ಐ) ಖಂಡವನ್ನು ಲೋಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಆರ್. ಚಾಮಯ್ಯ,**

ಸರ್ಕಾರದ ಕಾರ್ಯದರ್ಶಿ,

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

## ಕರ್ನಾಟಕ ಅಧಿನಿಯಮ 1985ರ ಸಂಖ್ಯೆ 22

**(1985ರ ಸೆಪ್ಟಂಬರ್ 6ನೇ ದಿವಸದಂದು ಕರ್ನಾಟಕ ವಿಶೇಷ ರಾಜಪತ್ರದಲ್ಲಿ ಮೊದಲು ಪ್ರಕಟಿತವಾಗಿದೆ)**

## ಕರ್ನಾಟಕ ಮನೋರಜನಾ ತೆರಿಗೆ (ತಿದ್ದಿಪಡಿ) ಅಧಿನಿಯಮ, 1985

(1985ರ ಸೆಪ್ಟೆಂಬರ್ ಎರಡನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ 1958ನ್ನು ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ 1958 (ಕರ್ನಾಟಕ ಅಧಿನಿಯಮ 1958ರ 30) ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು ಮತ್ತು ಪ್ರಾರಂಭ:–** (1)ಈ ಅಧಿನಿಯಮವನ್ನು ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ಅಧಿನಿಯಮ, 1985 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು, ಜಾರಿಗೆ ಬರತಕ್ಕದ್ದು.

**2. 3ಗ ಪ್ರಕರಣದ ತಿದ್ದುಪಡಿ:–** (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದೂ ಉಲ್ಲೇಖಿತವಾಗುವ) ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ 1958ರ ಕರ್ನಾಟಕ ಅಧಿನಿಯಮ 1958ರ 30) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಿದೆ) 3ಗ ಪ್ರಕರಣದಲ್ಲಿ,–

(1) (1)ನೇ ಉಪ–ಪ್ರಕರಣಕ್ಕೆ ಬದಲಾಗಿ ಈ ಕೆಳಕಂಡುದುದನ್ನು 1986ರ ಜನವರಿ ಮೊದಲನೇ ದಿವಸದಿಂದ ಪರಿಣಾಮವುಳ್ಳಂತೆ ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(1) 3 ಮತ್ತು 3ಕ ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ,

(ಕ) ಕರ್ನಾಟಕ ರಾಜ್ಯದಲ್ಲಿ ತಯಾರಿಸಿದ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ಸಂದಾಯಮಾಡಬೇಕಾದ ಮನೋರಂಜನಾ ತೆರಿಗೆಯ ದರಗಳು ಅದರಲ್ಲಿ ನಿರ್ದಿಷ್ಟಪಡಿಸಿದ ದರಗಳ ಅರ್ಧದಷ್ಟಾಗಿರತಕ್ಕದ್ದು.

(ಖ) ಕರ್ನಾಟಕ ರಾಜ್ಯದ ಹೊರಗಡೆ ತಯಾರಿಸಿದ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ತೆರಿಗೆಯ ದರಗಳು, ಕರ್ನಾಟಕ ರಾಜ್ಯದಲ್ಲಿ ಅಂತಹ ಚಲನಚಿತ್ರವು ಮೊದಲು ಬಿಡುಗಡೆಯಾದ ದಿನಾಂಕದಿಂದ ಆರು ತಿಂಗಳುಗಳ ಅವಧಿಯವರೆಗೆ ಅದರಲ್ಲಿ ನಿರ್ದಿಷ್ಟಪಡಿಸಿದ ದರಗಳ ಅರ್ಧದಷ್ಟಾಗಿರತಕ್ಕದ್ದು, ಆದಾಗ್ಯೂ, 1986ರ ಡಿಸೆಂಬರ್ 31ನೇ ದಿನಾಂಕವನ್ನು ಮೀರಿ ಇರತಕ್ಕುದಲ್ಲ.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ,–

(ಕ) ಕರ್ನಾಟಕ ರಾಜ್ಯದಲ್ಲಿ ಮೊದಲು ಬಿಡುಗಡೆಯಾದ ದಿನಾಂಕವು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕವಾಗಿರತಕ್ಕದ್ದು.

(ಖ) ಮನೋರಂಜನಾ ತೆರಿಗೆಯು (3ಕ) ಪ್ರಕರಣದ ಮೇರೆಗೆ ವಿಧಿಸಬಹುದಾದ ಅಧಿಭಾರವನ್ನು ಒಳಗೊಳ್ಳುತ್ತದೆ.

(2) (1)ನೇ ಉಪ-ಪ್ರಕರಣದ ತರುವಾಯ ಈ ಕೆಳಕಂಡುದನ್ನು ಸೇರಿಸತಕ್ಕದ್ದು. ಅಂದರೆ:-

"(1) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, 1981ರ ಏಪ್ರಿಲ್ ಮೊದಲನೇ ದಿವಸದ ತರುವಾಯ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರವು ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ಕೊಟ್ಟ ಅತ್ಯುತ್ತಮ ವಿಶೇಷ ಚಲನಚಿತ್ರ ಪ್ರಶಸ್ತಿ ಅಥವಾ ರಾಜ್ಯ ಸರ್ಕಾರವು ಅಧಿಸೂಚನೆ ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆದ ಪ್ರಶಸ್ತಿಯನ್ನು ಪಡೆದಿರುವಲ್ಲಿ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ ಯಾವುದೇ ಮನೋರಂಜನಾ ತೆರಿಗೆಯನ್ನು ಸಂದಾಯ ಮಾಡಬೇಕಾಗಿಲ್ಲ."

**3. 4ನೇ ಪ್ರಕರಣದ ತಿದ್ದುಪಡಿ:-** ಮೂಲ ಅಧಿನಿಯಮದ 4ನೇ ಪ್ರಕರಣವನ್ನು ಅದರ (1)ನೇ ಉಪ-ಪ್ರಕರಣ ಎಂದು ಪುನರ್ ಅಂಕಿಸತಕ್ಕದ್ದು ಮತ್ತು ಹಾಗೆ ಪುನರ್ ಅಂಕಿತವಾದ (1)ನೇ ಉಪ-ಪ್ರಕರಣದ ತರುವಾಯ, ಈ ಕೆಳಕಂಡದನ್ನು ಸೇರಿಸತಕ್ಕದ್ದು, ಎಂದರೆ:-

"(2) (1)ನೇ ಉಪ-ಪ್ರಕರಣದ ಮೇರೆಗೆ ಸಂದಾಯವಾಗಬೇಕಾದ ತೆರಿಗೆಯನ್ನು ಚಲನಚಿತ್ರ ಮಂದಿರದ ಯಾವನೇ ಮಾಲೀಕನೂ ಮನೋರಂಜನೆಗಾಗಿ ಚಲನಚಿತ್ರ ಮಂದಿರದೊಳಕ್ಕೆ ಪ್ರವೇಶ ಪಡೆದ ವ್ಯಕ್ತಿಗಳಿಂದ ಸಂಗ್ರಹಿಸತಕ್ಕುದಲ್ಲ ಅಥವಾ ಸಂಗ್ರಹಿಸುವಂತೆ ಮಾಡತಕ್ಕದ್ದಲ್ಲ."

**4. 4ಕ ಪ್ರಕರಣದ ತಿದ್ದುಪಡಿ:-** ಮೂಲ ಅಧಿನಿಯಮದ 4ಕ ಪ್ರಕರಣದಲ್ಲಿ,

(1) ಕೋಷ್ಟಕವನ್ನು ಹೊರತುಪಡಿಸಿ, (1)ನೇ ಉಪ-ಪ್ರಕರಣದಲ್ಲಿ,-

(ಕ) "ಇಪ್ಪತ್ತೈದು ಸಾವಿರ" ಎಂಬ ಪದಗಳಿಗೆ ಬದಲಾಗಿ "ಒಂದು ಲಕ್ಷ" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಖ) ಮೂರನೇ ಪರಂತುಕಕ್ಕೆ ಬದಲಾಗಿ, ಈ ಕೆಳಕಂಡದನ್ನು 1986ನೇ ಜನವರಿಯ ಮೊದಲನೇ ದಿವಸದಿಂದ ಪರಿಣಾಮವುಳ್ಳಂತೆ ಪ್ರತ್ಯಾಯೋಜಿಸತಕ್ಕದ್ದು, ಎಂದರೆ:-

"ಅದು ಅಲ್ಲದೆ-

(i) ಕರ್ನಾಟಕ ರಾಜ್ಯದಲ್ಲಿ ತಯಾರಿಸಿದ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಯ ದರಗಳು (1)ನೇ ಉಪ-ಪ್ರಕರಣದ ಮೇರೆಗಿನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ದರಗಳ ಅರ್ಧದಷ್ಟಾಗಿರತಕ್ಕದ್ದು.

(ii) ಕರ್ನಾಟಕ ರಾಜ್ಯದ ಹೊರಗಡೆ ತಯಾರಿಸಿದ ಕನ್ನಡ, ಕೊಡವ, ಕೊಂಕಣಿ ಅಥವಾ ತುಳು ಚಲನಚಿತ್ರ ಪ್ರದರ್ಶನದ ಸಂದರ್ಭದಲ್ಲಿ ಸಂದಾಯ ಮಾಡಬೇಕಾದ ಮನೋರಂಜನಾ ತೆರಿಗೆಯ ದರಗಳು, 3ಗ ಪ್ರಕರಣದ ಮೇರೆಗೆ ಅಧಿಸೂಚಿಸಿದಂತೆ ಕರ್ನಾಟಕ ರಾಜ್ಯದಲ್ಲಿ ಅಂಥ ಚಿತ್ರವನ್ನು ಮೊದಲು ಬಿಡುಗಡೆಮಾಡಿದ ದಿನಾಂಕದಿಂದ ಆರು ತಿಂಗಳ ಅವಧಿಯವರೆಗೆ (1)ನೇ ಉಪ-ಪ್ರಕರಣದ ಮೇರೆಗಿನ ಕೋಷ್ಟಕದಲ್ಲಿ

ನಿರ್ದಿಷ್ಟಪಡಿಸಿದ ದರಗಳ ಅರ್ಧದಷ್ಟಾಗಿರತಕ್ಕದ್ದು. ಆದಾಗ್ಯೂ ಅದು 1986ರ ಡಿಸೆಂಬರ್ ಮೂವತ್ತೊಂದನೇ ದಿನಾಂಕವನ್ನು ಮೀರಿ ಇರತಕ್ಕದ್ದಲ್ಲ.

(2) (5)ನೇ ಉಪ-ಪ್ರಕರಣದ ತರುವಾಯ ಈ ಕೆಳಕಂಡ ಉಪ-ಪ್ರಕರಣವನ್ನು ಸೇರಿಸತಕ್ಕದ್ದು ಎಂದರೆ:

**"**ಕರ್ನಾಟಕ ಚಲನಚಿತ್ರಗಳ (ನಿಯಂತ್ರಣ) ಅಧಿನಿಯಮ 1964ರ ಮೇರೆಗೆ ಮನೋರಂಜನೆಯನ್ನು ಮಾಲೀಕನು ನಡೆಸಲು ಅನುಮತಿಸಲಾದ ಎಲ್ಲಾ ಪ್ರದರ್ಶನಗಳನ್ನು, ಸ್ಥಳೀಯ ಪ್ರಾಧಿಕಾರ ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾವುದೇ ಇತರ ಪ್ರಾಧಿಕಾರದಿಂದ ಯಾವುದೇ ಅಂಥ ಪ್ರದರ್ಶನವನ್ನು ನಡೆಸಲಾಗಿಲ್ಲವೆಂದು ನಿಯಮಿಸಿದ ನಮೂನೆಯಲ್ಲಿ ಪ್ರಮಾಣಪತ್ರವನ್ನು ಅವನ ವಿವರ ಪಟ್ಟಿಕೆಗಳೊಂದಿಗೆ ಅವನು ಹಾಜರುಪಡಿಸಿದ ಹೊರತು ಅವನು ಎಂದು ಪೂರ್ವ ಭಾವನೆ ಮಾಡತಕ್ಕದ್ದು**"**

**5. 4ಖ ಪ್ರಕರಣದ ತಿದ್ದುಪಡಿ:** ಮೂಲ ಅಧಿನಿಯಮದ 4ಖ ಪ್ರಕರಣದಲ್ಲಿ **"**ಒಂದು ನೂರು**"** ಎಂಬ ಪದಗಳಿಗೆ ಬದಲಾಗಿ **"**ಒಂದು ಸಾವಿರ**"** ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ.ಆರ್. ಚಾಮಯ್ಯ,**

ಸರ್ಕಾರದ ಕಾರ್ಯದರ್ಶಿ,

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು. WD- /Vikasa Soudha/DTP-C6